
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ನವೆಂಬರ್ 18, 2009 ರೂ. 12/-

ಅನಂತಮೂರ್ತಿಗಳು ಹೀಗೇಕೆ ಮಾಡುತ್ತಾರೆ?



ಮಾಡಿದ್ದುಣ್ಣೊ ಮಾರಾಯ

ಯಡ್ಡಿ ಕೊರಳಿಗೆ ಶೋಭಾ ಉರುಳು

ಜಗನ್ ಅತೃಪ್ತಿ ಯಡ್ಡಿಗೆ ಬತ್ತಿ

ಶೆಟ್ಟರ್ ಸಡಗರ

ಯಡ್ಡಿಗೆ RSS ದೋಖಾ

ಪ್ರತಿ ಶಾಸಕನಿಗೆ ಹತ್ತು ಕೋಟಿ

ಮುಗಿದ ಅಧ್ಯಾಯ?

ಅನಂತಮೂರ್ತಿಗಳು ಹೀಗೇಕೆ ಮಾಡುತ್ತಾರೆ?

ಅನಂತಮೂರ್ತಿಗಳು ಆಗಾಗ ಈ ಉದಾರವಾದಿ ನೆಲೆಯಿಂದ ಹೊರಬಂದರೂ ಅವರ ತಾತ್ವಿಕ ನೆಲೆ ಗಟ್ಟಿ ಮಾತ್ರ ಬದಲಾಗುತ್ತಿಲ್ಲ. ಹೀಗಾಗಿ ಪ್ರಜಾತಂತ್ರವನ್ನು ಸಾರಭೂತ ಅಧಿಕಾರ ರಚನೆಯಾಗಿಯಲ್ಲದೆ ಕೇವಲ ಆಡಳಿತ ಸಂಸ್ಕೃತಿಯನ್ನಾಗಿ ಮಾತ್ರ ನೋಡುವಂತಾಗಿದೆ. ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನು ಸಹ ಕೇವಲ ರೂಪದಲ್ಲಿ ಮಾತ್ರ ಗ್ರಹಿಸಿ ಸಾರವನ್ನು ನೋಡದಂತೆ ಮಾಡಿದೆ. ಹೀಗಾಗಿಯೇ ಅವರಿಗೆ ರೆಡ್ಡಿ ಮತ್ತು ಯಡ್ಡಿ ನಡುವೆ ಸಾರಭೂತ ವ್ಯತ್ಯಾಸವಿದೆ ಎಂದೆನಿಸುವಂತಾಗಿದೆ. ಹೀಗಾಗಿ ಇದು ಅನಂತಮೂರ್ತಿಗಳ ದೃಷ್ಟಿಕೋನದಲ್ಲೇ ಇರುವ ದೋಷವಲ್ಲವೇ?

ಅಸಾಮಾನ್ಯ ಸಾಹಿತಿಗಳೂ, ಸಮಾಜವಾದಿಗಳೂ, ನಾಡಿನ ಕೆಲವೇ ಕೆಲವು ಆರೋಗ್ಯಕರ ಮತ್ತು ಚಿಂತನಶೀಲ ಮನಸ್ಸುಗಳಲ್ಲಿ ಅತಿಮುಖ್ಯರೂ ಆಗಿರುವ ಯು.ಆರ್. ಅನಂತಮೂರ್ತಿಗಳು ಈಗ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಗಣಿ ರೆಡ್ಡಿಗಳು ಮುಖ್ಯಮಂತ್ರಿ ಯಡಿಯೂರಪ್ಪನವರ ವಿರುದ್ಧ ನಡೆಸುತ್ತಿರುವ ಬಂಡಾಯವನ್ನು ಅದಿರುಗಳ್ಳತನದಿಂದ ಪಡೆದಿರುವ ಹಣಬಲವು ಪ್ರಜಾತಾಂತ್ರಿಕ ಶಕ್ತಿಯ ವಿರುದ್ಧ ನಡೆಸುತ್ತಿರುವ ಬಂಡಾಯವೆಂದು ವಿವರಿಸಿಕೊಂಡಿರುವ ಅನಂತಮೂರ್ತಿಗಳು ಈ ಯುದ್ಧದಲ್ಲಿ ತಾವು ಯಡಿಯೂರಪ್ಪನವರ ಪರ ಎಂಬ ನಿಲುವು ತಳೆದಿದ್ದಾರೆ. "ಈ ನೆಲದ ಅದಿರು ಮಾರಿ ದುಡ್ಡು ಮಾಡುವವರು ನಿರ್ನಾಮವಾಗಬೇಕು. ಇಂಥವರ ಜೊತೆ ಸೇರಿ ದುಡ್ಡು ಕೊಟ್ಟು ಶಾಸಕರನ್ನು ಖರೀದಿಸಿ ಯಡಿಯೂರಪ್ಪ ಮುಖ್ಯಮಂತ್ರಿಯಾದರು. ಈಗ ಅವರಿಗೆ ತಪ್ಪಿನ ಅರಿವಾಗಿದೆ. ಗಣಿದಣಿಗಳು ಪ್ರಜಾಪ್ರಭುತ್ವವನ್ನು ಕೊಂದಿದ್ದಾರೆ. ಅವರನ್ನು ನಿರ್ನಾಮ ಮಾಡುವ ಕೆಲಸಕ್ಕೆ ಯಡಿಯೂರಪ್ಪ ಕೈಹಾಕಿದ್ದಾರೆ. ಹಾಗಾಗಿ ಅವರಿಗೆ ನನ್ನ ನೈತಿಕ ಬೆಂಬಲ ಸೂಚಿಸುತ್ತೇನೆ" ಎಂದು ಘಂಟಾಘೋಷವಾಗಿ ಹೇಳಿಕೆ ನೀಡಿದ್ದಾರೆ.

ತಮ್ಮ ಈ ಕಷ್ಟ ಕಾಲದಲ್ಲಿ ಆರೆಸ್ಸೆಸ್ ನಿಷ್ಠರಾಗಲೀ, ತಮ್ಮ ಕೃಪಾಪೋಷಿತರಾಗಲೀ ಯಾರೂ ತಮ್ಮ ಬೆಂಬಲಕ್ಕೆ ಇಲ್ಲದೆ ಏಕಾಂಗಿಯಾಗಿ ಕಂಗಾಲಾಗಿದ್ದ ಯಡಿಯೂರಪ್ಪನವರ ಮುಖದಲ್ಲಿ ಅನಿರೀಕ್ಷಿತ ಮೂಲದಿಂದ ಒದಗಿಬಂದ ಈ ಬೆಂಬಲದಿಂದ ಒಂದೆರಡು ನಿಮಿಷಗಳ ಕಾಲವಾದರೂ ಮಂದಹಾಸ ಮೂಡಿತ್ತು. ಇದೇ ಖುಷಿಯಲ್ಲಿ ಯಡಿಯೂರಪ್ಪನವರು ನವಂಬರ್ 1ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಪ್ರೇಕ್ಷಕರ ಸಾಲಿನಲ್ಲಿ ಕೂತಿದ್ದ ಅನಂತಮೂರ್ತಿಗಳನ್ನು ಕರೆದು ತಮ್ಮ ಪಕ್ಕಕ್ಕೆ ಕೂಡಿಸಿಕೊಂಡಿದ್ದಲ್ಲದೆ "ಅನಂತಮೂರ್ತಿಗಳ ನಿರೀಕ್ಷೆಗೆ ತಕ್ಕಂತೆ ನಡೆದುಕೊಳ್ಳುವುದಾಗಿ" ಭರವಸೆ ನೀಡಿದ್ದಾರೆ!!!





ಗಣಿ ರೆಡ್ಡಿಗಳು ಮತ್ತು ಯಡಿಯೂರಪ್ಪನವರ ನಡುವೆ ನಡೆಯುತ್ತಿರುವ ಈ ಸಮರವು ಪ್ರಜಾಪ್ರಭುತ್ವದ ಉಳಿವಿಗಾಗಿ ಯಡಿಯೂರಪ್ಪನವರು ನಡೆಸುತ್ತಿರುವ ಸಮರವೆಂದೂ, ಈಗ ಯಡಿಯೂರಪ್ಪನವರಿಗೆ ತಮ್ಮ ತಪ್ಪಿನ ಅರಿವಾಗಿದೆ ಎಂದೂ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ಅನಂತಮೂರ್ತಿಗಳು ನೀಡುತ್ತಿರುವ ವ್ಯಾಖ್ಯಾನವನ್ನು ಪಂಡಿತರು ಬಿಡಿ, ಪಾಮರರೂ ಒಪ್ಪಲು ಸಾಧ್ಯವಿಲ್ಲ. ಯಾಕೆಂದರೆ ಯಡಿಯೂರಪ್ಪನವರು ಗಣಿ ರೆಡ್ಡಿಗಳ ವಿರುದ್ಧ ಕಠಿಣ ನಿಲುವು ತಳೆದಿರುವುದು "ಈ ನೆಲದ ಅದಿರು ಮಾರಿ ದುಡ್ಡು ಮಾರುವವರು ನಿರ್ನಾಮ ವಾಗಬೇಕೆಂಬ" ಉದ್ದೇಶದಿಂದೇನೂ ಅಲ್ಲ. ವಾಸ್ತವವಾಗಿ ಬಿಜೆಪಿ ಪಕ್ಷ ಈ ಬಾರಿ ಚುನಾವಣೆಯಲ್ಲಿ ಗೆದ್ದದ್ದೇ ಅದಿರು ಮಾರಿ ಬಂದ ದುಡ್ಡಿನಿಂದ! ಆ ದುಡ್ಡನ್ನು ಯಾವ ನೈತಿಕ ದ್ವಂದ್ವಗಳೂ ಇಲ್ಲದಂತೆ ನೀರಿ ನಂತೆ ಚೆಲ್ಲಿ ಮತದಾರರನ್ನು ಮತ್ತು ಪ್ರಜಾ ತಂತ್ರವನ್ನು ಭ್ರಷ್ಟಗೊಳಿಸುವ ಮೂಲಕ. ಇದು ಅನಂತಮೂರ್ತಿಗಳಿಗೆ ಗೊತ್ತಿಲ್ಲವೇ? ಆ ಬಗ್ಗೆ ಅನಂತಮೂರ್ತಿಗಳಿಗೆ ಮೊದಲೂ ಆಕ್ಷೇಪಣೆ ಇತ್ತೆಂಬುದು ನಿಜವೇ ಆದರೂ ಇದ್ದಕ್ಕಿದ್ದಂತೆ ಯಡಿಯೂರಪ್ಪನವರಿಗೆ ನಾಡಿನ ಅದಿರಿನ ಬಗೆಗೆ ಕಾಳಜಿ ಬಂದಿತೆಂದು ಅವರು ನಂಬುತ್ತಿರುವುದಕ್ಕೆ ಕಾರಣವೇನು?

ಅನಂತಮೂರ್ತಿಗಳ ಈ ನಿಲುವಿಗೆ ಅವರ ಅವಕಾಶವಾದಿತನವೇ ಕಾರಣ ಅಥವಾ ಅಧಿಕಾರಸ್ಥರ ಜೊತೆ ಸ್ನೇಹದಿಂದಿರಬೇಕೆಂಬ ಅವರ ಹಂಬಲವೇ ಕಾರಣ ಎಂದು ವ್ಯಾಖ್ಯಾನಿಸುವುದು ಸರಿಯಲ್ಲ. ಏಕೆಂದರೆ ಅನಂತಮೂರ್ತಿಗಳು ತಾವು ನಂಬಿದ ಸತ್ಯಕ್ಕಾಗಿ ಅಧಿಕಾರಸ್ಥರನ್ನು ಎದುರು ಹಾಕಿಕೊಂಡಿರುವ ಉದಾಹರಣೆಗಳೂ ಇವೆ. ಅದೇ ರೀತಿ ಹಲವಾರು ಬಾರಿ ತಮಗೆ ತತ್‌ಕ್ಷಣಕ್ಕೆ ಅನಿಸಿದ್ದನ್ನು ಅದರ ದೂರಗಾಮಿ ಪರಿಣಾಮ ಇತ್ಯಾದಿಗಳನ್ನು ನೋಡದೆ ಹೇಳಿ ಕಷ್ಟಕ್ಕೆ ಸಿಕ್ಕಿಹಾಕಿಕೊಂಡ ಉದಾಹರಣೆಗಳೂ ಇವೆ. ಇನ್ನು ಹಲವು ಬಾರಿ ಸೈದ್ಧಾಂತಿಕ ಮತ್ತು ವೈಯಕ್ತಿಕ ನೆಲೆಗಳಲ್ಲಿ ನಿಲುವನ್ನು ತೆಗೆದುಕೊಂಡು ಕಟ್ಟಿಬದ್ಧಿದ್ದುಂಟು. ಹೀಗಾಗಿ ಅನಂತಮೂರ್ತಿಗಳ ನಿಲುವುಗಳ ಹಿಂದಿನ ನೆಲೆಗಳನ್ನೂ ವಿಮರ್ಶಿಸದೆ ಕೇವಲ ವ್ಯಕ್ತಿಯನ್ನು ವಿಮರ್ಶಿಸಿದರೆ ಯಾವ ಪ್ರಯೋಜನವೂ ಇಲ್ಲ.

ಅನಂತಮೂರ್ತಿಗಳ ನಿಲುವಿಗೆ ಮೂರು ಕಾರಣಗಳಿವೆ. 1) ಗಣಿ ರೆಡ್ಡಿಗಳು ಈ ನಾಡಿನ ಅದಿರು ಮಾರಿ ಲೂಟಿ ಮಾಡಿದ ಹಣದಿಂದ ರಾಜಕಾರಣ ಮಾಡುತ್ತಿರುವುದು. 2) ಎಷ್ಟೇ ದುಷ್ಟ ಸರ್ಕಾರವಾದರೂ ಅದು ಪ್ರಜಾತಾಂತ್ರಿಕವಾಗಿ ಆಯ್ಕೆಯಾಗಿದ್ದು ಈಗ ಒಂದು ಬಣದ ಸ್ವಾರ್ಥಕ್ಕಾಗಿ ಕೆಡುವುತ್ತಿರುವುದರಿಂದ ನಾವೀಗ ಯಡಿಯೂರಪ್ಪನವರ ಬೆಂಬಲಕ್ಕೆ ನಿಲ್ಲಬೇಕೆಂಬುದು. 3) ಈಗ ಯಡಿಯೂರಪ್ಪನವರಿಗೆ ತಮ್ಮ ತಪ್ಪಿನ ಅರಿವಾಗಿದೆ ಎನ್ನುವುದು.



ಯಡಿಯೂರಪ್ಪನವರಿಗೆ ತನ್ನ ತಪ್ಪಿನ ಅರಿವಾಗಿದೆ ಎಂಬ ತಪ್ಪು ತಿಳಿವಳಿಕೆಯನ್ನು ಬಿಟ್ಟರೆ ರೆಡ್ಡಿಗಳ ಬಗ್ಗೆ ಅನಂತಮೂರ್ತಿಗಳ ನಿಲುವಿನ ಬಗ್ಗೆ ಯಾರಿಗೂ ಆಕ್ಷೇಪವಿರಬೇಕಿಲ್ಲ. ಆದರೆ ಉಳಿದೆರಡನ್ನು ರೆಡ್ಡಿಗಿಂತ ಯಡ್ಡಿ ಮೇಲು ಎಂದು ತೀರ್ಮಾನಿಸಿ, ಯಡ್ಡಿ ಬೆಂಬಲಕ್ಕೆ ಇರಬೇಕೆಂಬ ಅನಂತಮೂರ್ತಿಗಳ ನಿಲುವೇ ಅತ್ಯಂತ ಆಕ್ಷೇಪಾರ್ಹವಾದದ್ದು.

ಏಕೆಂದರೆ ಗಣಿ ರೆಡ್ಡಿಯನ್ನು ವಿರೋಧಿಸುತ್ತಿರುವ ಯಡಿಯೂರಪ್ಪನವರ ನೆಲೆಯು ನಾಡಿನ ಸಂಪತ್ತನ್ನು ಉಳಿಸಬೇಕೆಂಬ ಕಾಳಜಿಯಿಂದ ಕೂಡಿರುವುದಲ್ಲ. ಅದು ತನ್ನ ಕುರ್ಚಿಯನ್ನು, ಅಧಿಕಾರವನ್ನು, ತನ್ನ ಕುಟುಂಬ ಮತ್ತು "ತನ್ನವರ" ಒಳಿತಿಗಾಗಿ ಮಾತ್ರ ಉಳಿಸಿಕೊಳ್ಳಬೇಕೆಂಬ ಏಕೈಕ ಕಾಳಜಿಯಿಂದ ಹೊರಟಿರುವುದು. ಪ್ರಸ್ತುತ ಭಿನ್ನಮತದ ಬಗ್ಗೆ ಕನಿಷ್ಠ ಮಾಹಿತಿ ಇರುವ ಪ್ರತಿಯೊಬ್ಬರಿಗೂ ಯಡಿಯೂರಪ್ಪ ಮತ್ತು ಗಣಿ ರೆಡ್ಡಿಗಳ ನಡುವಿನ ಜಗಳದ ಮೂಲಕಾರಣ ನಾಡಿನ ಅದಿರನ್ನು ಮಾರುವ ವಿಷಯಕ್ಕೆ ಸಂಬಂಧಿಸಿದ್ದಲ್ಲ ಎಂಬುದು ಸ್ಪಷ್ಟ.

ಯಡಿಯೂರಪ್ಪನವರ ಸರ್ಕಾರದಲ್ಲಿ ರೆಡ್ಡಿ ಬಣ ಮತ್ತು ಯಡಿಯೂರಪ್ಪನವರ ಕಿಚನ್ ಕ್ಯಾಬಿನೆಟ್ ನಡುವೆ ಯಾರಿಗೆ ಹೆಚ್ಚು ಅಧಿಕಾರ ಎಂಬ ಬಗ್ಗೆ ಮೊದಲಿಂದಲೂ ಪೈಪೋಟಿ ನಡೆಯುತ್ತಲೇ ಇತ್ತು. ಎರಡೂ ಬಣಗಳು ಹೆಚ್ಚಿನ ಅಧಿಕಾರಕ್ಕಾಗಿ ಜಗಳ ಕಾಯುತ್ತಿದ್ದದ್ದು ತಮ್ಮತಮ್ಮ ಹಣದ ಥೈಲಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿಯೇ ವಿನಃ ಜನರ ಹೊಟ್ಟೆಯನ್ನು ಹೇಗೆ ತುಂಬಿಸಬೇಕೆಂಬ ಕಾರಣಕ್ಕಾಗಿ ಅಲ್ಲ. ಒಬ್ಬರಿಗೆ ರಾಜ್ಯದ ಅದಿರು ಮಾರಿ ದುಡ್ಡು ಮಾಡಲು ಅಧಿಕಾರ ಬೇಕಿತ್ತು, ಇನ್ನೊಬ್ಬರಿಗೆ ರಾಜ್ಯದ ನೆಲವನ್ನು, ನೀರನ್ನು, ಏನನ್ನು ಸಿಗುತ್ತೋ ಎಲ್ಲವನ್ನೂ ಮಾರಿ ಹಣ ಮಾಡಲು ಅಧಿಕಾರ ಬೇಕಿತ್ತು. ಈ ರೀತಿ ಅದಿರು, ನೆಲ-ಜಲ, ಇನ್ನಿತರ ಈ ನಾಡಿನ ಎಲ್ಲಾ ಸಂಪನ್ಮೂಲವನ್ನು ಎಗ್ಗಿಲ್ಲದೆ ಮಾರಿಯೇ ಎರಡೂ ಬಣದವರು ಒಂದೂವರೆ ವರ್ಷದಲ್ಲಿ ಹತ್ತಾರು ತಲೆಮಾರುಗಳಿಗಾಗುವಷ್ಟು ಆಸ್ತಿ-ಪಾಸ್ತಿ ಮಾಡಿಟ್ಟಿದ್ದಾರೆ. ಕೆಲ ತಿಂಗಳ ಹಿಂದೆ ಈಶ್ವರಪ್ಪ ಮತ್ತು ಯಡಿಯೂರಪ್ಪನವರ ನಡುವೆ ಘರ್ಷಣೆ ಏರ್ಪಟ್ಟಿದ್ದೂ ಸಹ ತನ್ನ ಪಾಲಿನ ಶಿವಮೊಗ್ಗವನ್ನು ಸಹ ಕಬಳಿಸಲು ಯಡ್ಡಿ ಬಣ ಬಿಡುತ್ತಿಲ್ಲ ಎಂಬ ಕಾರಣಕ್ಕೇ ಎಂಬುದು ಎಲ್ಲರಿಗೂ ಗೊತ್ತು.

ರೆಡ್ಡಿಗಳು ಅತ್ಯಂತ ಪ್ರಜಾತಂತ್ರ ವಿರೋಧಿ 'ಆಪರೇಷನ್ ಕಮಲ' ಮಾಡಿ ಬಿಜೆಪಿ ಸರ್ಕಾರಕ್ಕೆ ಸಂಖ್ಯಾಸ್ಥಿರತೆ ಒದಗಿಸಿ ಕೊಟ್ಟದ್ದೂ ಅದಿರು ಮಾರಿ ಬಂದ ಹಣದಲ್ಲೇ! ಆಗ "ನಾಡ ರಕ್ಷಕ" ಯಡ್ಡಿಗಾಗಲೀ, ದೇಶಭಕ್ತ ಆರೆಸ್ಸೆಸ್ಸಿಗಾಗಲೀ ಇದರ ಬಗ್ಗೆ ಯಾವುದೇ ಮೌಲಿಕ ಆಕ್ಷೇಪಣೆ ಇರಲಿಲ್ಲ. ಈಗ ಅದೇ ದುಡ್ಡಿನಲ್ಲಿ ಆಪರೇಷನ್ ಯಡ್ಡಿ ನಡೆಯುತ್ತಿದೆಯಷ್ಟೆ - ಇದರಲ್ಲಿ ಕಾಂಗ್ರೆಸ್‌ಗೂ, ಜೆಡಿಎಸ್‌ಗೂ, ಬಿಜೆಪಿಗೂ ಯಾವುದೇ ವ್ಯತ್ಯಾಸವಿಲ್ಲ. ಒಂದೇ ವ್ಯತ್ಯಾಸವೆಂದರೆ ಕಾಂಗ್ರೆಸ್ 50 ವರ್ಷಗಳಲ್ಲಿ ಮಾಡಿದ ಭ್ರಷ್ಟಾಚಾರ ಮತ್ತು ನಾಡಲೂಟಿಯನ್ನು ಬಿಜೆಪಿ ಐದೇ ವರ್ಷಗಳಲ್ಲಿ ಮಾಡಿಮುಗಿಸಲು ಹೊರಟಿರುವುದರಲ್ಲಿ ಮಾತ್ರ. ಆದ್ದರಿಂದ ಇಡೀ ಬಿಜೆಪಿ ಪಕ್ಷವೇ ಪರಮ ಕೋಮುವಾದಿಗಳ ಪಕ್ಷ ಮಾತ್ರವಲ್ಲದೆ ನೆಲ ಮಾರುವವರ, ಅದಿರು ಮಾರುವವರ, ನಾಡು ಮಾರುವವರ ಪಕ್ಷವೇ ಆಗಿದೆ. ಇದರಲ್ಲಿ ಅದಿರು ಮಾರಿ ಬಂದ ಹಣಕ್ಕೂ, ನೆಲ-ಜಲ ಮಾರಿ ಬಂದ ಹಣಕ್ಕೂ ಯಾವ ಮೌಲಿಕ ವ್ಯತ್ಯಾಸವನ್ನು ಹುಡುಕಲು ಸಾಧ್ಯ? ಅದೇ ರೀತಿ ಅದಿರು ಮಾರುವವರಲ್ಲಿ ಇಲ್ಲದ ಯಾವ

▶▶▶15

ನೋ ಕಾಮೆಂಟ್ಸ್

"ಗಂಡಸರು ಹೆಂಗಸರಿಗಿಂತ ಶ್ರೇಷ್ಠರು ಎಂಬುದನ್ನು ಒಪ್ಪುವುದಾದರೆ ಅದೇ ತರ್ಕದನುಸಾರ ಕತ್ತೆಗಳು ಮನುಷ್ಯರಿಗಿಂತ ಶ್ರೇಷ್ಠರೆಂಬುದನ್ನೂ ಒಪ್ಪಬೇಕಾಗುತ್ತದೆ."

-ಕಮ್ಯುನಲಿಸಮ್ ಕಂಬಾಟ್‌ನ ಲೇಖನವೊಂದರಲ್ಲಿ

"ಪರ್ವೇಜ್ ರಸೂಲ್ ಕೈ ಚೀಲದಲ್ಲಿ ಯಾವ ಸ್ಫೋಟಕ ವಸ್ತುಗಳು ಇರಲಿಲ್ಲ ಎಂದು ವಿಧಿ ವಿಜ್ಞಾನ ಪ್ರಯೋಗಾಲಯ ಪೊಲೀಸರಿಗೆ ವರದಿ ನೀಡಿದೆ."

-ಪ್ರಜಾವಾಣಿ' ವರದಿ, 3ನೇ ಪುಟದಲ್ಲಿ

"ನಮ್ಮಲ್ಲಿ ಭಿನ್ನಮತ ಇಲ್ಲ, ಇರುವುದು ಯಡಿಯೂರಪ್ಪ ಬೇಕು-ಬೇಡ ಎಂಬ ಅಭಿಪ್ರಾಯ ಮಾತ್ರ."

ಯಡಿಯೂರಪ್ಪ



"ಈ ಇಡೀ ಪ್ರಹಸನದಲ್ಲಿ ಯಾರೇ ಗೆಲ್ಲಲಿ, ಸೋಲಾಗುವುದು ಮಾತ್ರ ಬಿಜೆಪಿಗೆ. ನಮ್ಮದು ಸ್ವಯಂಕೃತ ಅಪರಾಧ."

ಸುರೇಶ್ ಕುಮಾರ್, ಕಾನೂನು ಮಂತ್ರಿ

"ಶಿಸ್ತಿನ ಪಕ್ಷ ಎಂದು ಬಿಜೆಪಿಗೆ ಬಂದೆ. ಆದರೆ ಒಂದೂವರೆ ವರ್ಷದಲ್ಲೇ ಹೀಗಾಗಿದೆ. ಪಾಪಿ ಸಮುದ್ರ ಹೊಕ್ಕರೂ ಮೊಳಕಾಲುದ್ದ ನೀರು ಎಂಬಂತಾಗಿದೆ ನನ್ನ ಪರಿಸ್ಥಿತಿ!"



ಬಚ್ಚೇಗೌಡ, ಕಾರ್ಮಿಕ ಮಂತ್ರಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಶಾಸಕರೇ ರೆಸಾರ್ಟ್‌ನಿಂದ ಹೊರಬನ್ನಿ, ಇಲ್ಲದಿದ್ದರೆ ನವಂಬರ್ 7ರಿಂದ ನಾನೇ ನಿಮ್ಮ ಕ್ಷೇತ್ರಗಳಿಗೆ ತೆರಳಿ ಜನರ ಸಮಸ್ಯೆ ಆಲಿಸುತ್ತೇನೆ."

ಯಡಿಯೂರಪ್ಪ

"ಅತೃಪ್ತ ಬಣದ ಶಾಸಕರು ಹೈದರಾಬಾದಿಗೆ ಹೋಗಿರುವುದು ಅಧ್ಯಯನ ಪ್ರವಾಸಕ್ಕೆ."

-ಬಚ್ಚೇಗೌಡ

"ನನ್ನನ್ನೂ ಒಳಗೊಂಡಂತೆ ಇವತ್ತು ನಮ್ಮ ನಡುವೆ ಯಾರೂ ಬುದ್ಧಿಜೀವಿಗಳಿಲ್ಲ."

ಯು. ಆರ್. ಅನಂತಮೂರ್ತಿ

"ಹಲವಾರು ಮಹಿಳಾವಾದಿಗಳು ಇಸ್ಲಾಮಿನಲ್ಲಿರುವ ರಾಜಿರಹಿತ ಏಕದೇವೋಪಾಸನೆಯನ್ನು ಖಂಡಿಸುತ್ತಾರೆ. ಆದರೆ ದೈವಾದೇಶದ ಬಗೆಗಿನ ಪ್ರಥಮ ಪ್ರಾಶಸ್ತ್ಯದ ಬಗೆಗಿನ ಈ ಅಚಲ ಧೋರಣೆಯೇ ಮಹಿಳೆಯರನ್ನು ಸಮಾನವಾಗಿ ಕಾಣಬೇಕೆಂಬ ಕ್ರಾಂತಿಕಾರಿಯಾದ ಹುಟ್ಟಿಗೂ ಕಾರಣವಾಗಿದೆ."

ಆಸ್ಮಾ ಬರ್ಲಾಸ್, ಮುಸ್ಲಿಂ ಮಹಿಳಾ ಚಿಂತಕಿ



ಅಂದರೆ, ಇವರ ಹೊಟ್ಟೆ ಉರಿ ಅರ್ಥವಾಯಿತಲ್ಲ?!

"ಒಬ್ಬ ವಯಸ್ಕ ಹಿಂದೂ ಹುಡುಗಿ ಮುಸ್ಲಿಂ ಹುಡುಗನ ಮೋಹಪಾಶಕ್ಕೆ ಸುಲಭವಾಗಿ ಸಿಲುಕುತ್ತಾಳೆ. ಆಗ ಅದು ಪರಸ್ಪರ ಸಮ್ಮತಿಯಿಂದ ನಡೆದದ್ದು ಎಂದಾಗುವುದು ನಿಜವೇ. ಆದರೆ ಮುಸ್ಲಿಂ ಹುಡುಗಿಯರು ಬುರ್ಖಾ ಹಾಕುವುದರಿಂದ ಹಿಂದೂ ಹುಡುಗರಿಗೆ ಆ ಅವಕಾಶವೇ ಸಿಗುವುದಿಲ್ಲ."

- ಎಂ.ಬಿ. ಪುರಾಣಿಕ್, ವಿ.ಎಚ್.ಪಿ.ಯ ನಾಯಕ

ಇದನ್ನು ಹೇಳಲು ಜ್ಯೋತಿಷಿಯೇ ಬೇಕಾ?

"ಯಡಿಯೂರಪ್ಪನವರಿಗೆ ಇದು ಪರಿವರ್ತನೆಯ ಕಾಲ. ಊಹಿಸದ ರೀತಿಯಲ್ಲಿ ಬೆಳವಣಿಗೆಗಳು ಸಂಭವಿಸುತ್ತವೆ. ನ.16ರ ಒಳಗೆ ಅವರು ಬದಲಾವಣೆ ಮಾಡಿಕೊಳ್ಳದಿದ್ದರೆ ಅಧಿಕಾರ ನಷ್ಟ ಉಂಟಾಗುವ ಸಾಧ್ಯತೆಯೂ ಇದೆ. ಶುಕ್ರನನ್ನು ಪ್ರತಿನಿಧಿಸುವ ಶೋಭಾ, ಕುಜನನ್ನು ಪ್ರತಿನಿಧಿಸುವ ಬಳಿಗಾರ್‌ರನ್ನು ಬದಲಾಯಿಸಿದರೆ ಕಂಟಕಗಳು ನಿವಾರಣೆಯಾಗಬಹುದು."

ಜ್ಯೋತಿಷಿ ಜಯಶ್ರೀನಿವಾಸನ್

ಬುದ್ಧಿಜೀವಿಗಳೂ ಅಲ್ಲ, ಸತ್ಯವಂತರೂ ಅಲ್ಲ!

"ಕರ್ನಾಟಕದ ಬುದ್ಧಿಜೀವಿಗಳು ಪಕ್ಷಪಾತಿಗಳು. ಅವರು ಯಾವ ವಿಷಯವನ್ನೂ ವಸ್ತುನಿಷ್ಠವಾಗಿ ಗ್ರಹಿಸುವುದಿಲ್ಲ. ಬುದ್ಧಿ ಒಂದಿದ್ದರೆ ಬುದ್ಧಿಜೀವಿಗಳಾಗುವುದಿಲ್ಲ. ಸತ್ಯದ ಪರ ನಿಲ್ಲುವ ಧೈರ್ಯ ಬೇಕು."



- ಚಿದಾನಂದಮೂರ್ತಿ

ಮಾಡಿದ್ದುಣ್ಣೊ ಮಾರಾಯ



ಕಂಡಹಾಗೆ

● ಗೌರಿ ಲಂಕೇಶ್

ಮಾಡಿದ್ದುಣ್ಣೋ ಮಾರಾಯ ಎಂಬಂತಾಗಿದೆ ...ಖ್ಯಮಂತ್ರಿ ಯಡಿಯೂರಪ್ಪನ ಸ್ಥಿತಿ. ಯಾವ ಗಣಿ ಧಣಿಗಳ ...ಬಲದ ಲಾಭ ಪಡೆದು ತಮ್ಮ ಕುರ್ಚಿಯನ್ನು ...ಪಡಿಸಿಕೊಂಡಿದ್ದರೋ, ಇವತ್ತು ಅದೇ ಗಣಿಧಣಿಗಳ ...ತ್ರಾರಿಕೆಗೆ ಬಲಿಯಾಗಿ ತಮ್ಮ ಮುಖ್ಯಮಂತ್ರಿ ...ವನ್ನಲ್ಲದೆ, ತಮ್ಮ ರಾಜಕೀಯ ಬದುಕಿಗೇ ಸಂಚಕಾರ ...ಮಿಕೊಂಡು ವಿಲವಿಲ ಒದ್ದಾಡುತ್ತಿದ್ದಾರೆ ಯಡಿಯೂರಪ್ಪ.

...ಯಡಿಯೂರಪ್ಪನ ಇವತ್ತಿನ ದುಃಸ್ಥಿತಿಗೆ ಅವರೇ ಕಾರಣ ...ದರೆ ತಪ್ಪಾಗಲಾರದು. ಯಾಕೆಂದರೆ ಅವರಿಗೆ ಸದಾ ...ಮುಖ್ಯವಾಗಿದ್ದು ತಾವು, ತನ್ನವರು ಮತ್ತು ತನ್ನದು ಎಂಬ ...ರು ಅಂಶಗಳು ಮಾತ್ರ. ನೆನಪಿದೆಯೇ, ಜಾತ್ಯತೀತ ...ಜಾದಳ ಭಾರತೀಯ ಜನತಾ ಪಕ್ಷಕ್ಕೆ ಕೈಕೊಟ್ಟಾಗ ...ಡಿಯೂರಪ್ಪ ಅದನ್ನು ಬಿಜೆಪಿಗೆ ಮಾಡಿದ ಅನ್ಯಾಯ ...ಮ ಪರಿಗಣಿಸಲೇ ಇಲ್ಲ, ಬದಲಾಗಿ ಅದು ತಮಗೇ ...ಮಿದ ವಚನಭ್ರಷ್ಟತೆ, ತನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ...ಂತಲೇ ವಂಚಿಸಲಾಗಿದೆ ಎಂದೇ ಭಾವಿಸಿದರು. ...ದೆಲ್ಲೆಡೆ "ನಾನೇನು ತಪ್ಪು ಮಾಡಿದ್ದೆ ಅಂತ ನನಗೆ ಈ ... ಎಂದು ಅರಚಾಡಿದರು.

ಯಡಿಯೂರಪ್ಪನನ್ನು ಲಿಂಗಾಯತ ಸಮುದಾಯ ಜಾತಿ ...ಕ್ಕಾಗಿ ಬೆಂಬಲಿಸಿದ್ದು, ಹಿಂದೂತ್ವವಾದಿ ಸಿದ್ಧಾಂತದ ...ತೆ ಹಚ್ಚಿಕೊಂಡ ಇತರೆ ...ದಾಯಗಳು ಬಿಜೆಪಿಗೆ ಓಟು ...ದ್ದು, ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ...ಕಾರಣದಿಂದ ರೋಸಿ ಹೋಗಿ ...ಗೂ ಒಂದು ಅವಕಾಶ ಕೊಟ್ಟು ...ಡುವ ಎಂಬ ನಿಲುವು ಸಾಕಷ್ಟು ...ಪದ್ದಾಗಿದ್ದರಿಂದ ಈ ಮೂರು ...ಗಳು ಜೊತೆಗೂಡಿ ಕಳೆದ ವರ್ಷ ...ನಸಭಾ ಚುನಾವಣೆಯಲ್ಲಿ ಬಿಜೆಪಿ ... ಪಕ್ಷಗಳಿಗಿಂತ ಹೆಚ್ಚು ಸ್ಥಾನಗಳನ್ನು ...ದಿತು. ಆದರೆ ಸರಳ ಬಹುಮತಕ್ಕೆ ...ರೇ ಸ್ಥಾನ ಕಡಿಮೆ ದಕ್ಕಿತ್ತು. ಆಗ ...ದೇಶ ಎಂದೂ ಕೇಳರಿಯದಂತಹ, ...ಯದಂತಹ 'ಆಪರೇಷನ್ ಕಮಲ' ... ಖರೀದಿ ರಾಜಕೀಯಕ್ಕೆ ಇದೇ ... ಮತ್ತು ರೆಡ್ಡಿಗಳು ಮುಂದಾದರು.

...ಂದಹಾಗೆ ಅಂದಿನ ಗೆಲುವನ್ನು ... ಎಂದೂ ಬಿಜೆಪಿಯ ಗೆಲುವು ಎಂದು ...ಯೂರಪ್ಪ ಪರಿಗಣಿಸಲೇ ಇಲ್ಲ. ಬದಲಾಗಿ ಅದು ತನ್ನ ...ಕ್ತಿಕ ಗೆಲುವು ಎಂಬಂತೆಯೇ ವರ್ತಿಸಿದರು. ಸಚಿವ ...ಟದ ರಚನೆಯಲ್ಲಿ, ಜಗದೀಶ್ ಶೆಟ್ಟರ್ ಅನ್ನು ...ಗುಂಪು ಮಾಡಿದ್ದರಲ್ಲಿ, ಗಣಿ ಧಣಿಗಳಿಗೆ ಪ್ರಮುಖ ...ಗಳನ್ನು ನೀಡಿದ್ದರಲ್ಲಿ ಎಲ್ಲದರಲ್ಲೂ ಒಂದು ಪಾಳೆಗಾರಿಕೆ ...ಣೆ ಕಾಣಿಸುತ್ತಿತ್ತೇ ಹೊರತು ಪ್ರಜಾತಾಂತ್ರಿಕ ಉದ್ದೇಶದ ...ಶವೂ ಇರಲಿಲ್ಲ.

...ನ್ನು ಶೋಭಾ ಕರಂದ್ಲಾಜೆಗೆ ಕೊಟ್ಟ ...ಖ್ಯತೆಯಂತೂ ಹಲವಾರು ವರ್ಷಗಳಿಂದ ಬಿಜೆಪಿಗಾಗಿ ...ದ್ದವರ, ಆಕೆಗಿಂತಲೂ ಹೆಚ್ಚು ಬಾರಿ ಚುನಾವಣೆಗಳಲ್ಲಿ ...ಇತರೆ ಶಾಸಕರಲ್ಲಿ ಹೊಟ್ಟೆ ಉರಿಗೆ ಕಾರಣವಾಗಿದ್ದು ...ಹಿರಂಗ ಗುಟ್ಟು. ವಾಸ್ತವವಾಗಿ ಯಾವುದೇ ಸಚಿವ ...ಟದಲ್ಲಿ ಮುಖ್ಯಮಂತ್ರಿಯ ನಂತರ ಎರಡನೇ ...ಖರು ಗೃಹಮಂತ್ರಿಗಳಾಗಿರುತ್ತಾರೆ. ಆದರೆ ...ಯೂರಪ್ಪನ ಸರ್ಕಾರದಲ್ಲಿ ಅವರನ್ನು ಬಿಟ್ಟರೆ ಶೋಭಾ ...ಜೆಯೇ ಮುಖ್ಯ ಎಂದೇ ಬಿಂಬಿಸಲಾಯಿತು. ಇನ್ನು ...ಆಚಾರ್ಯ ಎಂಬ ಗೃಹ ಮಂತ್ರಿಯಂತೂ ಶುದ್ಧ ...ಪ್ ಎಂಬುದು ಹಲವಾರು ಬಾರಿ ಸಾಬೀತಾಯಿತು. ...ಕೆ ಅವರ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಪ್ರಮುಖ ನಿರ್ಧಾರಗಳನ್ನು ಯಡಿಯೂರಪ್ಪನ ಮಗ ವಿಜಯೇಂದ್ರನೇ ನಿಭಾಯಿಸುತ್ತಿದ್ದು ಆಚಾರ್ಯರು ಆ ಫೈಲುಗಳನ್ನು ಎತ್ತಿಕೊಂಡು ಹೋಗುವ ಗುಮಾಸ್ತನಂತೆ ವರ್ತಿಸುತ್ತಿದ್ದರು.

ಉಳಿದ ಸಚಿವರ ಬಗ್ಗೆ ಕೇಳಲೇಬೇಡಿ. ಉಮೇಶ್ ಕತ್ತಿಗೆ ನೀಡಿದ್ದ ಇಲಾಖೆ ಯಾವುದು, ಲಕ್ಷ್ಮಣ ಸವದಿ ಯಾವುದರ ಸಚಿವನಾಗಿದ್ದ, ರವೀಂದ್ರನಾಥ್ ಕೃಷಿ ಇಲಾಖೆಯಲ್ಲಿ ಏನು ಕಡಿದು ಕಟ್ಟೆ ಹಾಕಿದ, ವಿಜ್ಞಾನ ಮತ್ತು ತಂತ್ರಜ್ಞಾನ ವಲಯಕ್ಕೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡುವಿನ ಕೊಡುಗೆ ಏನು ಎಂದೆಲ್ಲ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಅಷ್ಟೇ ಏಕೆ, ಎಲ್ಲೆಡೆ ಯಡ್ಡಿ ಮತ್ತು ಶೋಭಾರೇ ಮಿಂಚಿದ್ದರಿಂದ ಸಚಿವ ಸಂಪುಟದ ಸದಸ್ಯರಾರು ಎಂಬುದೇ ಬಹಳಷ್ಟು ಜನಕ್ಕೆ ಗೊತ್ತಿಲ್ಲ. ಅದಕ್ಕೆ ಸರಿಯಾಗಿ ಅವರ್ಯಾರೂ ತಮ್ಮ ಖಾತೆಗಳನ್ನು ಸೂಕ್ತವಾಗಿ ನಿಭಾಯಿಸದಿದ್ದರಿಂದ ಜನರ ಗಮನವನ್ನು ತಮ್ಮತ್ತ ಸೆಳೆಯಲಿಲ್ಲ.

ಇನ್ನು ವಿರೋಧ ಪಕ್ಷದಲ್ಲಿದ್ದಾಗ ಕಿರುಚಾಟವನ್ನೇ ಹೋರಾಟ ಎಂದು ಪರಿಗಣಿಸಿದ್ದ ಯಡಿಯೂರಪ್ಪ ಮುಖ್ಯಮಂತ್ರಿ ಆದ ನಂತರ ಮುಂಗೋಪ ತೋರಿಸುವುದೇ ಆಡಳಿತ ನಡೆಸುವುದು ಎಂದೇ ಭಾವಿಸಿದರು.

ಒಂದು ಸರ್ಕಾರದ ಯಂತ್ರಾಂಗ ಹೇಗಿರುತ್ತದೆ, ಅದನ್ನು ನಿಭಾಯಿಸುವುದು ಹೇಗೆ ಎಂಬುದರ ಬಗ್ಗೆ ಎಬಿಸಿ ಕೂಡ ಗೊತ್ತಿರದ ಯಡಿಯೂರಪ್ಪ ತನ್ನ ಮನಸ್ಸಿಗೆ ಬಂದಿದ್ದೇ ನೀತಿ, ತಾನು ಬಾಯಿಗೆ ಬಂದಿದ್ದೇ ನಿಯಮ ಎಂಬಂತೆ ವರ್ತಿಸಿದರು. ಅದೆಲ್ಲ ಎಂತಹ ಹಾಸ್ಯಾಸ್ಪದ ಲೆವೆಲ್‌ಗೆ ಹೋಯಿತೆಂದರೆ ಒಮ್ಮೆ ಗದಗ ಜಿಲ್ಲೆಯ ಡಿಸಿಯನ್ನೇ ಬಂಧಿಸುವಂತೆ ಸ್ಥಳೀಯ ಪೊಲೀಸರಿಗೆ ಆದೇಶಿಸಿದ್ದರು!



ಯಡಿಯೂರಪ್ಪನ ಈ ಎಲ್ಲ ಎಡವಟ್ಟುಗಳೊಂದಿಗೆ ಅವರ ಅದಕ್ಷತೆಯೂ ಜೊತೆಗೂಡಿ ಈ ರಾಜ್ಯದ ಜನರ ನೆರವಿಗೆ ಅವರ ಸರ್ಕಾರ ಎಂದೂ ಸ್ಪಂದಿಸದಂತೆ ಮಾಡಿತ್ತು. ಸಕಾಲದಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರ ಕೇಳಿದ ರೈತರಿಗೆ ಯಡ್ಡಿ ಸರ್ಕಾರ ನೀಡಿದ್ದು ಗುಂಡೇಟು. ಅದು ಪ್ರಾರಂಭದ ಮಾತಾಯಿತು. ಈಗ್ಗೆ ಯಡಿಯೂರಪ್ಪ ಮುಖ್ಯಮಂತ್ರಿಯಾಗಿ 18 ತಿಂಗಳುಗಳೇ ಉರುಳಿದ್ದರೂ ಇವತ್ತಿನ ತನಕ ಪಡಿತರ ಚೀಟಿಗಳು ಸರಿಯಾಗಿ ವಿತರಣೆ ಆಗಿಲ್ಲ. ಕಬ್ಬು ಬೆಳೆದ ರೈತರಿಗೆ ಸೂಕ್ತ ಬೆಲೆ ಸಿಕ್ಕಿಲ್ಲ. ಇನ್ನು ಮೊನ್ನೆಯ ನೆರೆ ಹಾವಳಿಯಲ್ಲಿ ತತ್ತರಿಸಿದ ಜನರ ಕಣ್ಣಿಗೇ ಯಡ್ಡಿಯ ಅಧಿಕಾರಿಗಳೂ ಬೀಳಲಿಲ್ಲ. ಇಂತಹ ಬೇಜವಾಬ್ದಾರಿತನಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಆದರೆ ಸಾರಾಂಶದಲ್ಲಿ ಯಡ್ಡಿಯೂರಪ್ಪನ ಸರ್ಕಾರ ಅಗತ್ಯ ಬಿದ್ದಾಗ ಜನರ ನೆರವಿಗೆ ಹೋಗಲೇ ಇಲ್ಲ ಎಂಬುದನ್ನು ಯಾವ ಹಿಂಜರಿಕೆಯೂ ಇಲ್ಲದೆ ಹೇಳಬಹುದು.

ಕರ್ನಾಟಕ ಭ್ರಷ್ಟತೆಯನ್ನು ಈ ಹಿಂದೆ ಕಂಡಿರಲಿಲ್ಲ ಎಂದಲ್ಲ. ಆದರೆ ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ನಡೆದಷ್ಟು ಭ್ರಷ್ಟಾಚಾರವನ್ನಂತೂ ಈ ರಾಜ್ಯ ಇಲ್ಲಿಯವರೆಗೂ ಖಂಡಿತ ಕಂಡಿರಲಿಲ್ಲ. ಅಧಿಕಾರ ಸಿಕ್ಕಿದ್ದೇ ರಾಜ್ಯವನ್ನು ಹರಾಜು ಹಾಕಿ ತಾವು ಹಣ ಮಾಡಿಕೊಳ್ಳಲು ಎಂಬಂತೆ ವರ್ತಿಸಿದ ಯಡಿಯೂರಪ್ಪನವರ ಆಡಳಿತದಲ್ಲಿ ಪ್ರತಿಯೊಂದೂ ಡೀಲೂ, ಪ್ರತಿಯೊಂದಕ್ಕೂ ಕಮಿಷನ್ ಎಂಬಂತಾಯಿತು. ಬಡ ಮತದಾರರಿಂದ ಹಿಡಿದು ಇತರೆ ಪಕ್ಷಗಳ ಶಾಸಕರನ್ನೂ ಕೊಂಡು ಅಧಿಕಾರ ನಡೆಸಿದ ಯಡಿಯೂರಪ್ಪನವರಿಗೆ ಹಣ ಮುಖ್ಯವಾಯಿತೇ ಹೊರತು ಯಾವ ಜನಪರ ಕಾಳಜಿಯೂ ಅಲ್ಲ.

ಯಡಿಯೂರಪ್ಪನ 'ತಾನು ಮತ್ತು ತನ್ನವರು' ಸಿದ್ಧಾಂತ ಯಾವ ಮಟ್ಟಕ್ಕೆ ಹೋಯಿತೆಂದರೆ ತನ್ನ ಸುತ್ತ ತಮ್ಮ ಸ್ವಜಾತಿ ಲಿಂಗಾಯತ ಅಧಿಕಾರಿಗಳನ್ನೇ ನೇಮಿಸಿಕೊಂಡರು. ಅಂತಹವರಲ್ಲಿ ಅವರ ಆಪ್ತ ಕಾರ್ಯದರ್ಶಿಯಾದ ವಿ.ಬಿ. ಬಳಿಗಾರ್ ಎಂಬ ಐಎಎಸ್ ಅಧಿಕಾರಿ ಪ್ರಮುಖರು. ಸ್ವತಃ ಬಳಿಗಾರ್ ದಕ್ಷ ಮತ್ತು ಪ್ರಾಮಾಣಿಕ ವ್ಯಕ್ತಿ. ಆದರೆ ಅದೇನಾಯಿತೋ ಏನೋ, ಬಳಿಗಾರ್ ಹೆಸರು ಕೇಳಿದರೆ ಸಾಕು, ಬಿಜೆಪಿಯ ಶಾಸಕರು ಮತ್ತು ಸಚಿವರು ಉರಿದು ಬೀಳಲಾರಂಭಿಸಿದರು. ರೆಡ್ಡಿಗಳ ಎತ್ತಂಗಡಿ ಪಟ್ಟಿಯಲ್ಲಿ ಯಡ್ಡಿ ಮತ್ತು ಕರಂದ್ಲಾಜೆ ನಂತರ ಮೂರನೇ ಸ್ಥಾನದಲ್ಲಿರುವ ಹೆಸರೇ ಬಳಿಗಾರ್‌ರದ್ದು.

ಇನ್ನು ಯಡಿಯೂರಪ್ಪನವರಿಗೆ ತಾನು ಈ ರಾಜ್ಯದ ಮುಖ್ಯಮಂತ್ರಿ ಆಗಲೇಬೇಕೆಂಬ ಮಹತ್ವಾಕಾಂಕ್ಷೆ ಇತ್ತೇ ಹೊರತು, ಆ ಸ್ಥಾನ ತನಗೆ ಸಿಕ್ಕರೆ ತಾನೇನು ಮಾಡಬೇಕೆಂಬ ಗುರಿ ಇರಲಿಲ್ಲ. ಆದ್ದರಿಂದಲೇ ಅವರು ಪೂಜೆ, ಹೋಮ, ಹವನಗಳಲ್ಲಿ ತಲ್ಲೀನರಾಗಿ ರಾಜ್ಯದಲ್ಲಿರುವ ಬಹುತೇಕ ಗುಡಿ, ಮಂದಿರ, ಮಠಗಳಿಗೆ ಭೇಟಿ ನೀಡುತ್ತಾ ರಾಜ್ಯದ ಆಡಳಿತ ನಡೆಸುವ ಜವಾಬ್ದಾರಿಯನ್ನು ದೇವಾನುದೇವತೆಗಳಿಗೇ ವಹಿಸಿರುವಂತೆ ವರ್ತಿಸಿದರು.

ಅಷ್ಟೇ ಅಲ್ಲ, ತನ್ನ ವೈಯಕ್ತಿಕ ಹಣ ಯಾವುದು, ಸರ್ಕಾರದಲ್ಲಿರುವ ಜನರ ಹಣ ಯಾವುದು ಎಂಬ ಅರಿವೂ ಇಲ್ಲದಂತೆ ಮಠಗಳಿಗೆ, ಮಂದಿರಗಳಿಗೆ ಜನರ ತೆರಿಗೆ ಹಣವನ್ನು ಕೋಟ್ಯಂತರ ಲೆಕ್ಕದಲ್ಲಿ ದಾನ ಮಾಡಿದರು. ಕಂಡಕಂಡ ಮಠಾಧೀಶರ ಕಾಲಿಗೆ ಬಿದ್ದರು. ಅದರ ಹಿಂದಿದ್ದ ಲೆಕ್ಕಾಚಾರ, ದೇವರ ಕೃಪೆ ಮತ್ತು ಮಠಾಧೀಶರ ಬೆಂಬಲ ತನಗಿದ್ದರೆ ಯಾರೂ ತನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಅಲುಗಾಡಿಸಲಾಗುವುದಿಲ್ಲ ಎಂಬುದೇ ಆಗಿತ್ತು. ಆದರೆ ಗಣಿ ಧಣಿಗಳಾದ ರೆಡ್ಡಿಗಳ ಹಣಬಲದ ಮುಂದೆ ಯಾವ ಮಠಾಧೀಶ ಯಾವ ಲೆಕ್ಕಕ್ಕೆ? ಇವತ್ತು ಶಾಸಕರಂತೆ ಮಠಾಧೀಶರೂ ತಮ್ಮನ್ನು ಹಣಕ್ಕೆ ಮಾರಿಕೊಳ್ಳಲು ನಿಂತಿರುವಾಗ ದೇವರ ಕೃಪೆ ಇನ್ನೆಲ್ಲಿಯದು?

ಇದೆಲ್ಲ ಸಾಲದೆಂಬಂತೆ ಯಡಿಯೂರಪ್ಪ ಈ ರಾಜ್ಯವನ್ನೇ ಕೇಸರಿಮಯಗೊಳಿಸಲು ಸಂಘ ಪರಿವಾರದ ಹಿಂದೂತ್ವವಾದಿಗಳಿಗೆ ಫ್ರೀ ಹ್ಯಾಂಡ್ ಕೊಟ್ಟರು. ಸಾಲದ ಶೂಲದಲ್ಲಿ ಸಿಲುಕಿರುವ ರೈತರಿಗೆ ನೆರವಾಗಬೇಕಿದ್ದ ಸಾವಯವ ಕೃಷಿ ಯೋಜನೆ ಸಂಪೂರ್ಣವಾಗಿ ಹಿಂದೂತ್ವವಾದಿಗಳ ಚಿಂತನ್ ಬೈಠಕ್ ಆಯಿತು. ಗೋವಿನ ರಕ್ಷಣೆ ಹೆಸರಲ್ಲಿ ಕೆಲ ಮಠಾಧೀಶರು ಸರ್ಕಾರಿ ಹಣವನ್ನು ಹೇಗೆ ಲೂಟಿ ಹೊಡೆದರೆಂದರೆ ಕೊನೆಗೆ ತಾವು ತಮ್ಮ ಮಠದಲ್ಲಿ ಕಟ್ಟಿಕೊಂಡಿರುವ ಗೋವುಗಳಿಗೆ ಮೇವಿನ ಹುಲ್ಲು ಇಲ್ಲವೆಂದೂ, ಇದಕ್ಕಾಗಿ ಮತ್ತಷ್ಟು ಹಣ ಬೇಕೆಂದೂ ಕೈ ಚಾಚಿದರು. ವಿದ್ಯೆಯ ಹೆಸರಲ್ಲಿ ಆರ್‌ಎಸ್‌ಎಸ್‌ನ ಕೋಮು ದ್ವೇಷ ಬಿತ್ತುವ ಪುಸ್ತಕಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಯಡಿಯೂರಪ್ಪ ನೀಡಿದರು.

ಇದೀಗ ಶ್ರೀ ಭಗವದ್ಗೀತಾ ಅಭಿಯಾನ ಎಂಬ ಹೆಸರಲ್ಲಿ ಸೋಂದಾ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಎಂಬ ಸ್ವಾಮಿ ರಾಜ್ಯದೆಲ್ಲೆಡೆ ನಡೆಸುತ್ತಿರುವ ಭಗವದ್ಗೀತಾ ಪಾಠಗಳಿಗೆ ಸರ್ಕಾರಿ ಟೀಚರ್‌ಗಳು ಹಾಜರಾಗಬೇಕೆಂದು ಆದೇಶ ಹೊರಡಿಸಿದ್ದಾರೆ ಯಡಿಯೂರಪ್ಪ.

ತಾನು ಹೇಳಿದ್ದೇ ಆಗಬೇಕೆಂಬ ಹಠ, ಬೇರೆಯವರ ಅಗತ್ಯವಿಲ್ಲ ಎಂಬ ಸರ್ವಾಧಿಕಾರಿ ಧೋರಣೆ, ತಾನು-ತನ್ನವರು-ತನ್ನದು ಇದ್ದರೆ ಸಾಕು ಇತರರು ಲೆಕ್ಕಕ್ಕಿಲ್ಲ ಎಂಬ ನಿಲುವು, ತನ್ನ ಪಕ್ಷದ ಕಾರ್ಯಕರ್ತರಿರಲಿ, ಶಾಸಕರನ್ನೂ, ಸಚಿವರನ್ನೂ ತನ್ನೊಂದಿಗೆ ಕರೆದುಕೊಂಡು ಮುನ್ನಡೆಯುವ ಅವಶ್ಯಕತೆ ಇಲ್ಲ ಎಂಬ ಸೊಕ್ಕು.... ಇವೆಲ್ಲಾ ಯಡಿಯೂರಪ್ಪನ ಅದಕ್ಷತೆ ಮತ್ತು ಭ್ರಷ್ಟಾಚಾರದೊಂದಿಗೆ ಇವತ್ತು ಅವರನ್ನು ಈ ಸ್ಥಿತಿಗೆ ತಂದು ನಿಲ್ಲಿಸಿದೆ.


ಅವರ ವಿರುದ್ಧ ಪ್ರಬಲರಾದ ರೆಡ್ಡಿಗಳೇ ತಿರುಗಿಬಿದ್ದಾದ ನಂತರವೂ ತನ್ನನ್ನು ಯಾರೂ ಮುಟ್ಟಲಾಗುವುದಿಲ್ಲ ಎಂಬ ಭ್ರಮೆಯಲ್ಲಿದ್ದ ಯಡಿಯೂರಪ್ಪ ಮೊನ್ನೆ ಮೊನ್ನೆ-ಅಂದರೆ ನವೆಂಬರ್ 3 ರಂದು ಹೀಗೆ ಹೇಳಿದ್ದರು: "25-30 ವರ್ಷಗಳಿಂದ ನಾನೂ ರಾಜಕೀಯ ಮಾಡುತ್ತಿದ್ದೇನೆ. ಹೀಗಾಗಿ ಬೇರೆಯವರ ಆಟ ನಡೆಯದು. ಹೈಕಮಾಂಡ್ ಬೆಂಬಲ, ದೇವರ ದಯೆ ಹಾಗೂ ಜನರ ಆಶೀರ್ವಾದ ಇರುವವರೆಗೆ ಯಾರೂ ಅಲುಗಾಡಿಸಲಾಗದು. ಚಾಣಕ್ಯ ತಂತ್ರ ನನಗೂ ಗೊತ್ತಿದೆ."

ಆದರೆ ತಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸುವ ತನಕ ರೆಡ್ಡಿಗಳು ಸುಮ್ಮನಾಗುವುದಿಲ್ಲ ಎಂದು ಅರಿತ ಯಡಿಯೂರಪ್ಪ ಅದರ ಮಾರನೇ ದಿನವೇ ಹೀಗೊಂದು ಹೇಳಿಕೆ ನೀಡಿದ್ದು:

"ರಾಜ್ಯದ ಮುಖ್ಯಮಂತ್ರಿಯಾಗಿ ಎಲ್ಲರನ್ನೂ, ಎಲ್ಲವನ್ನೂ ಸರಿದೂಗಿಸಿಕೊಂಡು, ಹೊಂದಾಣಿಕೆ ಮಾಡಿಕೊಂಡು ಹೋಗಲು 18 ತಿಂಗಳಿಂದ ಪ್ರಯತ್ನಿಸುತ್ತಲೇ ಇದ್ದೇವೆ. ಇನ್ನೂ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂದು ಕೆಲವು ಶಾಸಕರು, ಸಚಿವರು ಹೇಳುವುದಾದರೆ ಅದಕ್ಕೂ ಸಿದ್ಧ. ರಾಜ್ಯದ ಹಿತದೃಷ್ಟಿಯಿಂದ ಎಲ್ಲವನ್ನೂ, ಎಲ್ಲರನ್ನೂ ಸಹಿಸಿಕೊಂಡು, ಹೊಂದಾಣಿಕೆ ಮಾಡಿಕೊಂಡು ಹೋಗುತ್ತೇನೆ."

ಒಂದಂತೂ ಸ್ಪಷ್ಟ: ಕರ್ನಾಟಕ ರಾಜ್ಯ ಎಂದೆಂದೂ ಯಡಿಯೂರಪ್ಪನಷ್ಟು ಅದಕ್ಷ, ಅಸಹಾಯಕ, ಅಪಾಯಕಾರಿ ಮುಖ್ಯಮಂತ್ರಿಯನ್ನು ಕಂಡಿರಲಿಲ್ಲ.


ಈತ ಮುಖ್ಯಮಂತ್ರಿಯಾಗಿ ಉಳಿದರೆಷ್ಟು, ತೊಲಗಿದರೆಷ್ಟು? ●



ಬಾಹ್ಯಾಕಾಶದಲ್ಲೊಂದು ಹೋಟೆಲ್

ಇದುವರೆಗೆ 'ಪ್ರವಾಸ' ಎಂದರೆ ಭೂಮಿಯ ಮೇಲಿನ ಹಲವಾರು ಪ್ರಕೃತಿ ಸುಂದರ ತಾಣಗಳಿಗೆ, ಐತಿಹಾಸಿಕ ಸ್ಥಳಗಳಿಗೆ, ದೊಡ್ಡ ದೊಡ್ಡ ನಗರಗಳಿಗೆ, ಬೇಸಿಗೆ ಧಾಮಗಳಿಗೆ, ಧಾರ್ಮಿಕ ಕ್ಷೇತ್ರಗಳಿಗೆ ಅಥವಾ ಇಂತಹುದೇ ಇನ್ನಿತರ ಸ್ಥಳಗಳಿಗೆ ಹೋಗುವುದು ಮಾತ್ರವಾಗಿತ್ತು. ಆದರೆ ಶರವೇಗದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನದಿಂದಾಗಿ ಕಲ್ಪನಾ ಚಾವ್ಲಾ, ಸುನಿತಾ ವಿಲಿಯಮ್ಸ್‌ನಂತಹ ಸಂಶೋಧಕರಿಗೆ ಬಾಹ್ಯಾಕಾಶ ಯಾನವೂ ಸಾಧ್ಯವಾಗಿದೆ. ಆದರೀಗ ಭವಿಷ್ಯದಲ್ಲಿ ಬಾಹ್ಯಾಕಾಶ ಪ್ರವಾಸೋದ್ಯಮಕ್ಕಿರುವ ಅಂತಃಸ್ಸಾಮರ್ಥ್ಯವನ್ನು ಮನಗುಂಡಿರುವ ಅಮೆರಿಕದ ಹಲವು ಕಂಪೆನಿಗಳು ಈ ನಿಟ್ಟಿನಲ್ಲಿ ಮಹತ್ವಪೂರ್ಣ ಸಂಶೋಧನೆಗಳಲ್ಲಿ ತೊಡಗಿವೆ. ಎಲ್ಲಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ವರ್ಜಿನ್ ಗ್ರೂಪ್ ಎಂಬ ಸಂಸ್ಥೆ ಈಗ್ಗೆ ಒಂದು ವರ್ಷದ ಹಿಂದೆಯೇ ಕ್ಯಾಲಿಫೋರ್ನಿಯಾದ ಮೊಜಾವೇ ಮರುಭೂಮಿಯ ಓಷ್ಕೋಷ್‌ನಲ್ಲಿ ವೈಟ್ ನೈಟ್ - 2 (ಬಿಳಿ ಕುದುರೆ) ಎಂಬ ವಿಮಾನವನ್ನು ಅನಾವರಣಗೊಳಿಸಿತ್ತು.

ವೈಟ್‌ನೈಟ್ ಗಗನನೌಕೆಯಲ್ಲಿ ಪರಿಪೂರ್ಣ ಬಾಹ್ಯಾಕಾಶ ಯಾನ ಮಾಡುವುದು ಸಾಧ್ಯವಿಲ್ಲವಾದರೂ ಆ ನಿಟ್ಟಿನಲ್ಲಿ ಒಂದು ಮಹತ್ವಪೂರ್ಣ ಹೆಜ್ಜೆ ಎಂದು ಹೇಳಬಹುದು. ಏಕೆಂದರೆ, ಈ ವಿಮಾನವು ಭೂಮಿಯಿಂದ 50,000 ಅಡಿಗಳ ಎತ್ತರದಲ್ಲಿ ಪ್ರಯಾಣ ಮಾಡಲಿದೆ. ಇದು ಸಾಮಾನ್ಯ ವಾಣಿಜ್ಯ ವಿಮಾನಗಳು ಹಾರುವುದಕ್ಕಿಂತ ಎತ್ತರದಲ್ಲಿ ಪ್ರಯಾಣಿಸುವುದು ನಿಜವಾದರೂ ಇದು ಸಂಪೂರ್ಣವಾಗಿ ಭೂಮಿಯ ಗುರುತ್ವಾಕರ್ಷಣೆಯಿಂದಾಚೆಗೆ ಹೋಗುವುದಿಲ್ಲ. ವೈಟ್‌ನೈಟ್ ನೌಕೆಯು ಒಂದು ರೀತಿಯಲ್ಲಿ ಮಾತೃನೌಕೆಯಾಗಿ ಕಾರ್ಯನಿರ್ವಹಿಸಲಿದ್ದು ಒಮ್ಮೆ ಅದು ಭೂಮಿಯಿಂದ 50,000 ಅಡಿಗಳಷ್ಟು ಎತ್ತರವನ್ನು ತಲುಪಿದ ತಕ್ಷಣ ತನ್ನೊಳಗಿಂದ ಬಾಹ್ಯಾಕಾಶ ನೌಕೆಗಳನ್ನು ಹರಿಬಿಡುತ್ತದೆ. ಬಾಹ್ಯಾಕಾಶ ನೌಕೆ - 2 ಎಂದು ಹೆಸರಿಡಲಾದ ಈ ನೌಕೆಗಳು ತನ್ನದೇ ಆದ ಹೈಬ್ರಿಡ್ ರಾಕೆಟ್ ಶಕ್ತಿಯಿಂದ ಚಲಿಸುತ್ತಾ ಭೂಮಿಯ ಮೇಲ್ಮೈಯಿಂದ ಸುಮಾರು ಒಂದು ನೂರು ಕಿ.ಮೀ. ಎತ್ತರದಲ್ಲಿ ಹಾರಾಟ ನಡೆಸುತ್ತವೆ. ಅಂದರೆ, ವೈಟ್‌ನೈಟ್ ವಿಮಾನವು ಭೂಮಿಯ ಗುರುತ್ವಾಕರ್ಷಣಾ ವ್ಯಾಪ್ತಿಯ ಒಳಗಿದ್ದುಕೊಂಡೇ ಬಾಹ್ಯಾಕಾಶ ನೌಕೆಗಳನ್ನು ಹಾರಿಬಿಡುವ ಮಾತೃನೌಕೆಯಾಗಿ ಅಥವಾ ಉಡಾವಣಾ ವಾಹನವಾಗಿ ಕಾರ್ಯನಿರ್ವಹಿಸುತ್ತದೆ. ಅದು ಬಿಡುಗಡೆ ಮಾಡುವ ಬಾಹ್ಯಾಕಾಶ ನೌಕೆಗಳು ಗುರುತ್ವಾಕರ್ಷಣಾ ವಲಯದಾಚೆಗೆ ಹೋಗುವುದರಿಂದ, ಅಂದರೆ ಈ ಭೂಮಂಡಲದ ಆಚೆಗೆ ಹೋಗುವುದರಿಂದ ಇದನ್ನು ಬಾಹ್ಯಾಕಾಶ ಯಾನ ಎಂದು ಕರೆಯ ಬಹುದು. ಸಧ್ಯಕ್ಕೆ ವೈಟ್‌ನೈಟ್-2 ವಿಮಾನವನ್ನು ಮಾತ್ರ ತಯಾರಿಸಲಾಗಿದ್ದು ಉಳಿದ ಬಾಹ್ಯಾಕಾಶ ನೌಕೆ-2ರ ನಿರ್ಮಾಣ ಕಾರ್ಯ ಮುಂದುವರೆದಿದೆ.




ಒಮ್ಮೆ ಈ ಪುಟ್ಟ ಬಾಹ್ಯಾಕಾಶ ಯಾನ ಕೈಗೊಳ್ಳುವುದಕ್ಕೆ ಒಬ್ಬರಿಗೆ ಟಿಕೆಟ್ ಎಷ್ಟು ಗೊತ್ತೆ, ಕೇವಲ 2,00,000 ಡಾಲರ್‌ಗಳು ಮಾತ್ರ! ಅಂದರೆ, ಸುಮಾರು ಒಂದು ಕೋಟಿ ರೂಪಾಯಿಗಳು! ಇನ್ನೊಂದು ವಿಚಾರ ಎಂದರೆ ಈಗಾಗಲೇ 220 ಜನ ದುಡ್ಡು ಕೊಟ್ಟು ಬಾಹ್ಯಾಕಾಶ ಯಾನ ಹೋಗುವುದಕ್ಕೆ ಸಹಿ ಮಾಡಿದ್ದಾರೆ. ಇಷ್ಟೊಂದು ದುಡ್ಡು ಖರ್ಚು ಮಾಡಿ ಬಾಹ್ಯಾಕಾಶ ಯಾನ ಕೈಗೊಂಡರೂ ಕಿಟಕಿ ಬದಿಯ ಸೀಟು ಸಿಗದಿದ್ದರೆ ಏನು ಪ್ರಯೋಜನ ಎಂಬ ಆತಂಕ ಕಾಡಬಹುದು. ಈ ಅಂಶವನ್ನು ಗಮನದಲ್ಲಿಟ್ಟುಕೊಂಡೇ ಇಡೀ ಬಾಹ್ಯಾಕಾಶ ನೌಕೆಯಲ್ಲಿ ಕೇವಲ ಕಿಟಕಿ ಬದಿಯ ಸೀಟುಗಳೇ ಇರುವಂತೆ ವಿನ್ಯಾಸಗೊಳಿಸಲಾಗುತ್ತಿದೆ.

ಯಾವಾಗ ಜನರನ್ನು ಬಾಹ್ಯಾಕಾಶಕ್ಕೆ ಕರೆದುಕೊಂಡು ಹೋಗುತ್ತೇವೆ ಎಂದರೋ ತಕ್ಷಣವೇ ಸ್ಪೇನ್‌ನ ಕಂಪೆನಿಯೊಂದು ಬಾಹ್ಯಾಕಾಶ ಯಾನ ಕೈಗೊಳ್ಳುವ ಪ್ರವಾಸಿಗರಿಗೆ ಬಾಹ್ಯಾಕಾಶದಲ್ಲೇ ಒಂದು ಹೋಟೆಲ್ ನಿರ್ಮಿಸುತ್ತೇವೆ ಎಂದು ಪ್ರಕಟಿಸಿದೆ! ಸ್ಪೇನ್‌ನ ಬರ್ಸಿಲೋನ ಮೂಲದ ಗೆಲಾಕ್ಟಿಕ್ ಸೂಟ್ ಲಿಮಿಟೆಡ್ ಎಂಬ ಕಂಪೆನಿಯ ಬಾಹ್ಯಾಕಾಶ ವಿಜ್ಞಾನಿಗಳು, ಎಂಜಿನಿಯರ್‌ಗಳು ಈಗಾಗಲೇ ಹೋಟೆಲ್ ನಿರ್ಮಿಸುವ ಕೆಲಸದಲ್ಲಿ ತೊಡಗಿದ್ದು ಅದು 2012ರ ವೇಳೆಗೆ ಕಾರ್ಯ ನಿರ್ವಹಿಸಲು ಪ್ರಾರಂಭಿಸುತ್ತದಂತೆ. ಈಗಾಗಲೇ ಬಾಹ್ಯಾಕಾಶ ಅಧ್ಯಯನಕ್ಕಾಗಿ ನಿರ್ಮಾಣಗೊಂಡಿರುವ ಅಂತಾರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಂತೆಯೇ ನಿರ್ಮಾಣಗೊಳ್ಳಲಿರುವ ಈ ಹೋಟೆಲ್‌ನಲ್ಲಿ ಮೂರು ರಾತ್ರಿಗಳನ್ನು ಕಳೆಯುವುದಕ್ಕೆ 4.4 ಮಿಲಿಯನ್ ಡಾಲರ್ ದುಡ್ಡು ಕೊಡಬೇಕಾಗುತ್ತದೆ. ಅಂದರೆ ಸುಮಾರು 20 ಕೋಟಿ ರೂಪಾಯಿಗಳು! ಗುರುತ್ವಾಕರ್ಷಣ ವಲಯದಿಂದಾಚೆಗೆ ಈ ಹೋಟೆಲ್ ನಿರ್ಮಾಣಗೊಳ್ಳುವುದರಿಂದ, ಅಂದರೆ ಜನರನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯೇ ಇಲ್ಲದಿರುವುದರಿಂದ ಪ್ರವಾಸಿಗರು ದಿಕ್ಕು ದೆಸೆಯಿಲ್ಲದೇ ಚಲಿಸಿ ಬಾಹ್ಯಾಕಾಶದಲ್ಲಿ ಕಳೆದು ಹೋಗುವ ಸಾಧ್ಯತೆಯಿರುತ್ತದೆ. ಆದ್ದರಿಂದ ಅವರನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿ ಪ್ರವಾಸಿಗರೆಲ್ಲರಿಗೂ ಬಾಹ್ಯಾಕಾಶ ಉಡುಗೆಯನ್ನು ತೊಡಿಸಿ ಹೋಟೆಲ್ ರೂಮ್‌ನ ಗೋಡೆಗಳಿಗೆ ಜೇಡರಹುಳುವಿನಂತೆ ಅಂಟಿಕೊಂಡಿರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.


ಬಾಹ್ಯಾಕಾಶ ಪ್ರವಾಸದ ಸಮಯದಲ್ಲಿ ಪ್ರಯಾಣಿಕರು ತೂಕರಹಿತತೆಯ ಅತ್ಯಂತ ಅವಿಸ್ಮರಣೀಯ ಕ್ಷಣಗಳನ್ನು ಅನುಭವಿಸಬಹುದು. ಈ ಬಾಹ್ಯಾಕಾಶ ಹೋಟೆಲ್ ಭೂಮಿಯ ಸುತ್ತ ವೇಗವಾಗಿ ತಿರುಗುವುದರಿಂದ ಪ್ರತಿ 80 ನಿಮಿಷಗಳಿಗೊಮ್ಮೆ ಭೂಮಿಯನ್ನು ಸುತ್ತು ಹಾಕಬಹುದು. ಪ್ರತಿ ದಿನ 15 ಬಾರಿ ಸೂರ್ಯೋದಯವನ್ನು ಕಾಣಬಹುದು. ಈಗಾಗಲೇ 200 ಪ್ರವಾಸಿಗರು ಈ ಬಾಹ್ಯಾಕಾಶ ಹೋಟೆಲ್‌ನಲ್ಲಿ ತಂಗುವುದಕ್ಕೆ ಆಸಕ್ತಿ ತೋರಿದ್ದು ಅವರಲ್ಲಿ 43 ಜನ ಈಗಾಗಲೇ ರೂಮುಗಳನ್ನು ಬುಕ್ ಮಾಡಿದ್ದಾರಂತೆ!

ಬಾಹ್ಯಾಕಾಶ ಶೌಚಾಲಯಗಳನ್ನು ನಿರ್ಮಿಸುವಲ್ಲಿ ನಿಪುಣರಾದ ರಶಿಯಾದ ಬಾಹ್ಯಾಕಾಶ ಎಂಜಿನಿಯರ್‌ಗಳು ಈ ಹೋಟೆಲ್ ಪಕ್ಕದಲ್ಲೇ ಸುಸಜ್ಜಿತ ಶೌಚಾಲಯಗಳನ್ನು ನಿರ್ಮಿಸಿ ಒಂದು ಸಾರಿ ಹೋಗಿ ಬರುವುದಕ್ಕೆ ಇಷ್ಟು ಡಾಲರ್ ಅಂಥ ಬೋರ್ಡ್ ಹಾಕಿ ಬಾಹ್ಯಾಕಾಶ ಪ್ರವಾಸಿಗರಿಂದ ದುಡ್ಡು ವಸೂಲಿ ಮಾಡುವುದು, ನಮ್ಮ ಕೇರಳದ ಮಲೆಯಾಳಿ ಕಾಕಗಳು ಈ ಹೋಟೆಲ್ ಪಕ್ಕ ಒಂದು ಪುಟ್ಟ ಟೀ ಅಂಗಡಿ ತೆರೆಯುವುದು, ಮುಂದಿನ ಪೀಳಿಗೆಯ ಮಕ್ಕಳು ತಮ್ಮ ವೀಕೆಂಡ್‌ಗಳನ್ನು ಬಾಹ್ಯಾಕಾಶದಲ್ಲೋ, ಚಂದ್ರನಲ್ಲೋ ಕಳೆಯುವುದು ಬಹಳ ದೂರವಿಲ್ಲ ಅನ್ನಿಸುತ್ತದೆ. ●




▶ಕುಮಾರ್ ಬುರಡಿಕಟ್ಟಿ

ಇದ್ಯಾವ ನ್ಯಾಯ?



ಬೃಹತ್ ಕೈಗಾರಿಕೆಗಳು ಮತ್ತು ವಾಹನಗಳು ಉಗುಳುವ ಇಂಗಾಲದ ಡೈ ಆಕ್ಸೈಡ್‌ನಂಥ ಹಸಿರುಮನೆ ಅನಿಲಗಳು ಭೂಮಿಯ ತಾಪಮಾನವನ್ನು ವೇಗವಾಗಿ ಹೆಚ್ಚಿಸುತ್ತಿರುವುದು ವಿಶ್ವದಾದ್ಯಂತ ಬಹಳ ಕಳವಳದ ವಿಚಾರವಾಗಿದೆ. ಭೂಬಿಸಿಯೇರುವುದು ಇದೇ ವೇಗದಲ್ಲಿ ಮುಂದುವರೆದರೆ ಮುಂದಿನ ಕೆಲವೇ ವರ್ಷಗಳಲ್ಲಿ ಹಿಮಾಲಯಗಳಂಥ ಹಿಮಚ್ಛಾದಿತ ಪರ್ವತಗಳೇ ಕರಗಿ ಕಣ್ಮರೆಯಾಗಲಿವೆ. ಭೂ ಮಧ್ಯ ರೇಖೆಯ ಆಜೂಬಾಜು ಪ್ರದೇಶವೆಲ್ಲಾ ಬಿಸಿಲಿನ ದಗೆಗೆ ಸಿಕ್ಕು ಮರುಭೂಮಿಯಾಗಿ ಪರಿವರ್ತನೆಗೊಂಡು ಜನವಸತಿಯೇ ಸಾಧ್ಯವಿಲ್ಲದಂಥ ಪರಿಸ್ಥಿತಿ ನಿರ್ಮಾಣವಾಗಲಿದೆ. 60 ವರ್ಷಗಳ ಬಳಿಕ ಈಗ ವಾಸಿಸುವುದಕ್ಕೆ ಸಾಧ್ಯವೇ ಇರದಂತಹ ಮಂಜುಗಡ್ಡೆಯಿಂದ ಆವೃತವಾಗಿರುವ ಭೂಮಿಯ ಉತ್ತರ ಹಾಗೂ ದಕ್ಷಿಣ ಧ್ರುವಗಳಲ್ಲಿನ ಹಿಮವೆಲ್ಲಾ ಕರಗಿ ಅದು ಮಾತ್ರವೇ ಜನವಸತಿಗೆ ಯೋಗ್ಯವಾಗಿರುತ್ತವಷ್ಟೆ. ಭೂಮಿಯ ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿರುವ ಅಗಾಧ ಪ್ರಮಾಣದ ಮಂಜು ಕರಗಿ ಸಮುದ್ರ ಸೇರುವುದರಿಂದ ಸಾಗರಗಳು ಉಕ್ಕೇರಲಿವೆ. ಹೀಗಾದರೆ ಸಮುದ್ರತೀರದಲ್ಲಿರುವ ಭೂಪ್ರದೇಶವೆಲ್ಲಾ ಮುಳುಗಿಬಿಡುತ್ತದೆ. ಸುತ್ತಲೂ ಸಮುದ್ರದಿಂದ ಆವೃತವಾಗಿರುವ ಚಿಕ್ಕಪುಟ್ಟ ದೇಶಗಳಂತೂ ಉಕ್ಕೇರಿದ ಸಾಗರದಲ್ಲಿ ಸಂಪೂರ್ಣವಾಗಿ ಮುಳುಗುವ ಅಪಾಯವನ್ನೆದುರಿಸಬೇಕಾಗುತ್ತದೆ. ಅತಿವೃಷ್ಟಿ ಅನಾವೃಷ್ಟಿ ಪ್ರವಾಹ, ಚಂಡಮಾರುತ, ಸುನಾಮಿಗಳಂಥ ಪ್ರಾಕೃತಿಕ ವಿಕೋಪಗಳು ಸರ್ವೇಸಾಮಾನ್ಯವಾಗಲಿವೆ. ಈ ಹಿನ್ನೆಲೆಯಲ್ಲಿ ಜಾಗತಿಕ ಬಿಸಿಯೇರಿಕೆಯನ್ನು ತಡೆಗಟ್ಟುವುದು ಮನುಕುಲದ ಉಳಿವಿಗಾಗಿನ ಅತ್ಯಂತ ತುರ್ತು ಅಗತ್ಯ ಎಂಬುದನ್ನು ಎಲ್ಲರೂ ಮನಗಂಡಿದ್ದಾರೆ.

ಆದರೆ ಜಾಗತಿಕ ಬಿಸಿಯೇರಿಕೆಯನ್ನು ತಡೆಗಟ್ಟುವುದು ಹೇಗೆ? ಸಮಸ್ಯೆ ಉದ್ಭವಕ್ಕೆ ಕಾರಣವನ್ನು ಕಂಡುಹಿಡಿದರೆ ಅರ್ಧ ಪರಿಹಾರವಾದಂತೆ. ಜಾಗತಿಕ ಬಿಸಿಯೇರಿಕೆಗೆ ಪ್ರಧಾನ ಕಾರಣ ಎಂದರೆ ಪೆಟ್ರೋಲಿಯಂ ಉತ್ಪನ್ನಗಳು, ಕಲ್ಲಿದ್ದಲುಗಳಂಥ ಇಂಧನಗಳನ್ನು ಉರಿಸುವುದರಿಂದ ಸೃಷ್ಟಿಯಾಗುವ ಇಂಗಾಲದ ಡೈ ಆಕ್ಸೈಡ್‌ನಂಥ ಹಸಿರುಮನೆ ಅನಿಲಗಳ ಪ್ರಮಾಣ ವಾತಾವರಣದಲ್ಲಿ ವೇಗವಾಗಿ ಹೆಚ್ಚಾಗುತ್ತಿರುವುದು. ಈ ಅನಿಲಗಳು ಸೃಷ್ಟಿಯಾಗುವುದನ್ನು ಕಡಿಮೆ ಮಾಡಿದರೆ ಜಾಗತಿಕ ಬಿಸಿಯೇರಿಕೆಯ ವೇಗವೂ ತನ್ನಿಂದ ತಾನೇ ಕಡಿಮೆಯಾಗುತ್ತದೆ. ಅಂದರೆ, ಕೈಗಾರಿಕೆ ಮತ್ತು ವಾಹನಗಳ ಬಳಕೆಯಿಂದಲೇ ಈ ಅನಿಲಗಳು ಸೃಷ್ಟಿಯಾಗುತ್ತಿರುವುದರಿಂದ ಅವುಗಳ ಬಳಕೆಯನ್ನು ಕಡಿಮೆ ಮಾಡಬೇಕು ಇಲ್ಲವೇ ಪರ್ಯಾಯ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು. ಇದು ಯಾವುದೋ ಒಂದು ದೇಶದ ಸಮಸ್ಯೆಯಲ್ಲವಾದ್ದರಿಂದ ಎಲ್ಲಾ ದೇಶಗಳೂ ಒಗ್ಗಟ್ಟಿನಿಂದ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಬೇಕಿದೆ.



ಈ ಹಿನ್ನೆಲೆಯಲ್ಲಿ 1997ರಲ್ಲೇ ಜಪಾನ್‌ನ ಕ್ಯೋಟೋದಲ್ಲಿ ವಿಶ್ವಸಂಸ್ಥೆ ಪ್ರಾಯೋಜಿತ ಸಮ್ಮೇಳನವೊಂದು ಜರುಗಿತ್ತು. ಅದರಲ್ಲಿ ಭಾಗವಹಿಸಿದ್ದ ಎಲ್ಲಾ ದೇಶಗಳೂ 1990ರ ದಶಕದಲ್ಲಿ ತಮ್ಮ ತಮ್ಮ ದೇಶಗಳಲ್ಲಿ ಸೃಷ್ಟಿಯಾಗುತ್ತಿದ್ದ ಹಸಿರುಮನೆ ಅನಿಲಗಳನ್ನು 2020ರ ವೇಳೆಗೆ ಶೇ.11 ರಿಂದ ಶೇ.15ರಷ್ಟು ಕಡಿಮೆಯಾಗುವಂತೆ ನೋಡಿಕೊಳ್ಳಬೇಕೆಂಬ ನಿರ್ಣಯವನ್ನು ತೆಗೆದುಕೊಂಡಿದ್ದವು. ಇಲ್ಲಿಯ ತನಕ ಈ ನಿರ್ಣಯಕ್ಕೆ ಸುಮಾರು 184 ದೇಶಗಳು ಸಹಿ ಹಾಕಿವೆ. ಮಾತುಕತೆಗಳು, ಸಮ್ಮೇಳನಗಳು ನಡೆಯುತ್ತಲೇ ಇವೆ. ಆದರೆ, ಸಮಸ್ಯೆ ಮಾತ್ರ ಅಪಾಯಕಾರಿಯಾಗಿ ಬೆಳೆಯುತ್ತಲೇ ಇದೆ. ಇದಕ್ಕೆ ಪ್ರಧಾನ ಕಾರಣ ಅಮೆರಿಕ, ಬ್ರಿಟನ್, ಜರ್ಮನಿ, ಜಪಾನ್‌ಗಳಂಥ ಮುಂದುವರೆದ ದೇಶಗಳ ಜೊಂಡುವಾದಿ ನಿಲುವುಗಳು ಎಂದರೆ ತಪ್ಪಾಗಲಾರದು. ಉದಾಹರಣೆಗೆ 'ಕ್ಯೋಟೋ ನಿರ್ಣಯ'ಕ್ಕೆ ಅಮೆರಿಕ ಸಹಿ ಹಾಕಿದೆಯಾದರೂ ತನ್ನ ದೇಶದ ಸಂಸತ್ತು ಅದನ್ನು ಒಪ್ಪಿಲ್ಲ ಎಂಬ ಕಾರಣಕ್ಕೆ ಆ ನಿರ್ಣಯಕ್ಕೆ ಅದು ಬದ್ಧವಾಗಿಲ್ಲ. ಹಾಗಾಗಿ, ಎಂದಿನಂತೆ ತನ್ನ ಕೈಗಾರಿಕೆಗಳನ್ನು ನಡೆಸುತ್ತಲೇ ಇದೆ, ಬೆಳೆಸುತ್ತಲೇ ಇದೆ. ಒಂದು ಅಧ್ಯಯನದ ಪ್ರಕಾರ ಇಡೀ ವಿಶ್ವದಲ್ಲಿ ಸೃಷ್ಟಿಯಾಗುತ್ತಿರುವ ಒಟ್ಟು ಹಸಿರುಮನೆ ಅನಿಲಗಳ ಪೈಕಿ ಶೇ.36ರಷ್ಟನ್ನು ಅಮೆರಿಕವೊಂದೇ ಉಗುಳುತ್ತಿದೆ! ಅಂದರೆ, ಭೂಬಿಸಿಯೇರಿಕೆಗೆ ಪ್ರಧಾನ ಹೊಣೆಗಾರ ಅಮೆರಿಕ. ಅದರ ಪರಿಣಾಮವನ್ನು ಎದುರಿಸಬೇಕಾದವರು ಕೇವಲ ಅಮೆರಿಕನ್ನರಲ್ಲ, ಬದಲಿಗೆ ಇಡೀ ವಿಶ್ವದ ಜನತೆ.

ಅಮೆರಿಕ ಒಂದು ಕಡೆ ತಾನೇ ಖುದ್ದಾಗಿ ಹಸಿರುಮನೆ ಅನಿಲಗಳನ್ನು ಯಥೇಚ್ಛವಾಗಿ ಉಗುಳುತ್ತಲೇ ಇನ್ನೊಂದು ಕಡೆ ಆ ಅನಿಲಗಳು ಹೆಚ್ಚು ಉತ್ಪತ್ತಿಯಾಗದಂತೆ ಎಚ್ಚರಿಕೆ ವಹಿಸಿ ಎಂದು ವಿಶ್ವದ ಅಭಿವೃದ್ಧಿಶೀಲ ಮತ್ತು ಹಿಂದುಳಿದ ರಾಷ್ಟ್ರಗಳಿಗೆ ಬುದ್ಧಿವಾದ ಹೇಳುತ್ತಿದೆ. ವಾಸ್ತವದಲ್ಲಿ ಹಿಂದುಳಿದ ದೇಶಗಳಲ್ಲಿ ಹಾಗೂ ಅಭಿವೃದ್ಧಿಶೀಲ ದೇಶಗಳಲ್ಲಿ ಬೃಹತ್ ಪ್ರಮಾಣದ ಕೈಗಾರಿಕೆಗಳೇ ಅಭಿವೃದ್ಧಿಗೊಂಡಿಲ್ಲವಾದ್ದರಿಂದ ಆ ದೇಶಗಳಲ್ಲಿ ಹಸಿರುಮನೆ ಅನಿಲಗಳು ಸೃಷ್ಟಿಯಾಗುತ್ತಿರುವುದು ತೀರಾ ಕಡಿಮೆ. ಆದರೂ ಅವುಗಳಿಗೆ ಅಮೆರಿಕ ಬುದ್ಧಿವಾದ ಹೇಳುತ್ತಿದೆ. ಅಮೆರಿಕದ ಬುದ್ಧಿವಾದವನ್ನೇನಾದರೂ ಈ ದೇಶಗಳು ಪಾಲಿಸಿದರೆ ಈಗ ಇರುವ ಕೈಗಾರಿಕೆಗಳನ್ನೆಲ್ಲಾ ಮುಚ್ಚಬೇಕಾಗುತ್ತದೆ. ಅಂದರೆ ಈಗಿರುವ ಹಿಂದುಳಿದಿರುವಿಕೆಯ ಪರಿಸ್ಥಿತಿಯಿಂದ ಇನ್ನಷ್ಟು ಹಿಂದುಳಿದಿರುವಿಕೆಗೆ ಹಿನ್ನುಗ್ಗಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ನವೆಂಬರ್ ತಿಂಗಳ ಮೊದಲ ವಾರದಲ್ಲಿ ಸ್ಪೇನ್‌ನ ಬರ್ಸಿಲೋನದಲ್ಲಿ ನಡೆಯುತ್ತಿರುವ ವಾತಾವರಣ ಬದಲಾವಣೆ ಕುರಿತ ಅಂತಾರಾಷ್ಟ್ರೀಯ ಚರ್ಚೆಗಳಲ್ಲಿ ಆಫ್ರಿಕದ ಅನೇಕ ದೇಶಗಳು ಭಾಗವಹಿಸುತ್ತಿಲ್ಲ. ಜಾಗತಿಕ ಬಿಸಿಯೇರಿಕೆಗೆ ಪ್ರಧಾನವಾಗಿ ಕಾರಣವಾಗಿರುವ ಅಮೆರಿಕ, ಬ್ರಿಟನ್, ಜರ್ಮನಿ, ಜಪಾನ್‌ಗಳಂಥ ದೇಶಗಳು ಮೊದಲು ತಮ್ಮ ದೇಶದಲ್ಲಿ ಹಸಿರುಮನೆ ಅನಿಲಗಳು ಸೃಷ್ಟಿಯಾಗುತ್ತಿರುವ ಪ್ರಮಾಣವನ್ನು ತಗ್ಗಿಸಲಿ, ಆಮೇಲೆ ತಮ್ಮನ್ನು ಕೇಳಲಿ ಎಂಬುದು ಆ ದೇಶಗಳ ವಾದ. ಆ ಮುಂದುವರಿದ ರಾಷ್ಟ್ರಗಳ ಜನತೆ ತಮ್ಮ ಜೀವನ ಶೈಲಿಗಳನ್ನು ಆಮೂಲಾಗ್ರವಾಗಿ ಬದಲಿಸಿಕೊಳ್ಳಲು ಸಿದ್ಧವಿದ್ದರೆ ಮಾತ್ರ ಕೈಗಾರಿಕೆಗಳನ್ನು ತಗ್ಗಿಸಲು ಸಾಧ್ಯ. ಆ ಮೂಲಕ ಈ ಅಪಾಯಕಾರಿ ಅನಿಲಗಳು ಸೃಷ್ಟಿಯಾಗುತ್ತಿರುವ ಪ್ರಮಾಣವನ್ನು ಕಡಿಮೆ ಮಾಡುವುದು ಸಾಧ್ಯ. ಆದರೆ ಅದಕ್ಕೆ ಅವರು ಸಿದ್ಧರಿಲ್ಲ. ಹೀಗಾಗಿ ಆ ದೇಶಗಳು ಹಿಂದುಳಿದ ದೇಶಗಳ ಮೇಲೆ ಒತ್ತಡ ತರುತ್ತಿವೆ. ಅದರ ಪರೋಕ್ಷ ಅರ್ಥ ಏನೆಂದರೆ ಹಿಂದುಳಿದ ದೇಶಗಳು ಇರುವ ಕೈಗಾರಿಕೆಗಳನ್ನೂ ಮುಚ್ಚಿ ಮತ್ತಷ್ಟು ಅಂಧಕಾರಕ್ಕೆ ಹೋಗಬೇಕಷ್ಟೆ. ●

ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಯಡ್ಡಿ?

ಒಂದು ವೇಳೆ ಸರ್ಕಾರ ಉಳಿಸಿಕೊಳ್ಳಲು ಯಡ್ಡಿಯನ್ನು ಬಲಿಕೊಡುವುದೇ ನಿಜವಾದರೆ ಅವರ ರಾಜಕೀಯ ಭವಿಷ್ಯದ ಬಗ್ಗೆಯೂ ಬಿಜೆಪಿ ಹೈಕಮಾಂಡ್ ಯೋಚಿಸಬೇಕಾಗುತ್ತದೆ. ಹಾಗೆಂದು ಮುಖ್ಯಮಂತ್ರಿಯಾಗಿದ್ದ ಯಡ್ಡಿಯನ್ನು ಕೇವಲ ಶಾಸಕನಾಗಿ ಉಳಿಸುವುದು ಅಸಾಧ್ಯವಾದ ಮಾತು. ಹಾಗಾಗಿ ಅವರನ್ನು ರಾಜ್ಯ ಬಿಜೆಪಿ ಅಧ್ಯಕ್ಷಗಿರಿಗೆ ತಂದು ಕೂರಿಸುವ ಸಾಧ್ಯತೆಗಳೂ ಇಲ್ಲದಿಲ್ಲ. ಹೇಗೂ ಮುಂದಿನ ಡಿಸೆಂಬರ್ ವೇಳೆಗೆ ಸದಾನಂದಗೌಡರ ಅವಧಿ ಮುಗಿಯುತ್ತದೆ. ಇದುವರೆಗೂ ಆ ಜಾಗಕ್ಕೆ ಬರಲು ಸಿ.ಟಿ. ರವಿ, ಮೈಸೂರಿನ ಮಾಜಿ ಸಂಸದ ವಿಜಯ ಶಂಕರ್‌ರವರ ಹೆಸರುಗಳು ಕೇಳಿಬರುತ್ತಿತ್ತು. ಈಗ ಬದಲಾಗುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಯಡ್ಡಿಗೆ ಸಿಎಂಗಿರಿ ಹೋದಲ್ಲಿ, "ಬಿಜೆಪಿ ಅಧ್ಯಕ್ಷರಾಗಿ ಪಕ್ಷ ಬಲಪಡಿಸಿ" ಎನ್ನಬಹುದು.

ಬಿಜೆಪಿ ಹೈಕಮಾಂಡಿಗೆ ಬೇರೆ ಆಯ್ಕೆ ತಾನೆ ಏನಿದೆ?

ಕೇಂದ್ರದಲ್ಲಿ ಅಧಿಕಾರವಿದ್ದಿದ್ದರೆ ಕೇಂದ್ರ ಮಂತ್ರಿಯಾಗಿಯೋ ಅಥವಾ ರಾಜ್ಯಪಾಲನಾಗಿಯೋ ಯಡ್ಡಿಯನ್ನು ದೂರಕ್ಕೆ ಸಾಗಿಸಿಬಿಡಬಹುದಿತ್ತಲ್ಲವೆ?

ಕಾಂಗ್ರೆಸ್ಸಿಗೆ ಬುದ್ಧಿಯಿದೆಯೆ?

ಕಾಂಗ್ರೆಸ್ಸಿಗೆ ಒಂದಿಷ್ಟಾದರೂ ಬುದ್ದಿಯಿದ್ದಿದ್ದರೆ ರಾಜ್ಯದಲ್ಲಿ ತಲೆದೋರಿರುವ ರಾಜಕೀಯ ಬಿಕ್ಕಟ್ಟನ್ನು ಅದ್ಭುತವಾಗಿ ಬಳಸಿಕೊಂಡು ಬಿಜೆಪಿಯನ್ನು ಇನ್ನಷ್ಟು ಶಿಥಿಲಗೊಳಿಸಬಹುದಿತ್ತು, ಜೊತೆ ಜೊತೆಗೆ ಜನರ ವಿಶ್ವಾಸವನ್ನು ಗೆದ್ದು ತಮ್ಮ ನೆಲೆಯನ್ನು ಇನ್ನಷ್ಟು ವಿಸ್ತರಿಸಿಕೊಳ್ಳಬಹುದಿತ್ತು. ಆದರೆ, ರಾಜ್ಯ ಕಾಂಗ್ರೆಸ್ ನಾಯಕರ ಅದಕ್ಷತೆಯಿಂದಾಗಿ ಅಂಥ ಅತ್ಯುತ್ತಮವಾದ ಅವಕಾಶವೊಂದು ಕೈತಪ್ಪಿ ಹೋಗುತ್ತಿದೆ.

ಅರ್ಧ ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳು ಪ್ರವಾಹಕ್ಕೆ ಸಿಕ್ಕು ತತ್ತರಿಸಿರುವಾಗ, ಜನ ಅನ್ನ, ನೀರು, ಸೂರುಗಳಿಲ್ಲದೇ ಬೀದಿಯಲ್ಲಿ, ನಿರಾಶ್ರಿತರ ಶಿಬಿರಗಳಲ್ಲಿ ಬಳಲುತ್ತಿರುವಾಗ, ಪರಿಹಾರ ಸಾಮಗ್ರಿಗಳು ಸರಿಯಾಗಿ ದೊರೆಯದೇ ಪರದಾಡುತ್ತಿರುವಾಗ ಬಿಜೆಪಿಯ ಎಮ್ಮೆಲ್ಲೆಗಳು ಅವರ ಜೊತೆಗಿದ್ದು ಧೈರ್ಯ ತುಂಬುತ್ತಾ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಪ್ರಯತ್ನಿಸುವುದನ್ನು ಬಿಟ್ಟು ಗೋವಾ ಮತ್ತು ಹೈದರಾಬಾದ್‌ಗಳ ರೆಸಾರ್ಟ್‌ಗಳಲ್ಲಿ ಮಜಾ ಮಾಡಯಿಸುತ್ತಿದ್ದಾರೆ. ತಾವು ಚುನಾವಣೆಯಲ್ಲಿ ಗೆಲ್ಲಿಸಿ ಅಧಿಕಾರಕ್ಕೇರಿಸಿರುವ ಎಮ್ಮೆಲ್ಲೆಗಳು ತಮ್ಮ ಕಷ್ಟಕ್ಕೆ ಸ್ಪಂದಿಸುವುದರ ಬದಲಿಗೆ ತಮ್ಮದೇ ಅಧಿಕಾರಕ್ಕಾಗಿ, ದುಡ್ಡಿಗಾಗಿ ರೆಸಾರ್ಟ್‌ಗಳಲ್ಲಿ ಮಜಾ ಮಾಡುತ್ತಿರುವುದರಿಂದ ಜನ ಕ್ರೋಧಗೊಂಡಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಕಾಂಗ್ರೆಸ್ ನಾಯಕರು ಪ್ರವಾಹಪೀಡಿತ ಪ್ರದೇಶಗಳ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಸಭೆ ನಡೆಸಿ ಕಳೆದ ಚುನಾವಣೆಯಲ್ಲಿ ಸ್ಪರ್ಧಿಸಿ ಬಿಜೆಪಿಯೆದುರು ಸೋತಿರುವ ಅಭ್ಯರ್ಥಿಗಳನ್ನು, ಗೆದ್ದು ಎಮ್ಮೆಲ್ಲೆಯಾಗಿರುವವರನ್ನು ತಮ್ಮ ಕ್ಷೇತ್ರಗಳಲ್ಲಿ ಪ್ರವಾಹದಿಂದ ತತ್ತರಿಸಿರುವ ಜನರೊಂದಿಗೆ ಬೆರೆತು ಅವರ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಕೆಲಸ ಮಾಡುವುದಕ್ಕೆ ಕಳಿಸಿದ್ದರೆ ತಾವು ಸೋಲಿಸಿದರೂ ಪರವಾಗಿಲ್ಲ, ಕಷ್ಟದಲ್ಲಿ ತಮಗೆ ನೆರವಾದರು ಎಂದು ಜನ ಕಾಂಗ್ರೆಸ್ಸಿಗರನ್ನು ಕೊಂಡಾಡುತ್ತಿದ್ದರು. ಗೆಲ್ಲಿಸಿದರೂ ತಮ್ಮ ನೆರವಿಗೆ ಬರಲಿಲ್ಲ ಎಂದು ಬಿಜೆಪಿ ಎಮ್ಮೆಲ್ಲೆಗಳಿಗೆ ಹಿಡಿ ಶಾಪ ಹಾಕುತ್ತಿದ್ದರು. ಅದರಿಂದ ತತ್‌ಕ್ಷಣದಲ್ಲಿ ಲಾಭವಾಗದಿದ್ದರೂ ಮುಂದಿನ ಚುನಾವಣೆಯಲ್ಲಿ ಒಂದು ಮಟ್ಟಿಗಾದರೂ ಅಂಶವಾಗಿ ಕೆಲಸ ಮಾಡುತ್ತಿತ್ತು.



ಆದರೆ, ಕಾಂಗ್ರೆಸ್ ನಾಯಕರು ಮಾತ್ರ ಆಗೊಮ್ಮೆ ಈಗೊಮ್ಮೆ ಈಗತಾನೇ ನಿದ್ರೆಯಿಂದೆದ್ದು ಬಂದವರಂತೆ ಒಂದು ಹೇಳಿಕೆಯನ್ನು ಕೊಟ್ಟು ಮನೆ ಸೇರುತ್ತಿದ್ದಾರೆಯೇ ಹೊರತು ಸಕ್ರಿಯವಾಗಿ ಜನರೊಂದಿಗೆ ಬೆರೆತು ಕೆಲಸ ಮಾಡುವ ಗೋಜಿಗೆ ಹೋಗುತ್ತಿಲ್ಲ. ಆ ಮೂಲಕ ತಮಗೆ ಸಿಕ್ಕಿರುವ ಒಂದು ಒಳ್ಳೆಯ ಅವಕಾಶವನ್ನು ತಮ್ಮ ಕೈಯಾರೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಸುಮ್ಮನೇ ಯೋಚಿಸಿ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು ಅದು ಇಂಥ ಬಿಕ್ಕಟ್ಟಿಗೆ ಸಿಲುಕಿದ್ದರೆ, ಜನ ಕಷ್ಟದಲ್ಲಿರುವಾಗ ಕಾಂಗ್ರೆಸ್ ಎಮ್ಮೆಲ್ಲೆಗಳೆಲ್ಲಾ ಅವರೊಂದಿಗಿರುವುದನ್ನು ಬಿಟ್ಟು ರೆಸಾರ್ಟ್ ಸೇರಿಕೊಂಡಿದ್ದರೆ ಬಿಜೆಪಿಗಳು ಎಂಥ ಕೋಲಾಹಲವೆಬ್ಬಿಸಿಬಿಡುತ್ತಿದ್ದರು? ಬಿಜೆಪಿ ಅಂಥ ಛಾತಿಯಿಂದಲೇ ಈ ಹೊತ್ತು ಇಷ್ಟೊಂದು ವರ್ಧಮಾನಕ್ಕೆ ಬಂದಿದ್ದು. ಅದರ ಅರ್ಧದಷ್ಟಾದರೂ ಡೈನಾಮಿಸಂ ಕಾಂಗ್ರೆಸ್ಸಿಗಿದ್ದಿದ್ದರೆ ಪರಿಸ್ಥಿತಿಯೇ ಬದಲಾಗಿರುತ್ತಿತ್ತು. ಖರ್ಗೆ-ಧ್ರಮ್ ಸಿಂಗ್ ಎಂಬ ಮುದಿ ಜೋಡಿ ತೊಲಗುವ ತನಕ ರಾಜ್ಯ ಕಾಂಗ್ರೆಸ್ ಉದ್ಧಾರವಾಗುವುದಿಲ್ಲ ಎಂದೇ ಹೇಳಲಾಗಿತ್ತು. ಕೊನೆಗೂ ಅವರು ರಾಜ್ಯ ರಾಜಕಾರಣದಿಂದ ತೊಲಗಿದ್ದಾಯಿತು. ಡಿಕೆಶಿ ಮತ್ತು ದೇಶಪಾಂಡೆಗಳು ಜವಾಬ್ದಾರಿ ವಹಿಸಿಕೊಂಡ ಮೇಲಾದರೂ ಕಾಂಗ್ರೆಸ್‌ಗೆ ಹಿಡಿದಿರುವ ಗ್ರಹಣ ಒಂದಿಷ್ಟಾದರೂ ಬಿಡಬಹುದೆಂದು ಜನ ನಿರೀಕ್ಷಿಸಿದ್ದುಂಟು. ಆದರೆ, ಮೂಲಭೂತವಾಗಿ ಅಂತಹದ್ದೇನೂ ಬದಲಾವಣೆಯಾಗಿಲ್ಲ ಎಂಬುದಕ್ಕೆ ಪ್ರಸ್ತುತ ಬಿಕ್ಕಟ್ಟಿನಲ್ಲಿ ಅವರು ವರ್ತಿಸುತ್ತಿರುವ ಪರಿಯೇ ಜೀವಂತಸಾಕ್ಷಿಯಾಗಿದೆ. ಕಾಂಗ್ರೆಸ್ಸಿಗೆ ಬುದ್ಧಿ ಬರುವುದ್ಯಾವಾಗ? ಅದು ಉದ್ಧಾರವಾಗುವುದ್ಯಾವಾಗ?



ಟ್ರಬಲ್ ಷೂಟರ್ ಸೋಮಣ್ಣನೂ ಪ್ರಾಬ್ಲಮ್ ಮೇಕರ್ ಚೇನಾ ರಾಮನೂ

ಗಣಿ ಮಾಫಿಯಾದ ದುಡ್ಡು ಮತ್ತು ಬಾಹುಬಲದ ಮುಂದೆ ಕಂಗಾಲಾದ ಯಡ್ಡಿಗೆ ಒಬ್ಬನೇ ಒಬ್ಬ ಟ್ರಬಲ್ ಶೂಟರ್ ಗತಿಯಿಲ್ಲ. ರೆಡ್ಡಿಗಳ ಕೋಟೆಗೆ ನುಗ್ಗಿ ಶಾಸಕರನ್ನು ಎಳೆದು ತರಬಲ್ಲ ಛಾತಿ ಮತ್ತು ಚಾಣಾಕ್ಷತೆಯುಳ್ಳ ಕಿಲಾಡಿಯಾದರೂ ಯಡ್ಡಿ ಬಣದಲ್ಲಿ ಯಾರಿದ್ದಾರೆಂದು ಹುಡುಕ ಹೊರಟರೆ ಕಣ್ಣಿಗೆ ಬೀಳುವುದು ರಾಮಚಂದ್ರೇಗೌಡ, ಆಚಾರ್ಯ, ಬಚ್ಚೇಗೌಡ, ಬೊಮ್ಮಾಯಿ, ಉದಾಸಿಯಂಥ ಸೋಮಾರಿ ಸೋಂಬೇರಿಗಳು ಮಾತ್ರ.

ಶ್ರೀರಾಮುಲು, ಕರುಣಾಕರ ರೆಡ್ಡಿ, ಜಾರಕಿಹೋಳಿ, ಶಿವನಗೌಡ, ಸೋಮಶೇಖರ ರೆಡ್ಡಿ, ಅಸ್ನೋಟಿಕರ್‌ರಂಥ ಕಸುಬುದಾರರಿಗೆ ಹೋಲಿಸಿದರೆ ಯಡ್ಡಿ ಪಾಳಯದಲ್ಲಿ ಅಷ್ಟಿಷ್ಟು ಚಾಲಾಕಿ ಅಂತಿರುವವನು ಸೋಮಣ್ಣ. ಯಡ್ಡಿಯ ದೌರ್ಭಾಗ್ಯವೆಂದರೆ ಸೋಮಣ್ಣನೇ ತಳಹಿಡಿದು ಕೂತಿದ್ದಾನೆ. ಸೋತರೇನಂತೆ ಕನಿಷ್ಠ ರೆಡ್ಡಿ ಗ್ಯಾಂಗ್ ವಿರುದ್ಧದ ಕಾರ್ಯಾಚರಣೆಗಾದರೂ ಸೋಮಣ್ಣನನ್ನು ಬಳಸಿಕೊಳ್ಳಬೇಕೆಂಬ ಉಪಾಯ ಯಡ್ಡಿ ತಲೆಗೆ ಹೊಳೆಯುತ್ತಿಲ್ಲ. ಏನೇ ಆದರೂ ತನ್ನ ಜೊತೆಗಿರುತ್ತಾರೆಂದು ಯಾವ ಅಶೋಕ್ ಮತ್ತು ಕಟ್ಟಾರನ್ನು ಯಡ್ಡಿ ನಂಬಿಕೊಂಡಿದ್ದರೋ ಕಷ್ಟ ಕಾಲದಲ್ಲೇ ಅವರೇ ಕೈಕೊಟ್ಟ ಮೇಲೆ ಉಳಿದೊಬ್ಬ ಸೋಮಣ್ಣನನ್ನು ಬಳಸಿಕೊಳ್ಳದ ಯಡ್ಡಿಯನ್ನು ಇನ್ನು ಬಚ್ಚೇಗೌಡ ಗೀಗೌಡ ಏನಂಥ ಉಳಿಸಿಯಾನು?

ಅಷ್ಟಕ್ಕೂ ಯಡ್ಡಿ ಸರ್ಕಾರವನ್ನು ಉಳಿಸಿಕೊಳ್ಳಲು ಬಚ್ಚೇಗೌಡ ಹಿಡಿದು ತಂದ ಪರಾಕ್ರಮಿಯಾದರೂ ಯಾರು ಅಂತ ನೋಡಿದರೆ ಆತ ಮಸೂಲಿ ವೀರ ಚೇನಾ ರಾಮು!

"ನೋಡಿ ಸಾರ್ ಇವ್ನು ನನ್ನ ಶಿಷ್ಯ ಚೇನಾ ರಾಮು ಅಂತ. ಗ್ರೇಟ್ ದಲಿತ ಲೀಡರ್ರು. ಇವ್ನು ಮನಸ್ಸು ಮಾಡಿದ್ರೆ ರಾಜ್ಯದ್ಯಂತ ದಲಿತ ಸಂಘಟನೆಗಳೆಲ್ಲ ರೆಡ್ಡಿಗಳ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡಿಸ್ತಾರೆ. ಆಗ ರೆಡ್ಡಿಗಳು ಮತ್ತು ಅವರನ್ನು ಬೆಂಬಲಿಸೋ ಎಮ್ಮೆಲ್ಲೇಗಳೆಲ್ಲ ಮುದುರ್ಕೊಂತಾರೆ. ನೀವು ಒಂಚೂರ್ ಬ್ಯಾಕಪ್ ಮಾಡ್ತೀರಿ ಅಂದ್ರೆ ನಾಳೆಯಿಂದಲೇ ನಂ ಹುಡ್ಗ ಕೆಲ್ಸ ಶುರು ಹಚ್ಕೊಂತಾನೆ... ಏನಂತೀರಿ?" ಅಂದರಂತೆ ಬಚ್ಚೇಗೌಡ.

ಮುಖಕ್ಕೆ ತುಂಬಾ ಚೆನ್ನದ ಒಡವೆ ಹಾಕ್ಕೊಂಡು ಪಕ್ಕಾ ದಲಾಯತನಂತೆ ಕಾಣುತ್ತಿದ್ದ ಚೇನಾ ರಾಮುನನ್ನು ನೋಡಿದ್ದೇ ಯಡ್ಡಿ, "ಅಲ್ರೀ ಬಚ್ಚೇಗೌಡ್ರೆ.... ಇವ್ನು ಏನು? ಇವ್ನ ಹಣೆಬರ ಏನು ಅಂತ ನನಗೆ ಗೊತ್ತಿಲ್ವಾ? ಇವ್ನಿಗೆ ಕಾಸು ಕೊಟ್ಟು ನನ್ನ ವಿರುದ್ಧ ಬಂಟರನ್ನು ಬಿಟ್ಟು ಹೋರಾಟ ಮಾಡಿಸುವಂತಾ ದಾರಿದ್ರ್ಯ ನನಗೇನು ಬಂದೈತೆ? ಅಯೋಧ್ಯಾ ರಾಮನೇ ನಮಗೆ ಆಧಾರವಾಗಿರುವಾಗ ಈ ಬ್ಲ್ಯಾಕ್ ರಾಮು ಯಾವ ಲೆಕ್ಕಾನೀ? ಉಗಿದ್ಬಿಟ್ಟ ಇವನ್ನಾ....!" ಎಂದದ್ದೇ ತಡ ಬಚ್ಚೇಗೌಡ ಜಾಗ ಖಾಲಿ ಮಾಡಿದರಂತೆ.

ಯಡ್ಯೂರಪ್ಪನವರ ಕಚೇರಿ ಎಂತೆಂಥವರೆಲ್ಲ ಗಂಟು ಬೀಳುತ್ತಾರೆಂಬುದಕ್ಕೆ ಇದಕ್ಕಿಂತ ಬೇಕೆ?

ಮುಗಿದ ಅಧ್ಯಾಯ?

ಯಡಿಯೂರಪ್ಪ ಗೆಲ್ಲಲಾಗದ ಯುದ್ಧವಿದು ಎಂಬುದು ದಿನಕಳೆದಂತೆ ಖಚಿತವಾಗುತ್ತಿದೆ.

ಬಿಜೆಪಿ ಹೈಕಮಾಂಡ್ ಜೊತೆಗಿದೆ ಎಂಬುದನ್ನು ಬಿಟ್ಟರೆ ಯಡ್ಡಿ ಗ್ಯಾರಂಟಿಯಾಗಿ ನಂಬಿಕೊಳ್ಳಬಹುದಾದ ಬಿಜೆಪಿ ಲೀಡರ್‌ಗಳ್ಯಾರೂ ಕರ್ನಾಟಕದಲ್ಲಿ ಉಳಿದಿಲ್ಲ. ಈಗಿನ ಬಿಕ್ಕಟ್ಟಿನ ತೀವ್ರತೆ ಗಮನಿಸಿದರೆ ಅಕಸ್ಮಾತ್ ಹೈಕಮಾಂಡ್ ಕೈಬಿಟ್ಟರೆ ಅಲ್ಲಿಗೆ ಯಡ್ಡಿಯ ರಾಜಕೀಯ ಅಧ್ಯಾಯ ಕೊನೆಗೊಂಡಂತೆಯೇ ಸರಿ.

ಆ ಅರ್ಥದಲ್ಲಿ ಯಡ್ಡಿ ಈಗ ಏಕಾಂಗಿ. ರೆಡ್ಡಿಗಳು, ರೇಣುಕಾಚಾರ್ಯ ಭಿನ್ನಮತೀಯರಾಗಿರುವುದು, ಈಶ್ವರಪ್ಪ, ಅನಂತ್‌ಕುಮಾರ್‌ರ ಮಸಲತ್ತುಗಳು, ಅಶೋಕ್, ಕಟ್ಟಾ ನಾಯ್ಡುಗಳು ಯಡ್ಡಿ ಕ್ಯಾಂಪಿನಿಂದ ನಾಪತ್ತೆಯಾಗಿರುವುದರಲ್ಲಿ ಅಂತ ವಿಶೇಷ ಏನೂ ಇಲ್ಲ.

ಈ ಕ್ಷಣದ ಲೇಟೆಸ್ಟ್ ಬೆಳವಣಿಗೆ ಏನೆಂದರೆ ಶೋಭಾ ಕರಂದ್ಲಾಜೆ ಕೂಡ 'ನನಗೆ ಪಕ್ಷ ಮುಖ್ಯ ವ್ಯಕ್ತಿಯಲ್ಲ' ಎನ್ನುತ್ತಿರುವುದು....! ಧರ್ಮೇಚ, ಅರ್ಥೇಚ... ಹೀಗೆ ಇನ್ನು ಹಲವು ರೀತಿಯಲ್ಲಿ 24 ಗಂಟೆಯೂ ಯಡ್ಡಿಯ ಬೆನ್ನಿಗಿರುತ್ತಿದ್ದ ಮಂತ್ರಿಣಿಗೂ ವ್ಯಕ್ತಿಗಿಂತ ಪಕ್ಷ ಮುಖ್ಯವಾಗುತ್ತಿರುವುದು ನಿರ್ಲಕ್ಷಿಸುವಂತ ಸಂಗತಿಯಲ್ಲ. ಕಳೆದ ಹತ್ತು ದಿನಗಳ ವಿದ್ಯಮಾನ ಗಮನಿಸಿದಾಗ ರೆಡ್ಡಿಗಳ ಕಠೋರ ಹಾಗೂ ದೃಢ ನಿಲುವು ಎಷ್ಟಿದೆಯೆಂದು ಗೊತ್ತಾಗುತ್ತದೆ. ಭಿನ್ನಮತ ಸ್ಫೋಟಗೊಂಡ ಮೊದಲ ಹಂತದಲ್ಲಿ ಸಿ.ಟಿ. ರವಿ, ಅಶೋಕ್‌ಗಿಂತ ಗ್ರಾಂ ಲೆಕ್ಕದ ಲೈಟ್‌ವೈಯ್ಟ್ ಜನ ರೆಡ್ಡಿಗಳ ಬಳಿ, ಜಗದೀಶ್ ಶೆಟ್ಟರ್ ಬಳಿ ಹೋಗಿ ಮಾತಾಡಿ ಬರುತ್ತಿದ್ದರು. ನಂತರ ವಿ.ಎಸ್. ಆಚಾರ್ಯ, ಸದಾನಂದ ಗೌಡ ತರಹದ ಕೇಜಿ ತೂಕದವರ ಪ್ರವೇಶವಾಯಿತು. ಇದ್ಯಾವುದು ಫಲ ನೀಡದಿದ್ದಾಗ ಸುತ್ತೂರು ಸ್ವಾಮಿ ಸಿದ್ದಗಂಗಾ ಸ್ವಾಮಿಗಳ ರಂಗ ಪ್ರವೇಶವಾಗಿತ್ತು, ಇವರದು ಕ್ವಿಂಟಾಲ್ ತೂಕ ಅಂತಿಟ್ಟುಕೊಂಡರೂ ಏನು ಗಿಟ್ಟರಲಿಲ್ಲ. ಇಷ್ಟಕ್ಕೂ ಆ ಹಂತದವರೆಗೂ ಸಂಧಾನ ಮಾತುಕತೆಗಳು ಜಗದೀಶ್ ಶೆಟ್ಟರ್ ಸುತ್ತ ಮಾತ್ರ ಕೇಂದ್ರೀಕೃತಗೊಂಡಿದ್ದವು. ಆದರೆ ಈಗ ದೆಹಲಿಯಲ್ಲಿ ಏನಾಗುತ್ತಿದೆ ನೋಡಿ. ಶೆಟ್ಟರ್ ಸೀನ್‌ನಲ್ಲೇ ಇಲ್ಲ. ಜನಾರ್ದನ ರೆಡ್ಡಿಯೇ ಎಲ್ಲಾ ಎನ್ನುವಂತಾಗಿದೆ. ಬಿಜೆಪಿ ಹೈಕಮಾಂಡ್‌ನವರದ್ದು ಟನ್ ತೂಕ ಅಂತಿಟ್ಟುಕೊಂಡರೂ ರೆಡ್ಡಿ ಇಂಥ ಸಾವಿರಾರು ಟನ್‌ಗಳನ್ನು ಟಿನ್ ಡಬ್ಬಿದಂತೆ ಎತ್ತಿ ಬಿಸಾಡಬಲ್ಲಾತ.

'ನಾಯಕತ್ವ ಬದಲಾವಣೆ ಆಗಲೇಬೇಕು' ಎಂಬುದೇ ಅವರ ಒನ್ ಪಾಯಿಂಟ್ ಅಜೆಂಡಾ ಆಗಿದೆ. ಬಿಜೆಪಿ ನಾಯಕರು ಇದಕ್ಕೊಪ್ಪದೆ ಹೋದರೆ **breaking point** ತಲುಪಿರುವ ಈ ಬಿಕ್ಕಟ್ಟು ರಾಜ್ಯ ಬಿಜೆಪಿ ಸರ್ಕಾರವನ್ನು ಕೆಡವಿ ಹಾಕುವುದು ಖಚಿತ. ಅದಕ್ಕೆ ಒಂದು ಸಣ್ಣ ಸಾಕ್ಷಿಯೆಂಬಂತೆ ಹೈದರಾಬಾದ್‌ನಲ್ಲಿರುವ ರೇಣುಕಾಚಾರ್ಯನ ಗ್ಯಾಂಗ್ ಯಡ್ಡಿ-ಶೋಭಾರ ಬಗ್ಗೆ ಗಾಂಭೀರ್ಯವಿರದ ಮಾತುಗಳಾಡಿದೆ. ಟಿವಿ ಸ್ಟುಡಿಯೊಂದರಲ್ಲಿ ಕುಳಿತು ಸಾಮೂಹಿಕ ರಾಜೀನಾಮೆಯ ಬೆದರಿಕೆ ಹಾಕಿದೆ.

ದಾರಿ ಯಾವುದು ಪರಿಹಾರಕ್ಕೆ

ಈ ಬಿಕ್ಕಟ್ಟಿನ ಅಂತಿಮ ಫಲಿತಾಂಶ ಎರಡು ರೀತಿಯಲ್ಲಿರಬಹುದು.


ಒಂದು ಯಡ್ಡಿಯನ್ನು ಉಳಿಸಿಕೊಂಡು ರೆಡ್ಡಿಗಳ ವಿರೋಧ ಕಟ್ಟಿಕೊಂಡು ಸರ್ಕಾರ ಬಲಿಕೊಡುವುದು.

ಇನ್ನೊಂದು ಯಡ್ಡಿಯನ್ನೇ ಬಲಿಕೊಟ್ಟು ಶೆಟ್ಟರ್‌ಗೆ ಸಿಎಂಗಿರಿ ನೀಡಿ ಸರ್ಕಾರ ಉಳಿಸಿಕೊಳ್ಳುವುದು. ಇವೆರಡರಲ್ಲಿ ಬಿಜೆಪಿಗೆ ಲಾಭವಿರುವುದು ಎರಡನೇ ದಾರಿಯಲ್ಲೇ ವಿನಃ ಮೊದಲನೆಯದರಲ್ಲಿ ಅಲ್ಲವೇ ಅಲ್ಲ. ರೆಡ್ಡಿಗಳ ಅಪೇಕ್ಷೆಯಂತೆ ಶೆಟ್ಟರ್ ಸಿಎಂ ಆಗೇಬಿಡಲಿ ಎಂದು ಅಂತಿಮವಾಗಿ ಹೈಕಮಾಂಡ್ ಗ್ರೀನ್‌ಸಿಗ್ನಲ್ ಕೊಟ್ಟೇಬಿಟ್ಟರೆ ಹೊಸ ಸರ್ಕಾರವನ್ನು ಕೆಡವಿ ಬೀಳಿಸುವ ಶಕ್ತಿ ಯಡ್ಡಿಗಿರುವುದಿಲ್ಲ. ಏಕೆಂದರೆ ಬಿಜೆಪಿಯ **117** ಶಾಸಕರ ಪೈಕಿ ರೆಡ್ಡಿ ಗುಂಪಿನಲ್ಲಿ ಕನಿಷ್ಠ **60** ಮಂದಿ ಇದ್ದಾರೆ. ಇನ್ನು ಈಶ್ವರಪ್ಪ, ನಂದೀಶ್ ರೆಡ್ಡಿ, ಅಶೋಕ್, ಕಟ್ಟಾ ನಾಯ್ಡು, ಸಿ.ಟಿ. ರವಿ, ಆನೇಕಲ್ ನಾರಾಯಣಸ್ವಾಮಿ, ರಾಮದಾಸ್, ಶಂಕರಲಿಂಗೇಗೌಡ ತರದ 30ಕ್ಕೂ ಹೆಚ್ಚು ಶಾಸಕರು ತಟಸ್ಥ ಮೂರನೇ ಗುಂಪಿನಲ್ಲಿದ್ದಾರೆ. ಅಂದರೆ ಇವರೆಲ್ಲಾ ಯಡ್ಡಿ ಪರ ಇಲ್ಲ ಎಂದಾಯಿತು. ಹೀಗಾಗಿ ಯಡ್ಡಿ ಕ್ಯಾಂಪಿನಲ್ಲಿ ಉಳಿಯುವವರು ಯಾರು?

ಶೋಭಾ, ಆಚಾರ್ಯ, ಬಚ್ಚೇಗೌಡ, ಹಾಲಪ್ಪ, ನಿರಾಣಿ, ಉದಾಸಿಗಳು ಮಾತ್ರ. ಇವರ ಬೆಂಬಲವೂ ಹೈಕಮಾಂಡಿನ ಅಂತಿಮ ನಿರ್ಣಯವನ್ನು ಆಧರಿಸಿರುತ್ತದೆಯೇ ವಿನಃ ನೂರಕ್ಕೆ ನೂರು ಯಡ್ಡಿ ನಿಷ್ಠೆಯೇನಲ್ಲ. ನಾಳೆ ಹೈಕಮಾಂಡ್ ಶೆಟ್ಟರ್ ಪರ ವಾಲಿದರೆ ಈಗ ಯಡ್ಡಿ ಜೊತೆಗಿರುವ ಅನೇಕರು 'ವ್ಯಕ್ತಿಗಿಂತ ಪಕ್ಷ ಮುಖ್ಯ' ರಾಗ ಹಾಡತೊಡಗುತ್ತಾರೆ. ರಾಜಕೀಯದಲ್ಲಿ ಇಂಥ ಬಿಕ್ಕಟ್ಟು ಬಂದಾಗೆಲ್ಲಾ ಪ್ರಾಣಮಿತ್ರರಂತಿದ್ದವರೂ ನಾಯಕನನ್ನು ನಡುನೀರಿನಲ್ಲೇ ಕೈಬಿಟ್ಟು ಹೋಗಿರುವುದನ್ನು ಜನ ನೋಡಿಲ್ಲವೆ?

ಅಂಥ ದೇವರಾಜ ಅರಸು, ವೀರೇಂದ್ರ ಪಾಟೀಲ್, ಬೊಮ್ಮಾಯಿ ಅಧಿಕಾರ ಕಳೆದುಕೊಂಡಾಗಲೂ ಅಂದರೆ ಪಕ್ಷದ ಕೃಪಾಕಟಾಕ್ಷ ಹೋದ ತಕ್ಷಣ ಒಬ್ಬಂಟಿಯಾಗಿ ಹೋಗಿದ್ದರು. 'ರಾಜಕೀಯದಲ್ಲಿ ಶಾಶ್ವತ ಶತ್ರುಗಳಾಗಲಿ ಮಿತ್ರರಾಗಲಿ ಇರುವುದಿಲ್ಲ' ಎಂಬ ಅರಸುರ ವೇದವಾಕ್ಯ ಹುಟ್ಟಿದ್ದೇ ಇಂಥ ಸನ್ನಿವೇಶದಲ್ಲಿ. ಮುಂದಿನ ಎರಡು ದಿನ ಯಾಕೆ ನಾಲ್ಕು ದಿನ ಆದ ನಂತರವೂ ಯಡ್ಡಿ ತಲೆದಂಡ ಖಚಿತ ಎಂಬ ವಾತಾವರಣ ಸೃಷ್ಟಿಯಾಗಿದೆ. ಮಧ್ಯೆ ಯಡ್ಡಿ ಸೂಸೈಡ್ ಬಾಂಬರ್ ಆಗುವ, ವಿಧಾನಸಭೆ ವಿಸರ್ಜನೆಗೆ ಶಿಫಾರಸ್ಸು ಮಾಡಿಬಿಡುವ ಮಾತುಗಳೂ ಕೇಳಿಬರುತ್ತಿವೆ. ಇದು ಅಷ್ಟು ಸುಲಭವಲ್ಲ. ರೆಡ್ಡಿ ಕ್ಯಾಂಪಿನಲ್ಲಿರುವ ಶಾಸಕರನ್ನು ಬೆದರಿಸಲು ಮಾತ್ರ ಯಡ್ಡಿ ಈ ಡೈಲಾಗ್ ಎಸೆದಿದ್ದಾರೆ. ಜೊತೆಗೆ ಹತಾಶೆ, ಆಕ್ರೋಶಗಳೂ ಇದ್ದಿರಲಿಕ್ಕೂ ಸಾಕು. ಆದರೆ ಹೈಕಮಾಂಡ್ ಯಡ್ಡಿ ಕೈಬಿಟ್ಟರೆ ಶೆಟ್ಟರ್ ನೇತೃತ್ವದ ಸರ್ಕಾರ ಸುಭದ್ರವಾಗಿರುವಂತೆ ವ್ಯವಸ್ಥೆ ಮಾಡಿಯೇ ಮುಂದಡಿ ಇರುತ್ತಾರೆಯೇ ವಿನಃ ಯಡ್ಡಿ ಸೂಸೈಡ್ ಬಾಂಬರ್ ಆಗಲು ಅವಕಾಶ ನೀಡಲಾರರು. ಅದೇ ರೆಡ್ಡಿಗಳ ವಿಚಾರಕ್ಕೆ ಬಂದರೆ ಅವರ ಬೇಡಿಕೆ ಈಡೇರದೆ ಹೋದಲ್ಲಿ ಅವರು ಗುಂಪು ಸೂಸೈಡ್ ಬಾಂಬರ್‌ಗಳಾದಂತೆ ತಡೆಯುವ ಶಕ್ತಿ ಹೈಕಮಾಂಡಿಗಿಲ್ಲ.

ಯಡ್ಡಿಯ ಅಧ್ಯಾಯ ಮುಗಿಯುತ್ತಾ ಬಂದಿದೆ ಎನ್ನಲು ಈ ಬೆಳವಣಿಗೆಗಳೇ ಸಾಕ್ಷಿ.



ಕರ್ನಾಟಕದ ಮೇಲೆ ಆಂಧ್ರ ರಾಜಕೀಯದ ನೆರಳು

ಜಗನ್ ಅತೃಪ್ತಿ ಯಡ್ಡಿಗೆ ಬತ್ತಿ

ಇವತ್ತು ಯಡ್ಡಿ ವಿರುದ್ಧ ನಿಂತಿರುವ ರೆಡ್ಡಿ ಸೋದರರಿಗೆ ಜಗನ್ ಜೊತೆಗಿರುವ ಬ್ಯುಸಿನೆಸ್‌ಗಳು ಮತ್ತು ಇವರಿಬ್ಬರ ಹಿಂದಿರುವ ಹತ್ತಾರು ಬೃಹತ್ ಉದ್ದಿಮೆದಾರರ ವ್ಯಾಪಾರ, ವ್ಯವಹಾರ, ಪ್ರಾಜೆಕ್ಟುಗಳ ಲೆಕ್ಕಾಚಾರ ಗಮನಿಸಿದರೆ ಇಂಥ ಅನುಮಾನ ಬಾರದಿರದು! ಆಂಧ್ರದ ಅನೇಕ ಪ್ರಾಜೆಕ್ಟುಗಳಲ್ಲಿ ಹತ್ತಾರು ಸಾವಿರ ಕೋಟಿ ಬಂಡವಾಳ ಹೂಡಿ ಲಾಭ ದೋಚಲು ಕಾದಿದ್ದ ಈ ಕಂಪನಿಗಳಿಗೆ ವೈಎಸ್‌ಆರ್ ಸಾವು ಭಾರಿ ಅನಾಹುತ ತಂದೊಡ್ಡಿದೆ. ಒಂದು ವೇಳೆ ಜಗನ್ ಸಿಎಂ ಆಗಿಬಿಟ್ಟಿದ್ದರೆ ರೆಡ್ಡಿ ಬ್ರದರ್ಸ್ ಸೇರಿದಂತೆ ಈ ಗುಂಪಿಗೆ ಒಂದು ರಾಜ್ಯದ ಸರ್ಕಾರವಾದರೂ ತಮ್ಮ ಕೈಲಿದೆಯಲ್ಲ ಎಂಬ ಸಮಾಧಾನವಾದರೂ ಇರುತ್ತಿತ್ತೇನೋ.

ಹಾಲಿ ಕರ್ನಾಟಕ ಬಿಜೆಪಿಯೊಳಗಿನ ಬಿಕ್ಕಟ್ಟಿನಲ್ಲಿ ಪಕ್ಕದ ಆಂಧ್ರ ರಾಜಕೀಯದ ಘಟನಾವಳಿಗಳ ಪ್ರಭಾವ ಇದೆಯಾ?


ನೇರವಾಗಿ ಹೇಳಬೇಕೆಂದರೆ ರಕ್ಕಸ ರಾಜಕಾರಣಿ ವೈ.ಎಸ್.ಆರ್. ಸತ್ತ ನಂತರ ಆತನ ಮಗ ಜಗನ್ ಆಂಧ್ರ ಮುಖ್ಯಮಂತ್ರಿಯಾಗದೇ ಹೋದದ್ದೇ ಇತ್ತ ಯಡಿಯೂರಪ್ಪನ ಕುರ್ಚಿ ಅಲ್ಲಾಡಲು ಕಾರಣವಾಗಿರಬಹುದಾ?

ಇವತ್ತು ಯಡ್ಡಿ ವಿರುದ್ಧ ನಿಂತಿರುವ ರೆಡ್ಡಿ ಸೋದರರಿಗೆ ಜಗನ್ ಜೊತೆಗಿರುವ ಬ್ಯುಸಿನೆಸ್‌ಗಳು ಮತ್ತು ಇವರಿಬ್ಬರ ಹಿಂದಿರುವ ಹತ್ತಾರು ಬೃಹತ್ ಉದ್ದಿಮೆದಾರರ ವ್ಯಾಪಾರ, ವ್ಯವಹಾರ, ಪ್ರಾಜೆಕ್ಟುಗಳ ಲೆಕ್ಕಾಚಾರ ಗಮನಿಸಿದರೆ ಇಂಥ ಅನುಮಾನ ಬಾರದಿರದು!

ಆಂಧ್ರದ ಅನೇಕ ಪ್ರಾಜೆಕ್ಟುಗಳಲ್ಲಿ ಹತ್ತಾರು ಸಾವಿರ ಕೋಟಿ ಬಂಡವಾಳ ಹೂಡಿ ಲಾಭ ದೋಚಲು ಕಾದಿದ್ದ ಈ ಕಂಪನಿಗಳಿಗೆ ವೈಎಸ್‌ಆರ್ ಸಾವು ಭಾರಿ ಅನಾಹುತ ತಂದೊಡ್ಡಿದೆ. ಒಂದು ವೇಳೆ ಜಗನ್ ಸಿಎಂ ಆಗಿಬಿಟ್ಟಿದ್ದರೆ ರೆಡ್ಡಿ ಬ್ರದರ್ಸ್ ಸೇರಿದಂತೆ ಈ ಗುಂಪಿಗೆ ಒಂದು ರಾಜ್ಯದ ಸರ್ಕಾರವಾದರೂ ತಮ್ಮ ಕೈಲಿದೆಯಲ್ಲ ಎಂಬ ಸಮಾಧಾನವಾದರೂ ಇರುತ್ತಿತ್ತೇನೊ. ಆದರೆ ಅದೇಕೊ ಏನೋ ಸೋನಿಯಾ ಗಾಂಧಿ ಕೃಪೆ ಜಗನ್ ಕಡೆಗೆ ತಿರುಗಲಿಲ್ಲ, ಕಳೆದ ಸೆಪ್ಟೆಂಬರ್ ಅಂತ್ಯದ ವೇಳೆಗೆ ರೋಸಯ್ಯ ಆಂಧ್ರ ಸಿಎಂ ಆಗಿಯೇ ಉಳಿಯುತ್ತಾರೆ ಎಂಬುದು ಗ್ಯಾರಂಟಿಯಾದ ಮೇಲೆ ಈ ರೆಡ್ಡಿ-ಜಗನ್-ವ್ಯಾಪಾರಿಗಳ ಗುಂಪಿನ ಗಮನ ಕರ್ನಾಟಕದತ್ತ ತಿರುಗಿತು. ಅರ್ಥಾತ್ ಆಂಧ್ರ ಸರ್ಕಾರ ಕೈಗೆ ಸಿಗದಿದ್ದರೇನಾಯಿತು ಕಡೇ ಪಕ್ಷ ಕರ್ನಾಟಕ ಸರ್ಕಾರವನ್ನಾದರೂ ವಶಪಡಿಸಿಕೊಳ್ಳೋಣವೆಂಬ ಪಿತೂರಿಯ ಭಾಗವಾಗಿ ಇವತ್ತಿನ ಬಿಕ್ಕಟ್ಟು ಕಾಣಿಸಿಕೊಂಡಿರುವಂತಿದೆ.

ಕಾಂಗ್ರೆಸ್ ಪಾರ್ಟಿ ಅಲ್ಲ ವೈಎಸ್‌ಆರ್ ಪಾರ್ಟಿ

ಆಂಧ್ರದಲ್ಲಿ ಕಳೆದ 10 ವರ್ಷಗಳಿಂದೀಚೆಗೆ ಕಾಂಗ್ರೆಸ್ ಅನ್ನು ಯಾರೂ ಸಹ ಸೋನಿಯಾ ಪಾರ್ಟಿ ಅನ್ನುತ್ತಿರಲಿಲ್ಲ, ಬದಲಿಗೆ ವೈಎಸ್‌ಆರ್ ಪಾರ್ಟಿ ಎಂದೇ ಹೇಳುತ್ತಿದ್ದರು. ರೆಡ್ಡಿಯ ಪ್ರಭಾವ ಆ ಮಟ್ಟಕ್ಕೆ ಬೆಳೆದಿತ್ತು, ಪಕ್ಷವನ್ನು ಮೀರಿಸಿ ವ್ಯಕ್ತಿಯೇ ಬೆಳೆದಿದ್ದು ಸ್ವತಃ ಸೋನಿಯಾಗೂ ಸಮಾಧಾನ ತಂದಿರಲಿಲ್ಲ, ಆದರೆ ವೈಎಸ್‌ಆರ್ ಬಿಟ್ಟರೆ ಆಂಧ್ರದಲ್ಲಿ ಕಾಂಗ್ರೆಸ್‌ಗೆ ಅಂಥ ಡೈನಾಮಿಕ್ ಲೀಡರ್ ಇರಲೂ ಇಲ್ಲ, ಈ ಅವಕಾಶ ಬಳಸಿಕೊಂಡು ಅಧಿಕಾರ ಹಿಡಿದ ವೈಎಸ್‌ಆರ್ ಕುಟುಂಬ ಕಳೆದ ಮೂರ್ನಾಲ್ಕು ವರ್ಷಗಳಲ್ಲೇ ಶುರು ಮಾಡಿದ ಬ್ಯುಸಿನೆಸ್‌ಗಳ, ಸ್ಥಾಪಿಸಿರುವ ಕಂಪನಿಗಳ ವಹಿವಾಟು ಎಷ್ಟಿದೆ ಗೊತ್ತೆ?



ವೈಎಸ್ಸಾರ್

ಎಪ್ಪತ್ತೆಂಟು ಸಾವಿರ ಕೋಟಿ ರೂಪಾಯಿ!


ಫಾರೆಸ್ಟ್ ಪ್ಲಾಂಟೇಷನ್ಸ್ ಇಂಡಿಯಾ (ಪ್ರೈ) ಲಿ., ಸರಸ್ವತಿ ಪವರ್ ಮತ್ತು ಇಂಡಸ್ಟ್ರೀಸ್ ಲಿ., ಸಂಡೂರ್ ಪವರ್ ಕಂ, ಪುಲಿವೆಂದುಲ ಪಾಲಿಮರ್ಸ್, ಸಿಲಿಕಾನ್ ಬಿಲ್ಡರ್ಸ್-ಹೀಗೆ ಸಾವಿರಾರು ಕೋಟಿ ಬಂಡವಾಳದ ಬೃಹತ್ ಕಂಪನಿಗಳಿವೆ. ಕಾರ್ಮೆಲ್ ಏಷ್ಯಾ ಹೋಲ್ಡಿಂಗ್ಸ್ ಪ್ರೈ ಲಿ., ಎಂಬ ಹಣಕಾಸು ಬಂಡವಾಳದ ಕಂಪನಿ ಮೂಲಕ ಜಗತಿ ಪಬ್ಲಿಕೇಷನ್ಸ್ (ಸಾಕ್ಷಿ ತೆಲುಗು ಪತ್ರಿಕೆ), ಇಂದಿರಾ ಟಿವಿ ಚಾನಲ್‌ಗಳು ತಲೆ ಎತ್ತಿವೆ. ಇಷ್ಟು ಸಾಲದೆಂಬಂತೆ ಮ್ಯಾಟ್ರಿಕ್ಸ್ G2, ಈಸ್ಟ್ ಕೋಸ್ಟ್ ಎನರ್ಜಿ, ಅಥೇನಾ ಕಾಕಿನಾಡ ಎನರ್ಜಿ, ಸೀತಾಪುರಂ ಎನರ್ಜಿ.... ಹೀಗೆ ಸಾಲುಸಾಲು ವಿದ್ಯುತ್ ಉತ್ಪಾದನಾ ಖಾಸಗಿ ಕಂಪನಿಗಳನ್ನು ಅಸ್ತಿತ್ವಕ್ಕೆ ತರಲಾಗಿದೆ.


ಜಗನ್ ರೆಡ್ಡಿ

ವೈಎಸ್‌ಆರ್ ಅಧಿಕಾರದಲ್ಲಿದ್ದಾಗ ಈ ಎಲ್ಲಾ ಕಂಪನಿಗಳಿಗೂ ಆಂಧ್ರ ಸರ್ಕಾರದ ಬೆಂಬಲ ಸಿಕ್ಕಿತ್ತು. ಬಹುತೇಕ ಎಲ್ಲಾ ವ್ಯವಹಾರಗಳಲ್ಲೂ ಜಗನ್ ಪಾರ್ಟನರ್ ಆಗಿದ್ದಾನೆ. ವಿದ್ಯುತ್, ಗಣಿಗಾರಿಕೆ, ರಸ್ತೆ, ಸೇತುವೆ, ಬಂದರು, ಟೌನ್‌ಶಿಪ್, SEZ ನಿರ್ಮಾಣದ ಈ ಪ್ರಾಜೆಕ್ಟುಗಳು ಜಗನ್ ಫ್ಯಾಮಿಲಿಯನ್ನು ಟಾಟಾ-ಬಿರ್ಲಾಗಳನ್ನು ಮೀರಿಸುವಂತೆ ಕೇವಲ 3-4 ವರ್ಷಗಳಲ್ಲಿ ಕುಬೇರರನ್ನಾಗಿಸಿತ್ತು.



ವೈ.ಎಸ್. ಕುಟುಂಬ ನಡೆಸುತ್ತಿರುವ ಸ್ವತ್ತು ವಹಿವಾಟಿನ ನಕ್ಷೆ...


ಜನಾರ್ದನ ರೆಡ್ಡಿ

ಈ ಉದ್ಯಮಪತಿಗಳ ಬೆಂಬಲಕ್ಕೆ ವೈಎಸ್‌ಆರ್ ಹೇಗೆ ಬೆನ್ನೆಲುಬಾಗಿ ನಿಂತಿದ್ದನೆಂದರೆ ಬಳ್ಳಾರಿ ರೆಡ್ಡಿಗಳ ಓಬಳಾಪುರಂ ಕಂಪನಿ ಗಣಿಗಾರಿಕೆಗಾಗಿ ಆಂಧ್ರದಲ್ಲಿ 10 ಸಾವಿರ ಎಕರೆ ಜಮೀನು ಕೇಳಿದರೆ ವೈಎಸ್‌ಆರ್ 10,700 ಎಕರೆ ಕೊಡಿಸಿದ್ದ. ಜೊತೆಗೆ ಕೇಂದ್ರ ಸರ್ಕಾರದ ಅರಣ್ಯ ರಕ್ಷಣೆ ಕಾಯ್ದೆ ಉಲ್ಲಂಘಿಸಿ ರಸ್ತೆ ನಿರ್ಮಾಣ, ಅದಿರು ಸಾಗಾಣಿಕೆಗೂ ಅಕ್ರಮ ಅನುಮತಿ ಕೊಟ್ಟಿದ್ದ. ಜಗನ್‌ನ ಪಾರ್ಟನರ್ ಮ್ಯಾಟ್ರಿಕ್ಸ್ ಕಂಪನಿಯ ಎನ್. ಪ್ರಸಾದ್‌ಗೆ ಆಂಧ್ರ ಕರಾವಳಿಯ ವಡರೇವು ಹಾಗೂ ನಿಜಾಂಪಟ್ಟಣಂನಲ್ಲಿ ಬಂದರು ಅಭಿವೃದ್ಧಿಗೆಂದು 28 ಸಾವಿರ ಎಕರೆ ಜಾಗ ಕೊಡಿಸಿಕೊಟ್ಟಿದ್ದ. ಇಷ್ಟಕ್ಕೂ ಕಂಪನಿ ಕೇಳಿದ್ದು 9700 ಎಕರೆ ಮಾತ್ರವಾಗಿತ್ತು.

ಇದೆಲ್ಲಕ್ಕಿಂತ ಬೃಹತ್ ಎನ್ನಬಹುದಾದ ಡೀಲ್ ಒಂದನ್ನು ವೈಎಸ್‌ಆರ್ ಕುದುರಿಸಿದ್ದ. ಜಲಯಜ್ಞಂ ಎಂಬ ಯೋಜನೆ ಅದು. ಅಂದಾಜು ಒಂದು ಲಕ್ಷ ಮೂವತ್ತು ಸಾವಿರ ಕೋಟಿ ರೂಪಾಯಿಗಳ ಈ ಯೋಜನೆಯಲ್ಲಿ ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ, ಗಾಮಾನ್ ಕಂಪನಿಗಳ ಹಿತಾಸಕ್ತಿ ಇದೆ.

ಮತ್ತು ಇದೆಲ್ಲದರ ಹಿಂದೆ ಮುಗ್ಧ ಬಾಲಕನಂತೆ ಕಾಣುವ ಜಗನ್ ಇದ್ದೇ ಇದ್ದಾನೆ. ಬಹುಶಃ ವೈಎಸ್‌ಆರ್ ಬದುಕಿದ್ದಿದ್ದರೆ ಏನಾಗುತ್ತಿತ್ತೋ ಏನೋ ಆದರೆ ಅವನು ಸತ್ತ, ಆಮೇಲೆ ಜಗನ್ ಆಂಧ್ರ ಸಿಎಂ ಅಗಲೇ ಇಲ್ಲ, ಇದರಿಂದಾಗಿ ಏನಾಯಿತೆಂದರೆ ಲಾಭ ಲೂಟಿ ಮಾಡಲು ತುದಿಗಾಲಲ್ಲಿ ನಿಂತಿದ್ದ ಜಗನ್ ಗುಂಪಿಗೆ ಹಿನ್ನಡೆಯಾಯಿತು.

ನಾವಿಲ್ಲಿ ನೆನಪಿಡಬೇಕಾದ ಅತೀ ಮುಖ್ಯ ಸಂಗತಿ ಏನೆಂದರೆ ಆಂಧ್ರದ ಈ ವಿದ್ಯಮಾನಗಳಲ್ಲಿ ಬಳ್ಳಾರಿ ರೆಡ್ಡಿಗಳ ಲಾಬಿ-ಲೋಭವೂ ಇತ್ತೆನ್ನುವುದು. ಜಗನ್‌ನ ಬಹುತೇಕ ವ್ಯವಹಾರಗಳಲ್ಲಿ ಬಳ್ಳಾರಿ ರೆಡ್ಡಿಗಳ ಪಾರ್ಟನರ್ ಶಿಪ್ ಇದೆ.

ಇಲ್ಲಿ ಕಮ್ಯುನಲ್ ಅಲ್ಲಿ ಸೆಕ್ಯುಲರ್

ಬಳ್ಳಾರಿ ರೆಡ್ಡಿ ಹಾಗೂ ಜಗನ್‌ನ ಪಾರ್ಟನರ್‌ಶಿಪ್ ದಂಧೆಯ ರಾಜಕೀಯ ನಿಲುವು ಬಹಳ ಸಿಂಪಲ್ ಆಗಿದೆ. ರೆಡ್ಡಿಗಳು ಕರ್ನಾಟಕದಲ್ಲಿ ಕಮ್ಯುನಲ್ ಆಗಿಯೂ ಆಂಧ್ರದ ಮಟ್ಟಿಗೆ ಸೆಕ್ಯುಲರ್ (ಕಾಂಗ್ರೆಸ್ ನಂಟಿನ ಕಾರಣಕ್ಕೆ) ಆಗಿದ್ದಾರೆನ್ನಬಹುದು. ಅದೇ ರೀತಿ ಜಗನ್ ಆಂಧ್ರದಲ್ಲಿ ಸೆಕ್ಯುಲರ್ ಆಗಿಯೂ ಕರ್ನಾಟಕದ

'ಮೇಲೆ ದೇವರಿದ್ದಾನೆ ಈಗ ನಮ್ಮಪ್ಪನೂ ಇದ್ದಾನೆ, ನೋಡೋಣ' ಅಂದ

ಈ ಜಗನ್ ಎಂಥ ಹುಂಬ ಮತ್ತು ನಾಟಕಸುಬ್ಬನೆಂದರೆ ಅಪ್ಪ ಸತ್ತನೆಂದು ಗೊತ್ತಾದ ಮರುಗಳಿಗೆಯಲ್ಲೇ ತಾನೇ ಆಂಧ್ರದ ಮುಂದಿನ ಮುಖ್ಯಮಂತ್ರಿ ಎಂದು ಭ್ರಮಿಸಿಕೊಂಡಿದ್ದ.

ಅಪ್ಪನ ಹೆಣ ಸುಡುವ ಮೊದಲೇ 'ಅವರ ಕನಸನ್ನು, ಕೆಲಸಗಳನ್ನು ನಾನು ಪೂರ್ತಿ ಮಾಡಬೇಕಿದೆ' ಅಂದಿದ್ದ. 2014 ರ ಸಂಸತ್ ಚುನಾವಣೆ ಬಂದಾಗ ಆಂಧ್ರದ 42 ಕ್ಷೇತ್ರಗಳ ಪೈಕಿ 41 ರಲ್ಲಿ ನಾನು ಕಾಂಗ್ರೆಸ್ ಗೆಲ್ಲಿಸುತ್ತೇನೆ ಅಂತಲೂ ತುತ್ತೂರಿ ಊದಿಕೊಂಡಿದ್ದ, ನಮ್ಮಪ್ಪನಂತೆಯೇ ಹಳ್ಳಿಗಳಿಗೆ ಅನಿರೀಕ್ಷಿತ ಭೇಟಿ ನೀಡುತ್ತೇನೆ ಎಂದು ಚೀರಿಕೊಂಡ. ಇನ್ನೇನು ಜಗನ್ ಆಂಧ್ರ ಸಿಎಂ ಆಗೇಬಿಟ್ಟ ಅಂತ ಎಲ್ಲರೂ ನಂಬಿಕೊಂಡಿದ್ದಾಗ ಸೋನಿಯಾ ಗಾಂಧಿ ಅಷ್ಟೇ ಅನಿರೀಕ್ಷಿತವಾಗಿ ಸೈಲೆಂಟಾದರು. ಅವರನ್ನು ಭೇಟಿಯಾಗಲು ದೆಹಲಿಗೆ ಹೋದ ಜಗನ್‌ಗೆ ಅಪಾಯಿಂಟ್‌ಮೆಂಟೂ ಕೊಡದೆ ಕೆಲದಿನ ಸತಾಯಿಸಿ ಮುಖಭಂಗ ಮಾಡಿದರು. ಈ ಜಗನ್ ಮೊನ್ನೆ ಕಡಪಾದಿಂದ ಲೋಕಸಭೆಗೆ ನಿಂತಿದ್ದಾಗ ದಾರಿಯಲ್ಲಿ ಯಾರೇ ಪ್ರಜೆ ಸಿಕ್ಕರೂ 'ಪೈಕಿ ರಾ' (ಮೇಲೆ ಬಾ) 'ಬಂಡೆಕ್ಕು' (ಗಾಡಿ ಹತ್ತು) ಎಂದು ಕರೆದು ಕಾರಿನೊಳಗೆ ಕೂರಿಸಿಕೊಳ್ಳುತ್ತಿದ್ದ. ಓಟಿಗಾಗಿ! ಅಂತವನನ್ನು ಈಗ ಸೋನಿಯಾ 'ಪೈಕಿ ರಾ' ಅನ್ನದೆ ಕೆಳಗಡೆ ದೂಡಿದ್ದು ಆಂಧ್ರದ ಬ್ಯುಸಿನೆಸ್ ಲಾಬಿಗೆ ಶಾಕ್ ನೀಡಿದೆ. ಈ ಜಗನ್‌ಗೆ ಕಾಂಗ್ರೆಸ್ ಮೂಲಕ ಸಿಎಂಗಿರಿಯೂ ಬೇಕು, ಮತ್ತೊಂದೆಡೆ ಬಿಜೆಪಿ ಮತ್ತು ರೆಡ್ಡಿಗಳೂ ಬೇಕು. ಆದರೆ ಇದರಿಂದ ಕಾಂಗ್ರೆಸ್‌ಗೇನು ಲಾಭ ಎಂಬುದೇ ಸೋನಿಯಾ ಪ್ರಶ್ನೆ. ಜಗನ್ ಬೆಳವಣಿಗೆಯ ವೇಗ ಹೇಗಿದೆಯೆಂದರೆ 2008-09 ರಲ್ಲಿ ಜುಜುಬಿ 2.02 ಲಕ್ಷ ಇನ್‌ಕಂ ಟ್ಯಾಕ್ಸ್ ಕಟ್ಟಿದ್ದವನು ಈ ವರ್ಷ ಅಂದರೆ 2009-10 ರಲ್ಲಿ 22 ಕೋಟಿ ಆದಾಯ ತೆರಿಗೆ ಕಟ್ಟುತ್ತಿದ್ದಾನೆ.

ಹಾಗಾದರೆ ಆತನಿಗೆ ಎಲ್ಲಿಂದ ಬರುತ್ತಿದೆ ಆದಾಯ?

ರೆಡ್ಡಿ ತರದವರ ಲಿಂಕುಗಳಿಂದ ತಾನೆ?


ಒಂದು ಕಾಲದಲ್ಲಿ ಈ ರೆಡ್ಡಿ-ಜಗನ್ ಗ್ಯಾಂಗಿಗೆ ಆಂಧ್ರದಲ್ಲಿ ವೈಎಸ್‌ಆರ್, ಕರ್ನಾಟಕದಲ್ಲಿ ಯಡ್ಡಿ ಹೀಗೆ ಇಬ್ಬರು ಸಿಎಂಗಳ ಬೆಂಬಲವಿತ್ತು, ಈಗ ಎರಡೂ ಕರಗಿಹೋಗುತ್ತಿದೆ. ಈಗ ಆಂಧ್ರದಲ್ಲಿ ರೋಸಯ್ಯ ಈ ಗ್ಯಾಂಗಿನ ಹಿಡಿತಕ್ಕೆ ಸಿಗುತ್ತಿಲ್ಲ, ಹಾಗಾಗಿ ಯಡ್ಡಿ ಮೇಲೆ ದಾಳಿ ನಡೆಸಿದೆ ಈ ಗುಂಪು. ಇತ್ತೀಚೆಗೆ ಯಾರೋ ಜಗನ್‌ಗೆ 'ಸಿಎಂ ಯಾವಾಗ ಆಗ್ತೀರಾ?' ಅಂತ ಕೇಳಿದರಂತೆ.

"ನೋಡೋಣ, ಮೇಲೆ ದೇವರಿದ್ದಾನೆ, ಜೊತೆಗೆ ಈಗ ನಮ್ಮಪ್ಪನೂ ಇದ್ದಾನೆ" ಅಂದಿದ್ದಾನೆ ಜಗನ್!

ರೋಸಯ್ಯನ 'ಎರಡು' ನೀತಿ?

ತೆಲುಗು ಜನಾಂಗದವರಾದ ಆಂಧ್ರ ಸಿಎಂ ರೋಸಯ್ಯ ರೆಡ್ಡಿ-ಜಗನ್ ಗ್ಯಾಂಗಿನೊಂದಿಗೆ ಕಣ್ಣಾಮುಚ್ಚಾಲೆ ಆಟ ಆಡುತ್ತಿದ್ದಾರೆ. ಅನಂತಪುರದ ಫಾರೆಸ್ಟ್ ಆಫೀಸರ್ ಬಿಸ್ವಾಸ್ ಪ್ರಕರಣವೇ ಇದಕ್ಕೆ ಸಾಕ್ಷಿ. ತಮಗೆ ಕಿರುಕುಳ ನೀಡುತ್ತಿರುವ ಜಗನ್ ಬಾಯಿ ಮುಚ್ಚಿಸಲು ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮಗಳನ್ನು ಪತ್ತೆಹಚ್ಚಲು ಇದೇ ಬಿಸ್ವಾಸ್‌ರನ್ನು ರೋಸಯ್ಯ ಛೂ ಬಿಟ್ಟಿದ್ದರು. ಅದರಿಂದಾಗಿ ಕಳೆದ ಒಂದೇ ವಾರದಲ್ಲಿ ರೆಡ್ಡಿ ಕಂಪನಿಗೆ ಮೂರು ನೋಟೀಸ್‌ಗಳು ಜಾರಿಯಾಗಿದ್ದವು. ಒಂದು ಹಂತದಲ್ಲಿ ರೆಡ್ಡಿ ಗ್ಯಾಂಗ್ ಆಂಧ್ರ ಹಾಗೂ ಕರ್ನಾಟಕ ಸರ್ಕಾರ ಎರಡೂ ಕಡೆ ಪೆಟ್ಟು ತಿನ್ನಬೇಕಾಗಿ ಬಂತು. ಯಡ್ಡಿ ಗ್ಯಾಂಗಿನವನೊಬ್ಬ ಕರ್ನಾಟಕ ಲೋಕಾಯುಕ್ತರಿಗೆ ದೂರು ಕೊಟ್ಟ ಕಾರಣ ಯು.ವಿ. ಸಿಂಗ್ ತನಿಖೆಗಾಗಿ ಬಳ್ಳಾರಿಗೂ ರಹಸ್ಯವಾಗಿ ಹೋಗಿಬಂದರು. ನಂತರ ಅದೇನಾಯಿತೋ ಏನೋ ಬಿಸ್ವಾಸ್‌ರ ವಾಗ್ದಾಳಿಗೆ ರೋಸಯ್ಯ ಲಗಾಮು ಹಾಕಿ ಸುಮ್ಮನಿರಿಸಿದ್ದಾರೆ. ಇತ್ತ ಕರ್ನಾಟಕದಲ್ಲೂ ಸರ್ಕಾರಿ ಕಿರುಕುಳ ತಣ್ಣಗಾದಂತೆ ಕಾಣುತ್ತಿದೆ. ಇದರಿಂದಾಗಿ ರೆಡ್ಡಿಗಳಿಗೆ ಉಸಿರಾಡಲು ಸ್ವಲ್ಪ ಕಾಲಾವಕಾಶ ಸಿಕ್ಕಿದೆ. ಮಾತ್ರವಲ್ಲ, ಈಗ ತಮ್ಮ ಪೂರ್ಣ ಗಮನವನ್ನು 'ಯಡ್ಡಿ ಹಠಾವ್'ಗಾಗಿ ಬಳಸಲು ಸಾಧ್ಯವಾಗುತ್ತಿದೆ.

ಇಲ್ಲಿ ಕಾಂಗ್ರೆಸ್ ಹೈಕಮಾಂಡಿಗೂ ಒಂದು ಆತಂಕ ಕಾಡುತ್ತಿದೆ. ಒಂದು ವೇಳೆ ರೆಡ್ಡಿಗಳು ಕರ್ನಾಟಕದಲ್ಲಿ ಯಡ್ಡಿಯನ್ನು ಕೆಳಗಿಳಿಸುವಲ್ಲಿ ಸಫಲರಾದರೆ ನಂತರ ಅವರ ಗುರಿ ಆಂಧ್ರ ಸಿಎಂ ರೋಸಯ್ಯ ವಿರುದ್ಧ ತಿರುಗಬಹುದು ಎನ್ನುವ ಭೀತಿ ಅದು. ಜಗನ್‌ಗೆ ಆಂಧ್ರ ಸಿಎಂ ಆಗಲೇಬೇಕೆಂಬ ಹಠವಿದೆ. ಜೊತೆಗೆ ಶಾಸಕರ ಬೆಂಬಲವೂ ಇದೆ. ಇವತ್ತು ಕರ್ನಾಟಕದಲ್ಲಿ ನಡೆಯುತ್ತಿರುವ ಬಿಜೆಪಿ ಬಂಡಾಯ ನಾಳೆ ಆಂಧ್ರ ಕಾಂಗ್ರೆಸ್‌ನೊಳಗೂ ಸ್ಫೋಟಿಸಿದರೆ ಏನೂ ಆಶ್ಚರ್ಯವಿಲ್ಲ ಎನ್ನಲಾಗುತ್ತಿದೆ. ಹಾಗಾಗಿ ರೋಸಯ್ಯ ತಕ್ಷಣದಲ್ಲಿ ಜಗನ್ ಅಥವಾ ರೆಡ್ಡಿಗಳನ್ನು ಕೆರಳಿಸುವ ಯಾವ ಸಾಹಸಕ್ಕೂ ಕೈಹಾಕುತ್ತಿಲ್ಲ.



ರೋಸಯ್ಯ

...ರಿಗೆ ಕಮ್ಯುನಲ್ (ಬಿಜೆಪಿ ರೆಡ್ಡಿಗಳ ದೋಸ್ತಿ ...ಲೆ) ಆಗಿಯೂ ಇದ್ದಾನೆ. ವಾಸ್ತವವಾಗಿ ...ರಿಬ್ಬರ ನಿಷ್ಠೆ ಇರುವುದು ತಮ್ಮ ದಂಧೆಯ ...ದ ಮೇಲೆಯೇ ವಿನಃ ಕಾಂಗ್ರೆಸ್‌ಗೂ ಅಲ್ಲ, ...ಪಿಗೂ ಅಲ್ಲ. ಇದನ್ನು ಚೆನ್ನಾಗಿ ಅರ್ಥ ...ಡಿಕೊಂಡಿರುವುದು ಸೋನಿಯಾ ಗಾಂಧಿ ...ತ್ರ. ಹಾಗಾಗಿ ವೈಎಸ್‌ಆರ್ ಸತ್ತ ನಂತರ ಆಂಧ್ರ ...ಗ್ರೆಸ್‌ನ 154 ಶಾಸಕರ ಪೈಕಿ 152 ಮಂದಿ ...ನ್ ಪರ ಇದ್ದಾರೆಂದು ...ವರು ಬಿಂಬಿಸಿದರೂ ...ನಿಯಾ ರೋಸಯ್ಯನನ್ನೇ ...ಖ್ಯಮಂತ್ರಿಯಾಗಿ ಕೂರಿಸಿ ...ನ್ ಪರ ಲಾಬಿಗೆ ಬ್ರೇಕ್ ...ದ್ದಾರೆ. ಜಗನ್-ರೆಡ್ಡಿ ಗುಂಪು ...ತು ಬಲಿಷ್ಠವಾದಷ್ಟೂ ಎರಡೂ ...ಗಳಲ್ಲಿ ಕಾಂಗ್ರೆಸ್‌ಗೇ ಅಪಾಯ ...ದು ಸೋನಿಯಾಗೆ ಗೊತ್ತಾಗಿದೆ. ...ತೆಗೆ ಜಗನ್ ಗೆಣೆಕಾರರಾದ ...ರಿ ರೆಡ್ಡಿಗಳು ಕರ್ನಾಟಕದಲ್ಲಿ ...ರೇಷನ್ ಕಮಲ ಮೂಲಕ ...ಗ್ರೆಸ್‌ಗೆ ಏಟು ಕೊಟ್ಟದ್ದನ್ನು ಸೋನಿಯಾ ...ತಿಲ್ಲ.

...ಮೊನ್ನೆ ಸೆಪ್ಟೆಂಬರ್ ಅಂತ್ಯದ ವೇಳೆಗೆ ಜಗನ್‌ನ ...ಗಿರಿ ಕನಸಿಗೆ ಯಾವಾಗ ಕೊನೆಯ ಏಟು ...ತೋ ಅದರ ಪರಿಣಾಮ ಕರ್ನಾಟಕದಲ್ಲಾಯಿತು. ...ವಾಗ ಆಂಧ್ರ ಸರ್ಕಾರ ಕೈಗೆ ...ವುದಿಲ್ಲವೆಂಬುದು ಖಾತ್ರಿಯಾಯಿತೋ ...-ಜಗನ್ ಹಾಗೂ ಜೊತೆಗಿರುವ ಉದ್ದಿಮೆದಾರರ ...ಪು ಕರ್ನಾಟಕದತ್ತ ನೋಡಿತು. ಈಗಾಗಲೇ ಯಡಿಯೂರಪ್ಪ ರೆಡ್ಡಿಗಳ ಕಂಟ್ರೋಲ್‌ನಲ್ಲಿರದೇ ತಮ್ಮದೇ ಇಮೇಜು, ಗುಂಪು ಕಟ್ಟಿಕೊಂಡಿದ್ದರಿಂದಾಗಿ ಇಲ್ಲೂ ಅವರ ಆಟ ನಡೆಯುವಂತಿರಲಿಲ್ಲ. ಆಂಧ್ರದಲ್ಲಿ ಮಾಡಿದಂತೆ ಕರ್ನಾಟಕದಲ್ಲೂ ಸಾವಿರಾರು ಕೋಟಿ ರೂ.ಗಳ ಪ್ರಾಜೆಕ್ಟು, ಲಾಭ ಲೂಟಿ ಹೊಡೆಯಲು ಈ ಗುಂಪಿಗೆ ವೈಎಸ್‌ಆರ್ ತರಹದ ಆಪ್ತಮಿತ್ರ ಬೇಕಿದ್ದ.

ಜಗದೀಶ್ ಶೆಟ್ಟರ್ ಅವರ ನಜರಿಗೆ ಬಿದ್ದಿದ್ದೇ ಈ ಹಿನ್ನೆಲೆಯಲ್ಲಿ! ಶೆಟ್ಟರ್ ಈ ಆಂಧ್ರ ಲಾಬಿಯ ಕೈಗೊಂಬೆ ಎಂದು ಈ ತಕ್ಷಣಕ್ಕೆ ಭಾವಿಸುವ ಅಗತ್ಯವಿಲ್ಲವಾದರೂ ಅವರಿಗೂ ಮುಖ್ಯಮಂತ್ರಿಯಾಗುವ ಆಸೆ ಇದ್ದೇ ಇದೆಯಲ್ಲ?



ಯಡಿಯೂರಪ್ಪ

ಕರ್ನಾಟಕದ ಬಿಜೆಪಿಯೊಳಗಿನ ಬಂಡಾಯದಲ್ಲಿ ಜುಜುಬಿ ಒಬ್ಬ ಜಿಲ್ಲಾಧಿಕಾರಿಯ ವರ್ಗಾವಣೆ, ಶೋಭಾ ಕರಂದ್ಲಾಜೆ ಸಮಸ್ಯೆ, ಬಳಿಗಾರ್ ಅತಿರೇಕಗಳು ಕಾರಣವೆಂಬುದು ಕೇವಲ ಕುಂಟುನೆಪಗಳಂತೆ ಕಾಣುವುದಿಲ್ಲವೆ?

ಯಡಿಯೂರಪ್ಪ ಒಬ್ಬ ಅಪ್ರಬುದ್ಧ, ಅವಿವೇಕಿ ಮುಖ್ಯಮಂತ್ರಿ ಎಂಬುದು ಸುಳ್ಳೇನಲ್ಲ. ಆದರೆ ಈಗಿನ ಜಗಳ ಅದೊಂದೇ ಕಾರಣದಿಂದ ಹುಟ್ಟಿಲ್ಲ ಅಷ್ಟೆ.

● ಬಿಳಿದಾಳೆ ಪಾರ್ವತೀಶ

500 ಕೋಟಿಯ 'ಮನೆ' ಜಗಳ

ಯಡ್ಡಿ-ರೆಡ್ಡಿ ಕದನದ ಹಿಂದಿರುವ ಅನೇಕ ಕಾರಣಗಳಲ್ಲಿ ಪ್ರವಾಹ ಸಂತ್ರಸ್ತರಿಗೆ ಮನೆ ನಿರ್ಮಿಸಿಕೊಡುವ ಕಾಮಗಾರಿಯ ಗುತ್ತಿಗೆ ಯಾವ ಕಂಪೆನಿಗೆ ನೀಡಬೇಕು ಎಂಬ ಕಾರಣವೂ ಇದೆ.

ಗಣಿ ರೆಡ್ಡಿಗಳು ಉತ್ತರ ಕರ್ನಾಟಕದಲ್ಲಿ ತಾವು 50 ಸಾವಿರ ಮನೆ ನಿರ್ಮಿಸುವುದಾಗಿ ಹೇಳಿಕೆ ನೀಡಿದ್ದರಲ್ಲವೇ? ಒಂದು ಮನೆಗೆ ಒಂದು ಲಕ್ಷ ಖರ್ಚು ಅಂತಂದರೂ ಅದರ ಒಟ್ಟು ವೆಚ್ಚ 500 ಕೋಟಿ ರೂ. ಆಗುತ್ತದೆ. ಈ ಮನೆಗಳ ನಿರ್ಮಾಣ ಗುತ್ತಿಗೆಯನ್ನು ಜಗನ್‌ಮೋಹನ್ ರೆಡ್ಡಿ ಪಾಲುದಾರಿಕೆಯ ಯಾವುದೋ ಒಂದು ಕಂಪೆನಿಗೆ ನೀಡಬೇಕೆಂದು ರೆಡ್ಡಿಗಳು ಒತ್ತಾಯಿಸಿದ್ದರಂತೆ. ಆದರೆ ಯಡ್ಡಿ ಇದನ್ನು ಒಪ್ಪಲಿಲ್ಲ. ಹಾಗಾಗಿ ಜಗಳ ಹುಟ್ಟಲು ಇದೂ ಒಂದು ನೆಪವಾಯಿತು.

ಇಷ್ಟಕ್ಕೂ, ತಲಾ ಒಂದು ಲಕ್ಷ ವೆಚ್ಚದ 50 ಸಾವಿರ ಮನೆಗಳ ನಿರ್ಮಾಣದ ಘೋಷಣೆಯ ಹಿಂದೆ ಇನ್ನೊಂದು ಮಜಾದ ವಂಚನೆಯ ಲೆಕ್ಕಾಚಾರವೂ ಇದೆ.

ಅದು ತೆರಿಗೆ ವಂಚನೆಯದ್ದು!

ಈಗ ಸರ್ಕಾರಿ ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಯೋಜನೆಗಳ 20x15 ಅಳತೆಯ ಮನೆ ನಿರ್ಮಾಣದ ಘಟಕ ವೆಚ್ಚ ಕೇವಲ 30 ಸಾವಿರ ಇದೆ. ಆದರೆ ರೆಡ್ಡಿಗಳು ತಲಾ ಒಂದು ಲಕ್ಷದ ಮನೆ ನಿರ್ಮಿಸುತ್ತೇವೆಂದಿದ್ದಾರೆ. ಮತ್ತೊಂದೆಡೆ ಪ್ರವಾಹ ಸಂತ್ರಸ್ತರಿಗೆ ಯಾರೇ ದೇಣಿಗೆ ನೀಡಿದರೂ ಅದಕ್ಕೆ ಆದಾಯ ತೆರಿಗೆ ವಿನಾಯಿತಿ ಇದೆ. ಈ ರೆಡ್ಡಿಗಳು ತಾವು ಹಾಗೂ ಇನ್ನಿತರ ಗಣಿ ಉದ್ಯಮಿಗಳೆಲ್ಲಾ ಸೇರಿ 500 ಕೋಟಿ ಡೊನೇಷನ್ ನೀಡಿ 50 ಸಾವಿರ ಮನೆ ನಿರ್ಮಿಸುತ್ತಿದ್ದೇವೆಂದು ಹೇಳುತ್ತಿದ್ದಾರಲ್ಲವೆ? ಹಾಗೆ ಬಿಂಬಿಸುವ ಮೂಲಕ 500 ಕೋಟಿ ರೂ.ಗಳಿಗೆ ಆದಾಯ ತೆರಿಗೆ ಲೆಕ್ಕ ತೋರಿಸುವುದು ಒಂದು ಲಾಭ. ಮತ್ತೊಂದೆಡೆ ಮನೆ ನಿರ್ಮಾಣದ ವಾಸ್ತವ ಖರ್ಚು ತಲಾ 30 ಸಾವಿರದಂತೆ 50 ಸಾವಿರ ಮನೆಗಳಿಗೆ ಖರ್ಚಾಗುವುದು 500 ಕೋಟಿಯಲ್ಲ, ಬದಲಾಗಿ ಕೇವಲ 150 ಕೋಟಿ ಮಾತ್ರ. ಕೊನೆಯದಾಗಿ ಈ 150 ಕೋಟಿ ಖರ್ಚಿನ ಮನೆಗಳ ನಿರ್ಮಾಣದ ಗುತ್ತಿಗೆಯೂ ತಮ್ಮದೇ ಗುಂಪಿನ ಕಂಪೆನಿಗೆ ಸಿಕ್ಕರೆ ಅದರಲ್ಲೂ ಲಾಭ ಇದ್ದೇ ಇದೆ.

ಆದರೆ ಈ ಲಾಭದ ಲೆಕ್ಕಾಚಾರವನ್ನೆಲ್ಲಾ ಮರೆಮಾಚಿದ ರೆಡ್ಡಿಗಳು "ನಮ್ಮ ಸಮಾಜ ಸೇವೆ ಹಾಗೂ ಕೀರ್ತಿ ...ಯ ಬಗ್ಗೆ ಯಡಿಯೂರಪ್ಪನಿಗೆ ಹೊಟ್ಟೆಕಿಚ್ಚಿದೆ. ಅದಕ್ಕೆ ಸಹಕಾರ ನೀಡುತ್ತಿಲ್ಲ" ಎಂದು ಆರೋಪಿಸುತ್ತಿದ್ದಾರೆ. ●



ಸಾರ್ವಜನಿಕ ಜಾಗ ಆರ್‌ಎಸ್ಸೆಸ್ ಜೋಳಿಗೆಗೆ!

ಹಡಬಿ ದುಡ್ಡು, ಜಾಗ ಸಿಗುತ್ತೆ ಎಂದರೆ ಆರ್‌ಎಸ್ಸೆಸ್‌ನ ಸಂಘಪರಿವಾರಿಗಳು ಹೇಗೆ ಬಾಯಿ ತೆರೆದುಕೊಂಡು ಕುಳಿತಿರುತ್ತವೆ ಎಂಬುದಕ್ಕೆ ಹಾಗೂ ಅಂಥ ಬಕಾಸುರರಿಗೆ ಬಾಯಿಗೆ ಕೋಟ್ಯಂತರ ರೂಪಾಯಿ ಬೆಲೆಬಾಳುವ ಸಾರ್ವಜನಿಕ ಸೊತ್ತನ್ನು ಹಾಕುವುದಕ್ಕೆ ಬಿಜೆಪಿ ಸರ್ಕಾರ ಹೇಗೆ ತುದಿಗಾಲಲ್ಲಿ ನಿಂತಿರುತ್ತದೆ ಎಂಬುದಕ್ಕೆ ಇದು ಇತ್ತೀಚಿನ ಉದಾಹರಣೆ.

ಬೆಂಗಳೂರಿನ ಲಗ್ಗೆರೆ ಏರಿಯಾದಲ್ಲಿ ಸಂಜಯಗಾಂಧಿ ನಗರ, ಕೂಲಿ ನಗರ, ಕಾವೇರಿ ನಗರ ಮತ್ತು ಹಾವಾಡಿಗರ ನಗರ ಎಂಬ ನಾಲ್ಕು ಸ್ಲಮ್ಮುಗಳು ತಲೆಯೆತ್ತಿವೆ. ಹೊಟ್ಟೆಪಾಡಿಗಾಗಿ ರಾಜ್ಯದ ವಿವಿಧ ಪ್ರದೇಶಗಳಿಂದ ಕೆಲಸವನ್ನರಸಿಕೊಂಡು ಬೆಂಗಳೂರಿಗೆ ಕಾಲಿಟ್ಟ ಕಡುಬಡವರು ಸರ್ಕಾರಕ್ಕೆ ಸೇರಿದ ಈ ಜಾಗಗಳಲ್ಲಿ ಗುಡಿಸಲು ಕಟ್ಟಿಕೊಂಡು ನೆಲೆಯೂರಿದ್ದಾರೆ. ಇಂದಿಗೂ ಬೆಂಗಳೂರಿನಲ್ಲಿ ದಿನಗೂಲಿ ಮಾಡಿಕೊಂಡು ಹೇಗೋ ಸಂಸಾರ ನಿಭಾಯಿಸುತ್ತಿರುವ ಈ ಜನರಲ್ಲಿ ಬಹುತೇಕರು ದಲಿತರು, ಮುಸ್ಲಿಮರು ಮತ್ತು ಇನ್ನಿತರ ಕೆಳವರ್ಗದ ಜನಸಮುದಾಯಗಳಿಗೆ ಸೇರಿದವರಾಗಿದ್ದಾರೆ.


ಈ ನಾಲ್ಕೂ ಸ್ಲಮ್ಮುಗಳ ಮಧ್ಯ ಭಾಗದಲ್ಲಿ ವೀಣಾ ವಿದ್ಯಾಸಂಸ್ಥೆ ಎಂಬ ಕನ್ನಡ ಮಾಧ್ಯಮದ ಖಾಸಗಿ ಶಿಕ್ಷಣ ಸಂಸ್ಥೆಯೊಂದು ಸುಮಾರು ಇಪ್ಪತ್ತು ವರ್ಷಗಳ ಹಿಂದೆಯೇ ತಲೆಯೆತ್ತಿ ಸುತ್ತಮುತ್ತಲ ಸ್ಲಂ ನಿವಾಸಿಗಳ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುತ್ತಾ ಬಂದಿದೆ. ಒಂದಿಷ್ಟು ಸಾಮಾಜಿಕ ಕಳಕಳಿ, ಬಡಜನರ ಬಗ್ಗೆ ಕಾಳಜಿ ಹೊಂದಿರುವ ವ್ಯಕ್ತಿಗಳೇ ಈ ಶಿಕ್ಷಣ ಸಂಸ್ಥೆಯ ಹಿಂದಿರುವ ಶಕ್ತಿಗಳಾಗಿದ್ದರಿಂದ ಅತ್ಯಂತ ಕಡಿಮೆ ಶುಲ್ಕದಲ್ಲಿ ಶಿಕ್ಷಣ ಒದಗಿಸುತ್ತಾ ಬಂದಿದೆ. ವರ್ಷಗಳುರುಳಿದಂತೆ, ಕರ್ನಾಟಕದ ಗ್ರಾಮೀಣ ಪ್ರದೇಶದ ಜನರ ಬದುಕು ದುಸ್ತರವಾದಂತೆ ರಾಜ್ಯದ ಮೂಲೆಮೂಲೆಗಳಿಂದ ಕೆಲಸವನ್ನರಸಿಕೊಂಡು ಬೆಂಗಳೂರಿಗೆ ಬರುವ ನಿರ್ಗತಿಕರ ಜನಸಂಖ್ಯೆಯೂ ಜಾಸ್ತಿಯಾಗಿದ್ದರಿಂದ ಈ ಸ್ಲಮ್ಮುಗಳೂ ಊದಿಕೊಳ್ಳತೊಡಗಿದವು. ಅಂತೆಯೇ ಅವುಗಳ ಮಧ್ಯದಲ್ಲಿರುವ ವೀಣಾ ವಿದ್ಯಾಸಂಸ್ಥೆಗೆ ಸೇರುವ ಸ್ಲಂ ನಿವಾಸಿಗಳ ಮಕ್ಕಳ ಸಂಖ್ಯೆಯೂ ಗಣನೀಯವಾಗಿ ವೃದ್ಧಿಯಾಗತೊಡಗಿತು. ಇತ್ತೀಚಿನ ದಾಖಲೆಗಳನ್ನು ಗಮನಿಸಿದರೆ ಒಂದರಿಂದ ಹತ್ತನೇ ತರಗತಿಯವರೆಗೆ ಒಟ್ಟು ಸುಮಾರು 1500 ಸ್ಲಂ ಮಕ್ಕಳು ಅಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಉತ್ತೀರ್ಣ ಫಲಿತಾಂಶವನ್ನು ಅದು ದಾಖಲಿಸಿದೆ. ಕೆಲವು ಮಕ್ಕಳು ರಾಜ್ಯ ಮಟ್ಟದ ಕ್ರೀಡಾಕೂಟಗಳಲ್ಲೂ ಭಾಗವಹಿಸುವ ಮೂಲಕ ಕ್ರೀಡಾಕ್ಷೇತ್ರದಲ್ಲೂ ಗಣನೀಯ ಸಾಧನೆ ಮಾಡಿದೆ. ಶಾಲೆಯ ಮ್ಯಾನೇಜ್‌ಮೆಂಟ್ ವತಿಯಿಂದಲೇ ಉಚಿತ ಪುಸ್ತಕ ಮತ್ತು ಬಟ್ಟೆಯನ್ನು ಕೊಡುವ ಪರಿಪಾಠ ಕೂಡ ಇಲ್ಲಿದೆ.

ಆದರೆ ಹೆಚ್ಚುತ್ತಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಹೊಸ ಹೊಸ ಕಟ್ಟಡಗಳನ್ನು ನಿರ್ಮಿಸುವುದಕ್ಕೆ, ಆಟದ ಮೈದಾನಗಳನ್ನು ಮಾಡಿಕೊಳ್ಳುವುದಕ್ಕೆ ಸಂಸ್ಥೆಯ ಬಳಿ ಜಾಗವಿರಲಿಲ್ಲ. ಹೀಗಾಗಿ, ಪಕ್ಕದಲ್ಲೇ ಸರ್ವೇ ನಂಬರ್ 9/2 ನಲ್ಲಿರುವ ಸರ್ಕಾರಿ ಜಾಗದಲ್ಲಿ ಒಂದಿಷ್ಟು ಜಾಗವನ್ನು ತಮ್ಮ ಸಂಸ್ಥೆಗೆ ಗುತ್ತಿಗೆ ಆಧಾರದಲ್ಲಿ ಕೊಡಬೇಕೆಂದು ಅದು ಸರ್ಕಾರವನ್ನು ಕೇಳಿಕೊಳ್ಳುತ್ತಲೇ ಬಂದಿದೆ. ಈ ಹಿಂದೆ ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಪ್ರಾರಂಭವಾದ ಅವರ ಈ ಬೇಡಿಕೆ ಇಂದಿಗೂ ಈಡೇರಿಲ್ಲ. ಹಲವು ಸರ್ಕಾರಗಳು, ಮುಖ್ಯಮಂತ್ರಿಗಳು ಬಂದುಹೋದರೂ ಎಲ್ಲರೂ ಆಡಿದ್ದು ಒಂದೇ ಮಾತು: "ಖಾಸಗಿ ಸಂಸ್ಥೆಯೊಂದಕ್ಕೆ ಸರ್ಕಾರಿ ಜಾಗವನ್ನು ಗುತ್ತಿಗೆ ಆಧಾರದಲ್ಲಿ ಕೊಡಲು ಕಾನೂನಿನಲ್ಲಿ ಅವಕಾಶವಿಲ್ಲ"! ಇದು ಒಂದು ಕತೆ.

ರಾಜ್ಯದಲ್ಲಿ ಬಿಜೆಪಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ತಕ್ಷಣವೇ ಅಪರೂಪಕ್ಕೆ ಸಿಕ್ಕಿರುವ ಅಧಿಕಾರವನ್ನು ಬಳಸಿಕೊಂಡು ಹೊಟ್ಟೆ ತುಂಬಾ ದುಡ್ಡು, ಆಸ್ತಿಪಾಸ್ತಿ ತಿನ್ನುವುದಕ್ಕೆ ಬಿಜೆಪಿ ಮತ್ತು ಸಂಘಪರಿವಾರಿಗಳು ಕಾಯುತ್ತಲೇ ಇದ್ದರು. ಒಂದೆಡೆ ಬಿಜೆಪಿಯ ಎಮ್ಮೆಲ್ಲೆಗಳು, ಮಂತ್ರಿಗಳು ಎಲ್ಲೆಲ್ಲಿ ಎಷ್ಟೆಷ್ಟು ತಿನ್ನಬಹುದೆಂಬ ಲೆಕ್ಕಾಚಾರ ಹಾಕುತ್ತಿದ್ದರೆ ಇನ್ನೊಂದೆಡೆ ಆರೆಸ್ಸೆಸ್ ಮತ್ತು ಅದರ ಕೂಸುಗಳಂತಿರುವ ಚಿಕ್ಕಪುಟ್ಟ ಸಂಘಸಂಸ್ಥೆಗಳು ವಿವಿಧ ನಗರಗಳಲ್ಲಿ ಬೆಲೆಬಾಳುವ ಭೂಮಿ ನುಂಗುವ ಕಾಯಕದಲ್ಲಿ ತೊಡಗಿದವು. ಅದರ ಭಾಗವಾಗಿಯೇ ಆರ್‌ಎಸ್ಸೆಸ್‌ನ ಕೂಸಾಗಿರುವ ವಿಶ್ವ ಹಿಂದೂ ಸೇವಾ ಪ್ರತಿಷ್ಠಾನ ಎಂಬ ಟ್ರಸ್ಟ್ ಕೂಡ 'ಸ್ಲಂ ಮಕ್ಕಳಿಗೆ ನೆಲೆ ಕಲ್ಪಿಸುತ್ತೇವೆ' ಎಂಬ ನೆಪವನ್ನಿಟ್ಟುಕೊಂಡು ಲಗ್ಗೆರೆಯ ಸರ್ವೇ ನಂಬರ್ 9/2ರಲ್ಲಿರುವ ಅರ್ಧ ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಕೊಡಬೇಕೆಂದು ಸರ್ಕಾರಕ್ಕೆ ಮನವಿ ಕೊಟ್ಟಿತು. ವಾಸ್ತವದಲ್ಲಿ ಇದು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ವಶದಲ್ಲಿರುವ ಸರ್ಕಾರಿ ಜಮೀನು. ಅದನ್ನು ಖಾಸಗೀ ಸಂಸ್ಥೆಗೆ ಗುತ್ತಿಗೆ ಕೊಡುವುದಕ್ಕೆ ಬರುವುದಿಲ್ಲ ಎಂದು ವೀಣಾ ವಿದ್ಯಾಸಂಸ್ಥೆಗೆ ಹೇಳುತ್ತಾ ಬಂದಿದ್ದ ಅದೇ ಸರ್ಕಾರ ಹಿಂದುಮುಂದು ನೋಡದೆ 12 ಗುಂಟೆ ಜಾಗವನ್ನು ವಿಶ್ವ ಹಿಂದೂ ಸೇವಾ ಪ್ರತಿಷ್ಠಾನಕ್ಕೆ ಮಂಜೂರು ಮಾಡಿದೆ. ಅದೂ ಸಾಕಾಗಲಿಲ್ಲ ಎಂಬಂತೆ ಉಳಿದ ಎಂಟು ಗುಂಟೆ ಜಾಗವನ್ನೂ ಕೊಟ್ಟು ಒಟ್ಟು ಹಿಂದೂ ಸೇವಾ ಪ್ರತಿಷ್ಠಾನ ಕೇಳಿದ ಒಟ್ಟು ಅರ್ಧ ಎಕರೆ ಜಾಗವನ್ನು ವರ್ಷಕ್ಕೆ ಹತ್ತು ಸಾವಿರ ರೂಪಾಯಿಯಂತೆ ನೆಲಬಾಡಿಗೆ ಆಧಾರದಲ್ಲಿ ನೀಡಬೇಕೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳೇ ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯ ಆಯುಕ್ತರಿಗೆ ಆದೇಶ ಹೊರಡಿಸಿದ್ದಾರೆ.

ವಾಸ್ತವದಲ್ಲಿ ಈ ವಿಶ್ವ ಹಿಂದೂ ಸೇವಾ ಪ್ರತಿಷ್ಠಾನ ಎಂಬ ಸಂಸ್ಥೆ ಹುಟ್ಟಿಕೊಂಡಿದ್ದೇ ಈ ನೆಲವನ್ನು ಕಬಳಿಸುವುದಕ್ಕಾಗಿ. ಬೆಂಗಳೂರು ಬೃಹದಾಕಾರವಾಗಿ ಬೆಳೆದ ಕೂಡಲೇ ಇಲ್ಲಿ ಭೂಮಿಗೆ ಚಿನ್ನದ ಬೆಲೆ ಬಂದುಬಿಟ್ಟಿದೆ. ಲಗ್ಗೆರೆಯ ಈ ಭೂಮಿ ಏನಿಲ್ಲವೆಂದರೂ ಪ್ರತಿ ಚದರ ಅಡಿಗೆ 2500-3000 ರೂಪಾಯಿಗಳ ತನಕ ಬೆಲೆಬಾಳುತ್ತದೆ. ಅಂದರೆ, ಅರ್ಧ ಎಕರೆ ಭೂಮಿ ಎಂದರೆ 21,780 ಚದರ ಅಡಿಗಳಷ್ಟಾಗುತ್ತದೆ. ಒಂದು ಚದರ ಅಡಿಗೆ 2500 ರೂಪಾಯಿ ಎಂದೇ ಇಟ್ಟುಕೊಂಡರೂ ಅದರ ಬೆಲೆ ಕನಿಷ್ಠ ಐದೂವರೆ ಕೋಟಿ ರೂಪಾಯಿಯಷ್ಟಾಗುತ್ತದೆ! ನಿಜಾರ್ಥದಲ್ಲಿ ಒಂದಿಷ್ಟು ಸಮಾಜಕ್ಕೆ ಒಳ್ಳೆಯದನ್ನು ಮಾಡುತ್ತಿದ್ದ ವೀಣಾ ವಿದ್ಯಾಸಂಸ್ಥೆ ಕಳೆದ ಇಪ್ಪತ್ತು ವರ್ಷಗಳಿಂದ ಬೇಡಿಕೊಂಡರೂ ಒಂದು ಅಡಿ ಜಾಗ ಕೊಡದ ಅದೇ ಸರ್ಕಾರ ಸಮಾಜ ಸೇವೆಯ ಹೆಸರಿನಲ್ಲಿ ಸರ್ಕಾರಿ ಭೂಮಿಗೆ ಕನ್ನ ಹಾಕಲು ಬಂದಿರುವ ವಿಶ್ವ ಹಿಂದೂ ಸೇವಾ ಪ್ರತಿಷ್ಠಾನಕ್ಕೆ ಏಕಾಏಕಿ ಐದೂವರೆ ಕೋಟಿ ರೂಪಾಯಿ ಮೌಲ್ಯದ ಜಾಗವನ್ನು ಕಣ್ಣುಮುಚ್ಚಿಕೊಂಡು ಕೊಡುತ್ತದೆ ಎಂದರೆ ಏನೆನ್ನಬೇಕು? ಭೂಮಿ ಕೈಗೆ ಸಿಕ್ಕ ತಕ್ಷಣವೇ ಹಿಂದೂ ಪ್ರತಿಷ್ಠಾನ ಕೂಡ ಅಲ್ಲಿ ಕಟ್ಟಡಗಳನ್ನು ನಿರ್ಮಿಸಲಾರಂಭಿಸಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಗಲುದರೋಡೆಗೊಳಗಾಗಿರುವ ಸಾರ್ವಜನಿಕ ಆಸ್ತಿಗಳಲ್ಲಿ ಇದೂ ಒಂದು.

ಸ್ಲಂ ನಿವಾಸಿಗಳು ಈಗ ಈ ಹಗಲುದರೋಡೆಯ ವಿರುದ್ಧ ಬೀದಿಗಿಳಿಯಲು ನಿರ್ಧರಿಸಿದ್ದಾರೆ. ಸಮತಾ ಸೈನಿಕ ದಳ ಅದರ ನೇತೃತ್ವ ವಹಿಸಿಕೊಂಡಿದೆ. ಒಂದೆಡೆ ನ್ಯಾಯಾಲಯದ ಮೊರೆ ಹೋಗುವ ಮೂಲಕವೂ, ಅದೇ ಸಮಯದಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸುವ ಮೂಲಕವೂ ನೆಲಗಳ್ಳ ಹಿಂದೂ ಪ್ರತಿಷ್ಠಾನ ಹಾಗೂ ಭ್ರಷ್ಟ ಸರ್ಕಾರಗಳೆರಡಕ್ಕೂ ಬಿಸಿ ಮುಟ್ಟಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ●





ಬಿಜೆಪಿ ಹೈಕಮಾಂಡ್ ಒಡೆದ ಮನೆ

ಕಾಂಗ್ರೆಸ್‌ಗಿರುವಂತೆ, ಜೆಡಿಎಸ್‌ನಲ್ಲೂ ಕಾಣುವಂತೆ ಬಿಜೆಪಿಗೂ ಹೈಕಮಾಂಡ್ ಎನ್ನುವುದೊಂದಿದೆ. ಆದರೆ ಈಗ ಬಿಜೆಪಿ ಹೈಕಮಾಂಡ್ ಕೂಡ ಒಡೆದ ಮನೆ. ಕಾಂಗ್ರೆಸ್‌ಗಾದರೆ ಸೋನಿಯಾ ಅಧಿನಾಯಕಿ ದಳದವರಿಗೆ ದೇವೇಗೌಡ-ಕುಮಾರಸ್ವಾಮಿಯ ಮಾತೇ ಅಂತಿಮ. ಆದರೆ ಬಿಜೆಪಿ ವಿಚಾರದಲ್ಲಿ ಹಾಗೆ ಹೇಳುವ ಹಾಗೇ ಇಲ್ಲ.

ಕರ್ನಾಟಕದ ಬಿಜೆಪಿ ಒಳಜಗಳ ಈಗ ದೆಹಲಿ ತಲುಪಿದೆ. ಆದರ ಬೆನ್ನ ಹಿಂದೆಯೇ ಕೇಂದ್ರ ಬಿಜೆಪಿ ನಾಯಕತ್ವದ ಭಿನ್ನಾಭಿಪ್ರಾಯಗಳ ಬಗ್ಗೆಯೂ ಮಾತುಗಳು ಕೇಳಿಬರುತ್ತಿವೆ. ಹೆಸರಿಗೆ ಪೈಲ್ವಾನ್ ರಾಜನಾಥ್ ಸಿಂಗ್ ಬಿಜೆಪಿ ಅಧ್ಯಕ್ಷರಾಗಿದ್ದರೂ ಅಲ್ಲಾ ಈತನಷ್ಟೇ ತೂಕವಿರುವ ಉಪಾಧ್ಯಕ್ಷ ವೆಂಕಯ್ಯ ನಾಯ್ಡು, ಪ್ರಧಾನ ಕಾರ್ಯದರ್ಶಿಗಳಾದ ಅರುಣ್ ಜೈಟ್ಲಿ ಅನಂತ್‌ಕುಮಾರ್, ವಿರೋಧಿ ನಾಯಕ ಅಡ್ವಾಣಿ, ಉಪನಾಯಕಿ ಸುಷ್ಮಾ ಸ್ವರಾಜ್ ಇದ್ದಾರೆ. ಯಡ್ಡಿ-ರೆಡ್ಡಿ ಜಗಳಕ್ಕೆ ಸಂಬಂಧಿಸಿದಂತೆ ಈಗ ಬಿಜೆಪಿ ನಾಯಕತ್ವದಲ್ಲೂ ಎರಡು ಗುಂಪುಗಳಾಗಿವೆಯಂತೆ. ರಾಜನಾಥ್ ಸಿಂಗ್ ಹಾಗೂ ವೆಂಕಯ್ಯ ನಾಯ್ಡು ಯಡ್ಡಿ ಪರವಿದ್ದರೆ ಮತ್ತೊಂದೆಡೆ ಸುಷ್ಮಾ ಸ್ವರಾಜ್ ಹಾಗೂ ಅನಂತ್‌ಕುಮಾರ್ ರೆಡ್ಡಿ ಬಣದ ಪರ ಮಾತನಾಡಿದ್ದಾರೆ. ಇವರ ನಡುವೆ ಅರುಣ್ ಜೈಟ್ಲಿ ಎರಡೂ ಗುಂಪಿನ ನಡುವೆ ಫಿಫ್ಟಿ-ಫಿಫ್ಟಿ ಎಂಬಂತೆ ನಿಲುವು ತಳೆದಿದ್ದಾರೆ ಎನ್ನಲಾಗುತ್ತಿದೆ. ಅಂದರೆ ಇರುವ ಆರು ನಾಯಕರ ಪೈಕಿ ಐವರಿಗೆ ಖಚಿತ ಅಭಿಪ್ರಾಯಗಳಿವೆ ಎಂದಾಯಿತು. ಆ ಲೆಕ್ಕದಲ್ಲಿ ಯಡ್ಡಿ-ರೆಡ್ಡಿ ಬಣ ತಲಾ ಐವತ್ತು ಭಾಗ ಕೇಂದ್ರ ನಾಯಕರ ಬಣ ಹೊಂದಿದೆ. ಇನ್ನುಳಿದ ನಾಯಕ ಅಡ್ವಾಣಿ ಮಾತ್ರ ಸರ್ವಸಮ್ಮತ ನಿಲುವು ತಳೆದು ಬಿಕ್ಕಟ್ಟು ಬಗೆಹರಿಸುವ ಯತ್ನ ನಡೆಸಿದ್ದಾರೆ. ಹಾಗಾಗಿಯೇ ಕರ್ನಾಟಕ ಬಿಕ್ಕಟ್ಟಿನ ಬಗ್ಗೆ ಜೈಟ್ಲಿ ಅನಂತ್, ಸುಷ್ಮಾ, ರಾಜನಾಥ್ ಇವರೆಲ್ಲಾ ಹೇಳಿಕೆಗಳನ್ನು ಕೊಡುತ್ತಿದ್ದರೂ ಇದುವರೆವಿಗೂ ಯಾವುದೇ ಹೇಳಿಕೆ ನೀಡಿರದ ಲೀಡರ್ ಯಾರೆಂದರೆ ಅದು ಅಡ್ವಾಣಿ ಮಾತ್ರ.

ಕರ್ನಾಟಕ ಬಿಜೆಪಿಯೊಳಗಿನ ಜಗಳದ ಬೆಂಕಿ ನಂದಿಸಲು ಕೇಂದ್ರ ಬಿಜೆಪಿಗಳು ತಮ್ಮ ಅತ್ಯುತ್ತಮ ಅಗ್ನಿ ಶಾಮಕ ದಳವನ್ನು ಕಳುಹಿಸಿದಾಗಲೂ ನಯಾಪೈಸೆಯಷ್ಟು ಹೀಟ್ ಕಡಿಮೆಯಾಗಿರಲಿಲ್ಲ. ಅವರಿಗೆ ಒಳಜಗಳವೆಂಬುದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಾಗಿಲ್ಲ. ಬಿಹಾರದಲ್ಲಿ ಉಪಮುಖ್ಯಮಂತ್ರಿ ಎಸ್.ಕೆ. ಮೋದಿ ಹಾಗೂ ಗಿರಿರಾಜ್ ಸಿಂಗ್ ಜಗಳಕ್ಕಿಳಿದಿದ್ದಾರೆ. ಉತ್ತರ ಪ್ರದೇಶದಲ್ಲಿ ರಾಜ್‌ನಾಥ್ ಸಿಂಗ್, ಲಾಲಾಜಿ ಖಂಡನ್, ಕಲರಾಜ್ ಮಿಶ್ರಾ ನಡುವೆ ವೈಮನಸ್ಸಿದೆ. ಗುಜರಾತ್, ಹಿಮಾಚಲ, ದೆಹಲಿ ಬಿಜೆಪಿಯೊಳಗೂ ಜಗಳಗಳಿವೆ. ರಾಜಸ್ತಾನದ ವಸುಂಧರಾ ರಾಜೆ ಹೈಕಮಾಂಡಿಗೆ ಬೆಲೆ ನೀಡಿರಲಿಲ್ಲ. 2009 ರಲ್ಲೇ ಸಂಸತ್ ಚುನಾವಣೆ ಸೋತ ನಂತರ ನಡೆದ ಮೂರು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಸೋತು ನೆಲಕಚ್ಚಿದೆ. ಬಿಜೆಪಿ ಹೈಕಮಾಂಡ್‌ನಲ್ಲೇ ಒಗ್ಗಟ್ಟಿರದಿದ್ದ ಕಾರಣ ಹರಿಯಾಣದಲ್ಲಿ ಬಿಜೆಪಿಗೆ ಅಧಿಕಾರ ತಪ್ಪಿತ್ತು. ಬಿಜೆಪಿಯ ಒಂದು ಗುಂಪು ಓಂಪ್ರಕಾಶ್ ಚೌತಾಲಾನ INLD ಪಾರ್ಟಿ ಜೊತೆ ಮೈತ್ರಿಗೆ ಒಲವು ಹೊಂದಿತ್ತು. ಆದರೆ ಹೈಕಮಾಂಡಿನ ಇನ್ನೊಂದು ಗುಂಪು ಒಪ್ಪದ ಕಾರಣ ಮೈತ್ರಿ ಅಸಾಧ್ಯವಾಗಿ ಕಾಂಗ್ರೆಸ್ ಅದರ ಲಾಭ ಪಡೆದಿತ್ತು. ಇನ್ನೂ ಮಹಾರಾಷ್ಟ್ರದಲ್ಲೂ ಶಿವಸೇನೆಯೊಂದಿಗಿನ ಮುಸುಕಿನ ಗುದ್ದಾಟದಿಂದಾಗಿ ಬಜೆಪಿಗಳಿಗೆ ಅಧಿಕಾರ ಸಿಗಲಿಲ್ಲ. ಒಟ್ಟಾರೆ ಈ ಅಸೆಂಬ್ಲಿ ಎಲೆಕ್ಷನ್‌ಗಳಲ್ಲಿ ಬಿಜೆಪಿ ೩-೦ ಯಿಂದ ಸೋಲಲು ಅದರೊಳಗಿನ ಒಳಜಗಳಗಳೂ ಕೊಡುಗೆ ನೀಡಿವೆ.

ಹಾಲಿ ಬಿಜೆಪಿಯ ಆರೆಂಟು ಪ್ರಮುಖ ಲೀಡರ್‌ಗಳಿಗೆ ಪಕ್ಷದ ಹಿತಾಸಕ್ತಿಗಿಂತ ತಮ್ಮ ತಮ್ಮ ಹಿತಾಸಕ್ತಿಗಳೂ ಹಾಗೂ ತಮ್ಮ ಹಿಂಬಾಲಕ ಗುಂಪುಗಳ ಲಾಭಗಳೇ ಮುಖ್ಯವಾಗಿವೆ. ಅನಂತ್‌ಕುಮಾರ್ ಹುಬ್ಬಳ್ಳಿಯ ತಮ್ಮ ಸೋದರ ನಂದಕುಮಾರ್ ಮನೆಯಲ್ಲೇ ಜಗದೀಶ್ ಶೆಟ್ಟರ್ ಹಾಗೂ ರೆಡ್ಡಿಗಳ ಭೇಟಿ ಏರ್ಪಡಿಸಿ ಬಂಡಾಯಕ್ಕೆ ತಳಹದಿ ಹಾಕಿಸಿದರೆಂಬುದು ಈಗ ಜಗಜ್ಜಾಹೀರಾಗಿದೆ. ಇದು ನಡೆದದ್ದು ಅಕ್ಟೋಬರ್ 24-25 ರಂದು. ಆದರೆ ಅನಂತ್ ತಮಗೇನೂ ಗೊತ್ತಿರಲಿಲ್ಲವೆಂಬಂತೆ ಮುಂದಿನ ಮೂರ್ನಾಲ್ಕು ದಿನ ನಡೆದುಕೊಂಡರು. ಇನ್ನು ಗಣಿರೆಡ್ಡಿಗಳ ಗಾಡ್ ಮದರ್‌ನಂತಿರುವ ಸುಷ್ಮಾಗೆ ಮುನ್ಸೂಚನೆ ಕೊಡದೆ ರೆಡ್ಡಿಗಳು ಬಂಡಾಯಕ್ಕೆ ಚಾಲನೆ ನೀಡಿರಲು ಸಾಧ್ಯವೆ?


ಬಿಜೆಪಿ ಹೈಕಮಾಂಡ್ ಕಾಂಗ್ರೆಸ್ ಹೈಕಮಾಂಡಿನಂತಿಲ್ಲ. ಆಂಧ್ರದಲ್ಲಿ ಇದೇ ರೆಡ್ಡಿ-ಜಗನ್ ಗ್ಯಾಂಗ್ ರೋಸಯ್ಯ ವಿರುದ್ಧ ಗಲಾಟೆಗೆ ಯತ್ನಿಸಿದಾಗ ಸೋನಿಯಾ ಜಗನ್‌ಗೆ ಎಂಥ ಲಾತ ಕೊಟ್ಟರೆಂದರೆ ಆ ಹುಡುಗ ಇನ್ನು ನೋವಿನಿಂದ ನರಳುತ್ತಿದ್ದಾನೆ. ಆದರೆ ಬಿಜೆಪಿಯಲ್ಲೂ ಲಾತಾಗಳು ಬೀಳುತ್ತಿವೆಯಾದರೂ ಅಲ್ಲಿ ಪ್ರತಿಯೊಬ್ಬರೂ ತಮ್ಮೊಳಗಿನ ಮತ್ತೊಬ್ಬರಿಗೇ ಏಟು ಹಾಕುತ್ತಿರುವುದು ಕಾಣುತ್ತಿದೆ.

ಬಿಜೆಪಿಯ ಹೈಕಮಾಂಡ್ ಎನ್ನುವುದು ಒಬ್ಬ ಸರಿಯಾದ ಕಮಾಂಡರ್ ಹಾಗೂ ಕಮ್ಯಾಂಡೇ ಇರದ ಒಂದು ಗುಂಪಷ್ಟೆ. ●

ಶೆಟ್ಟರ್ ಸಡಗರ

ಸ್ಪೀಕರ್ ಹುದ್ದೆಯಲ್ಲಿ ಕುಳಿತಿರುವ ಜಗದೀಶ್ ಶೆಟ್ಟರ್ ಸಾಹೇಬರು ಪಕ್ಕಾ ಕಮ್ಯುನಲ್ ಮೈಂಡೆಡ್ ಎಂಬುದು ಬೆಂಗಳೂರು, ಮೈಸೂರು, ಕರಾವಳಿ ಕಡೆಯವರಿಗೆ ಗೊತ್ತಿರಲಿಕ್ಕಿಲ್ಲ, ಆದರೆ ಹುಬ್ಬಳ್ಳಿ-ಧಾರವಾಡದ ಜನತೆಗೆ ಶೆಟ್ಟರ್ ಎಂತಹವರೆಂಬುದು ಗೊತ್ತೇ ಇದೆ. ಇವತ್ತು ಸೋಷಿಯಲಿಸ್ಟರಂತೆ ಫೋಸು ಕೊಡುತ್ತ ಲಿಂಗಾಯತರ ಓಟ್‌ಬ್ಯಾಂಕ್ ಸೃಷ್ಟಿಸಿಕೊಂಡಿರುವ ಶೆಟ್ಟರ್ ಆಳದಲ್ಲಿ ಸಂಘಪರಿವಾರದ ಪರಿಚಾರಕ.

ಲಿಂಗಾಯತ ಬಣಜಿಗರ ಹೆಸರಲ್ಲಿ ರಾಜಕೀಯ ಮಾಡುವ ಶೆಟ್ಟರ್ ವೃತ್ತಿಯಲ್ಲಿ ವಕೀಲ. ಹಿಂದೆ ಅವರ ತಂದೆ ಜನತಾಪಕ್ಷದಿಂದ ಮಹಾನಗರ ಪಾಲಿಕೆ ಮೇಯರ್ ಆಗಿದ್ದಾಗ ಜಗದೀಶ್ ಶೆಟ್ಟರ್ ಉಡಾಳ ವಿದ್ಯಾರ್ಥಿಯಾಗಿದ್ದರು! ಮುಂದೆ ಎಲ್‌ಎಲ್‌ಬಿ ಮುಗಿಸಿ, ಅಪ್ಪನ ಹೆಸರಲ್ಲಿ ಕೇಸುಗಳನ್ನು ಪಡೆಯುತ್ತ ಬಂದ ಜಗದೀಶ್ ಶೆಟ್ಟರ್ ಎಂದೂ ಸ್ವಂತ ವರ್ಚಸ್ಸು ಬೆಳೆಸಿಕೊಳ್ಳಲೇ ಇಲ್ಲ.



ಮುಂದೆ ಜನಸಂಘದ ಹವಾ ಜೋರಾದಾಗ ಶೆಟ್ಟರ್, ಅನಂತ್‌ಕುಮಾರ್, ಪ್ರಹ್ಲಾದ್ ಜೋಷಿಗಳೆಲ್ಲ ವಾರಾನ್ನದ ಗಿರಾಕಿಗಳಾಗಿ ಸಂಘ ಪರಿವಾರದಲ್ಲಿ ಚಾಕರಿ ಮಾಡಿದರು. ಬಾಬ್ರಿ ಮಸೀದಿ ವಿಷಯ ದೇಶಾದ್ಯಂತ ಕೋಲಾಹಲ ಎಬ್ಬಿಸಿದಾಗ ಇಲ್ಲಿ ಈ ಮರಿ ಚೆಡ್ಡಿಗಳು ಈದ್ಗಾ ವಿವಾದ ಶುರು ಮಾಡಿದರು. ಹುಂಬ ಪಟ್ಟೇಗಾರರಿಗೂ, ಮುಸ್ಲಿಮರಿಗೂ ಇದ್ದ ವೃತ್ತಿ ಪೈಪೋಟಿಯನ್ನು ಲಾಭವಾಗಿ ಮಾಡಿಕೊಂಡ ಶೆಟ್ಟರ್ ಇತ್ಯಾದಿಗಳು ಮೊದಲಿಗೆ ಪಟ್ಟೇಗಾರ್ V/s ಮುಸ್ಲಿಮ್ ಎಂದು ವಿಭಜನೆ ಮಾಡಿದರು. ಉಮಾಭಾರತಿ ಕರೆಸಿ ಆರು ಜನರ ಬಲಿ ತೆಗೆದುಕೊಂಡರು. ನಂತರದ ಚುನಾವಣೆಯಲ್ಲಿ ಅದು ಲಿಂಗಾಯತ V/s ಮುಸ್ಲಿಮ್ ಆಗಿ ಪರಿವರ್ತನೆಗೊಂಡು ಹುಬ್ಬಳ್ಳಿ-ಧಾರವಾಡದಲ್ಲಿ ಬಿಜೆಪಿಗೆ ಬೇಸ್ ಕಟ್ಟಿಕೊಟ್ಟುಬಿಟ್ಟಿತು. ಅಂದಿನಿಂದ ಹುಬ್ಬಳ್ಳಿ ಗ್ರಾಮೀಣ ಭಾಗದಲ್ಲಿ ಲಿಂಗಾಯತರ ಮತಬ್ಯಾಂಕ್ ಸೃಷ್ಟಿಸಿಕೊಂಡು, ವಿರೋಧಿ ನಾಯಕರಾದ ಬಸವರಾಜ ಹೊರಟ್ಟಿ, ಎಚ್.ಕೆ. ಪಾಟೀಲರೊಂದಿಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡು ಶಾಸಕರಾಗಿ ಆರಿಸಿಬರುತ್ತಲೇ ಇರುವ ಶೆಟ್ಟರ್‌ಗೆ ಮರ್ಮಾಘಾತ ನೀಡಿದ್ದು ಯಡಿಯೂರಪ್ಪ. ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಶೆಟ್ಟರ್ ಎಲ್ಲಿ ಉತ್ತರ ಕರ್ನಾಟಕದ ಲಿಂಗಾಯತ ಲೀಡರ್ ಆಗಿಬಿಡುತ್ತಾರೋ ಎಂದು ಮುನ್ನೆಚ್ಚರಿಕೆ ವಹಿಸಿದ ಯಡಿಯೂರಪ್ಪ ಶೆಟ್ಟರ್‌ಗೆ ಸಚಿವ ಹುದ್ದೆ ನೀಡದೇ, ಸ್ಪೀಕರ್ ಮಾಡಿ ಸೈಡಿಗೆ ಸರಿಸಿದ್ದಲ್ಲದೇ ಸಿ.ಎಂ. ಉದಾಸಿ, ಬಸವರಾಜ ಬೊಮ್ಮಾಯಿಯವರನ್ನು ಬೆಳೆಸುತ್ತ ಶೆಟ್ಟರ್ ಅವರನ್ನು ಮಂಕು ಮಾಡತೊಡಗಿದರು.

ಯಡಿಯೂರಪ್ಪರನ್ನು ಕೆಳಗುರುಳಿಸಿದರೆ ಲಿಂಗಾಯತರ ವಿರೋಧ ಕಟ್ಟಿಕೊಳ್ಳುವುದು ಗ್ಯಾರಂಟಿ ಆಗಿರುವುದರಿಂದ, ಅನಂತ್‌ಕುಮಾರ್, ರೆಡ್ಡಿಗಳು ಗಾಳ ಹಾಕಿದ್ದೇ ಶೆಟ್ಟರ್‌ಗೆ. ಸಚಿವ ಪದವಿ ಇಲ್ಲದೇ ಅತೃಪ್ತರಾಗಿದ್ದ ಶೆಟ್ಟರ್‌ಗೆ ಇದೊಳ್ಳೆ ಛಾನ್ಸು ಎಂಬ ಆಶೆ ಗರಿಗೆದರಿ ಸಿ.ಎಂ. ಕುರ್ಚಿಯ ಕನಸಿನಲ್ಲಿ ತೇಲಾಡತೊಡಗಿದ್ದಾರೆ.

ಅಂದಂತೆ, ತನಗಿಂತ ಜೂನಿಯರ್ ಆಗಿರುವ ಸಂಸದ ಪ್ರಹ್ಲಾದ್ ಜೋಷಿಯ ಮಾತನ್ನು ತಪ್ಪದೇ ಪಾಲಿಸುವ ಶೆಟ್ಟರ್ ಶುದ್ಧ ಹಸ್ತದವರೇನೂ ಅಲ್ಲ. ಬೆಂಗಳೂರಲ್ಲಿ ಸಾಕಷ್ಟು ಆಸ್ತಿ ಮಾಡಿಕೊಂಡಿರುವ ಶೆಟ್ಟರ್ ಸಾಹೇಬರು ಹುಬ್ಬಳ್ಳಿಯಲ್ಲಿ ಸಂಪತ್ತು ಗಳಿಸಲು ಸಹೋದರ ಪ್ರದೀಪ್ ಶೆಟ್ಟರ್‌ರನ್ನು ಬಿಟ್ಟಿದ್ದಾರೆ. ಪಕ್ಕಾ ನೆಲಗಳ್ಳನಾಗಿರುವ ಪ್ರದೀಪ್ ಶೆಟ್ಟರ್ ವಾಜಪೇಯಿ ಪ್ರಧಾನಿಯಾಗಿದ್ದಾಗ ಸಖತ್ ಕಾಸು, ಆಸ್ತಿ ಮಾಡಿದ. ಹುಬ್ಬಳ್ಳಿ ಏರ್‌ಪೋರ್ಟ್ ಆಗುವ ಮೊದಲು, ರೈತರಿಂದ ಸಸ್ತಾ ರೇಟಿಗೆ ನೂರಾರು ಎಕರೆ ಭೂಮಿ ಖರೀದಿಸಿದ ಜಗದೀಶ್ ಶೆಟ್ಟರ್, ಪ್ರದೀಪ್ ಶೆಟ್ಟರ್‌ಗಳು ನಂತರ ಅದನ್ನು ಏರ್‌ಪೋರ್ಟ್ ಅಥಾರಿಟಿಗೆ ಭಾರೀ ಬೆಲೆಗೆ ಮಾರಿ ಲಾಭ ಮಾಡಿಕೊಂಡರು. ಅದೇ ವೇಳೆಯಲ್ಲಿ ವಾಜಪೇಯಿಯಿಂದ ಪೆಟ್ರೋಲ್ ಬಂಕ್ ಒಂದನ್ನು ಬಳುವಳಿ ಪಡೆದು ವಿವಾದದಲ್ಲಿ ಸಿಕ್ಕಿದ್ದರು.


ವಿರೋಧಪಕ್ಷದ ನಾಯಕರಾಗಿದ್ದಾಗ ಜಗದೀಶ್ ಶೆಟ್ಟರ್ ಆಡಳಿತ ಪಕ್ಷದೊಂದಿಗೆ ಗುಪ್ತಮೈತ್ರಿ ಮಾಡಿಕೊಂಡು ಆಸ್ತಿ ಮಾಡಿದರೇ ಹೊರತು, ಎಂದೂ ಆಡಳಿತ ಪಕ್ಷದ ವೈಫಲ್ಯಗಳನ್ನು ಸರಿಯಾಗಿ ಎತ್ತಿ ತೋರಿಸಲೇ ಇಲ್ಲ. ಸ್ಪೀಕರ್ ಆಗಿ ಅವರ ಕಾರ್ಯನಿರ್ವಹಣೆಯೂ ಕಳಪೆಯೇ.

ಸ್ವಂತ ವರ್ಚಸ್ಸಿಲ್ಲದ ಶೆಟ್ಟರ್ ಈಗ ರೆಡ್ಡಿಗಳ ಗಾಳದಲ್ಲಿರುವ 60 ಚಿಲ್ಲರೆ ಶಾಸಕರನ್ನು ನಂಬಿಕೊಂಡು ಸಿಎಂ ಆಗುವ ಕನಸು ಕಾಣುತ್ತಿದ್ದಾರೆ. ಆದರೆ ಹುಬ್ಬಳ್ಳಿ, ಧಾರವಾಡ, ಗದಗ ಭಾಗಗಳಲ್ಲೇ ಅವರಿಗೆ ಅಂತಹ ಬೆಂಬಲವೇನೂ ಕಾಣುತ್ತಿಲ್ಲ.

ಹುಬ್ಬಳ್ಳಿ ಶಹರದ ಶಾಸಕ ವೀರಭದ್ರಪ್ಪ ಹಾಲಹರವಿ, ಕುಂದಗೋಳ ಶಾಸಕ ಚಿಕ್ಕನಗೌಡ್ರ, ಧಾರವಾಡ ಗ್ರಾಮೀಣ ಶಾಸಕಿ ಸೀಮಾ ಮಸೂತಿ. ನವಲಗುಂದ ಎಂಎಲ್‌ಎ ಶಂಕರ ಪಾಟೀಲ್ ಮುನೇನಕೊಪ್ಪ, ರೋಣದ ಶಾಸಕ ಕಳಕಪ್ಪ ಬಂಡಿ. ಶಿರಹಟ್ಟಿ ಶಾಸಕ ರಾಮಣ್ಣ ಲಮಾಣಿ ಸಂಸದ ಪ್ರಹ್ಲಾದ್ ಜೋಷಿ ಸದ್ಯಕ್ಕೆ ಶೆಟ್ಟರ್ ಜೊತೆ ಗಟ್ಟಿಯಾಗಿ ನಿಂತಿದ್ದಾರೆ. ಧಾರವಾಡದ ಶಾಸಕ ಚಂದ್ರಕಾಂತ ಬೆಲ್ಲದ, ಹುಬ್ಬಳ್ಳಿಯ ಮಾಜಿ ಶಾಸಕ ಅಶೋಕ ಕಾಟವೆ, ಎಂಎಲ್‌ಸಿಗಳಾದ ಮೋಹನ ಲಿಂಬಿಕಾಯಿ, ವಿಜಯ ಸಂಕೇಶ್ವರ, ನರಗುಂದ ಶಾಸಕ ಸಿ.ಸಿ. ಪಾಟೀಲ್, ಗದಗಿನ ಎಂಎಲ್‌ಎ ಶ್ರೀಶೈಲಪ್ಪ ಬಿದರೂರು ಇವರ್‍ಯಾರೂ ಶೆಟ್ಟರ್‌ಗೆ ಬೆಂಬಲಿಸಿಲ್ಲ ಮತ್ತು ಯಡಿಯೂರಪ್ಪನ ಪರ ನಿಷ್ಠೆ ಹೊಂದಿದ್ದಾರೆ.

ಬಾಗಲಕೋಟೆ, ಬಿಜಾಪುರ ಭಾಗದಲ್ಲೂ ಹಲವಾರು ಲಿಂಗಾಯತರು ಯಡ್ಡಿಯ ಬೆಂಬಲಕ್ಕಿರುವುದು ಕೂಡಾ ಶೆಟ್ಟರ್‌ಗೆ ಮೈನಸ್ ಪಾಯಿಂಟ್. ರೆಡ್ಡಿಗಳ ರೊಕ್ಕದ ಕರಾಮತ್ತು ನಡೆದರಷ್ಟೇ ಈ ಸಂಘ ಪರಿವಾರದ ಮರಿ ಸಿಎಂ ಆಗುತ್ತೆ. ಇಲ್ಲದಿದ್ದರೆ ಇನ್ನೆಂದೂ ಸಚಿವಗಿರಿಯೇ ಸಿಗದಂತಹ ಹರಕೆಯ ಕುರಿಯಾಗುತ್ತಷ್ಟೇ..

● ಮಲ್ಲನಗೌಡರ್



ಯಡ್ಡಿಗೆ ಸ್ಕೆಚ್ ರೆಡಿಯಾಗಿದ್ದೇ ಹುಬ್ಬಳ್ಳಿಯಲ್ಲಿ!

ಇವತ್ತು ರಾಷ್ಟ್ರಾದ್ಯಂತ ಚರ್ಚೆಯಾಗುತ್ತಿರುವ ರಾಜ್ಯ ಬಿಜೆಪಿಯ ಭಿನ್ನಮತ, ಯಡಿಯೂರಪ್ಪರನ್ನು ಕೆಳಗಿಳಿಸುವ ಹುನ್ನಾರಕ್ಕೆ ಸ್ಪಷ್ಟ ರೂಪ ದೊರಕಿದ್ದು ಬೆಂಗಳೂರು, ಬಳ್ಳಾರಿಯಲ್ಲಲ್ಲ; ಅದು ಪರಿಪೂರ್ಣ ಆಕಾರ ಪಡೆದಿದ್ದು ಹುಬ್ಬಳ್ಳಿಯಲ್ಲಿ. ಯಡಿಯೂರಪ್ಪರಿಗೆ ಪರ್ಯಾಯ ನಾಯಕನನ್ನಾಗಿ ಜಗದೀಶ್ ಶೆಟ್ಟರ್ ಅವರನ್ನು ಆರಿಸಿದ್ದು ಅನಂತ್‌ಕುಮಾರ್ ಮತ್ತು ರೆಡ್ಡಿ ಗ್ಯಾಂಗ್. ಕಳೆದ ಎರಡು ಚುನಾವಣೆಗಳಿಂದ ಬಿಜೆಪಿಗೆ ಭಾರೀ ಬೆಂಬಲ ನೀಡಿರುವ ಉತ್ತರ ಕರ್ನಾಟಕದ ಲಿಂಗಾಯತರನ್ನು ಓಲೈಸಿದಂತೆಯೂ ಆಗುತ್ತದೆ. ಇತ್ತ ಯಡಿಯೂರಪ್ಪನ ನಿರ್ನಾಮ ಮಾಡಿದಂತೆಯೂ ಆಗುತ್ತದೆ, ಎಂಬ ಲೆಕ್ಕಾಚಾರದಲ್ಲಿ ಅನಂತು ಮತ್ತು ರೆಡ್ಡಿ ಗ್ಯಾಂಗ್ ಹುಬ್ಬಳ್ಳಿಯಲ್ಲಿ ಸ್ಕೆಚ್ ರೂಪಿಸಿತು.

ಕಳೆದ ತಿಂಗಳು 24ರಂದು ಖಾಸಗಿ ವಿಮಾನದಲ್ಲಿ ದೆಹಲಿಯಿಂದ ಬೆಳ್ಳಂಬೆಳಗ್ಗೆ 7.45ಕ್ಕೆ ಹುಬ್ಬಳ್ಳಿಗೆ ಹಾರಿಬಂದ ಅನಂತಕುಮಾರ್ ರವಿನಗರದಲ್ಲಿರುವ ಗೆಳೆಯನೊಬ್ಬನ ಮನೆಯಲ್ಲಿ ಹೋಮಹವನ ಕಾರ್ಯಕ್ರಮಕ್ಕೆ ಹಾಜರಾದರು. ನಂತರ ಇಂದಿರಾ ಕಾಲೋನಿಯಲ್ಲಿರುವ ತನ್ನ ಸಹೋದರ ನಂದಕುಮಾರ್ ಮನೆಗೆ ಜಗದೀಶ್ ಶೆಟ್ಟರ್ ಅವರನ್ನು ಕರೆಸಿಕೊಂಡು ಯಡ್ಡಿಯನ್ನು ಕೆಳಗಿಳಿಸುವ ಚರ್ಚೆ ನಡೆಸಿದರು. ಬಳ್ಳಾರಿ ರೆಡ್ಡಿಗಳು ರೊಕ್ಕದ ಚೀಲ ಹಿಡಿದು ನಿಂತಿರುವುದನ್ನು ಶೆಟ್ಟರ್‌ಗೆ ಮನವರಿಕೆ ಮಾಡಿದ ಅನಂತು ಶೆಟ್ಟರ್ ಅವರನ್ನು ಗಟ್ಟಿಯಾಗಿ ನಿಲ್ಲುವಂತೆ ಉಬ್ಬಿಸಿಹೋದರು. ಕೋಲೆ ಬಸವನಂತಿರುವ ಶೆಟ್ಟರ್ ಮರುದಿನವೇ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ಏರಿ ಬೆಂಗಳೂರು ಸೇರಿದರು. ಇತ್ತ ಹುಬ್ಬಳ್ಳಿಯಲ್ಲಿ ಸಂಸದ ಪ್ರಹ್ಲಾದ್ ಜೋಶಿ, ಶೆಟ್ಟರ್ ಪರ ಲಾಬಿ ಮಾಡತೊಡಗಿದರು.

ಬೆಂಗಳೂರಿನಲ್ಲಿ ರೆಡ್ಡಿಗಳ ಪಾರಿಜಾತ ಕಾಂಪ್ಲೆಕ್ಸ್‌ನಲ್ಲಿ ಶೆಟ್ಟರ್, ರೆಡ್ಡಿಗಳನ್ನು ಸೇರಿಸಿದ ಅನಂತಕುಮಾರ್ ರಾತ್ರಿ 3.30ರವರೆಗೆ ಸಭೆ ನಡೆಸಿ ಅಂತಿಮ ಸ್ಕೆಚ್ ರೂಪಿಸಿದರು.

ಈಗ ಈ ಭಾಗದ ಒಂದಿಷ್ಟು ಆಶೆಬುರುಕ ಶಾಸಕರನ್ನು ಹೈದರಾಬಾದ್, ಗೋವಾಗಳಿಗೆ ಹೊತ್ತೊಯ್ದು ಕೋಟಿಗಳ ತುಪ್ಪ ಸವರಿ ಸಾಕುನಾಯಿಗಳನ್ನಾಗಿ ಮಾಡಲಾಗಿದೆ.

ಒಟ್ಟಿನಲ್ಲಿ ಜನರಿಗೆ ಶೆಟ್ಟರ್ ಸಿಎಂ ಆದರೂ ಅಷ್ಟೇ, ಆಗದಿದ್ದರೂ ಅಷ್ಟೇ. ಏಕೆಂದರೆ ನೆರೆ ಪ್ರವಾಹದಿಂದ ನಲುಗಿರುವ ಜನಸಮುದಾಯಕ್ಕೀಗ ಖಾದಿಗಳನ್ನು ಕಂಡರೆ ಸಿಟ್ಟು ಉಕ್ಕತೊಡಗಿದೆ.

ಶೆಟ್ಟರ್ ಹರಕೆಯ ಕುರಿಯಾಗುತ್ತಾರೋ? ಅಥವಾ ಸಿಎಂ ಆಗಿಯೇ ಬಿಡುತ್ತಾರೋ? ಈ ಕುರಿತು ಜನರಲ್ಲಿ ಅಂತಹ ಕುತೂಹಲವೇನೂ ಇಲ್ಲವೇ ಇಲ್ಲ.

● ಹುಬ್ಬಳ್ಳಿಯಾಂ

ನಿಂತ ಜಾಗದಲ್ಲೇ ಅಡ್ವಾನ್ಸಾಗಿ ಮೂರು ಕೋಟಿಯ ಕ್ಯಾಷು. ಮಿಕ್ಕ ಏಳು ಕೋಟಿ ಬನಿವ್ವರೂ ಕೆಲಸ ಮುಗಿದ ಮೇಲೆ. ಅಲ್ಲಿಯತನಕ ಊಟ, ಬಟ್ಟೆ, ವಸತಿ, ಎಣ್ಣೆ, ಇಸ್ಪೀಟು, ಜಮ್ಮು, ಗುಂಡು, ತುಂಡು, ಚೆಂಡು ಎಲ್ಲದಕ್ಕೂ ವ್ಯವಸ್ಥೆಯಿದೆ. ಹೆಲಿಕಾಪ್ಟರ್ ಬೇಕಂದ್ರೆ ಹೆಲಿಕಾಪ್ಟರು. ಅದೂ ಬೇಡ ಅಂದ್ರೆ ಚಾರ್ಟರ್ಡ್ ಫ್ಲೈಟು!

ಇದು ಗಂಗಾವತಿ ಶಾಸಕ ಪರಣ್ಣ ಮುನವಳ್ಳಿ ತನ್ನ ಆಪ್ತೇಷ್ಟರ ಬಳಿ ಬಾಯಿಬಿಟ್ಟ ಸೀಕ್ರೆಟ್ಟು!

ನಾಲ್ಕು ದಿನಗಳ ಕಾಲ ಹೈದರಾಬಾದಿನ ಜಗನ್ ಮೋಹನ್ ರೆಡ್ಡಿಯ ರೆಸಾರ್ಟಿನಲ್ಲಿದ್ದು ದುಃಖಪಟ್ಟೇ ಆರೋಗ್ಯ ಕೆಡಿಸಿಕೊಂಡು ಗಂಗಾವತಿಗೆ ವಾಪಸ್ಸಾದ ಪರಣ್ಣ ಮುನವಳ್ಳಿ ಗಣಿರೆಡ್ಡಿಗಳ ಬೋನಿಗೆ ಬಿದ್ದ ಮಿಕಗಳ ಪೈಕಿ ಕುಂಚೂಣಿಯಲ್ಲಿದ್ದಾತ. ಏನೇನು ಜಾಲಿ ಮಾಡಲು ಹೋಗಿ ಕಾಯಿಲೆ ಬರಿಸಿಕೊಂಡನೋ; ಹೈದರಾಬಾದಿನ ರೆಸಾರ್ಟಿನಿಂದ ಬಂದವನೇ ಗಂಗಾವತಿಯ ತನ್ನ ಮನೆಯಲ್ಲೇ ಪತ್ರಿಕಾಗೋಷ್ಠಿ ಕರೆದ. ಪರಣ್ಣ ರೆಡ್ಡಿಗಳ ರೆಸಾರ್ಟ್ ಆತಿಥ್ಯವನ್ನು ಮುಕ್ತಕಂಠದಿಂದ ಹೊಗಳಿದ್ದೇ ಹೊಗಳಿದ್ದು-ಒಂದು ಮೂಲದ ಪ್ರಕಾರ ಸದ್ಯ ಗಣಿರೆಡ್ಡಿಗಳ ವಶದಲ್ಲಿರುವ ಒಟ್ಟು ಶಾಸಕರ ಸಂಖ್ಯೆ ಐವತ್ತೆಂಟು. ಹೊಸಪೇಟೆಯ ಆನಂದ್‌ಸಿಂಗ್, ಕೂಡ್ಲಿಗಿಯ ನಾಗೇಂದ್ರ, ಹೂವಿನಹಡಗಲಿಯ ಚಂದ್ರನಾಯ್ಕ, ಕಂಪ್ಲಿಯ ಸುರೇಶ್ ಬಾಬು; ಇತ್ಯಾದಿ ಬಳ್ಳಾರಿಯ ಪಕ್ಕಾ ರೆಡ್ಡಿ ನಿಷ್ಠ ಶಾಸಕರಿಗೆ ಕಾಸು ಕೊಟ್ಟು ಬೆಸಬೇಕಾದ ದರ್ದು ರೆಡ್ಡಿಗಳಿಗಿಲ್ಲ. ಹಾಗೇ ಶಿರಗುಪ್ಪದ ಸೋಮಲಿಂಗಪ್ಪನಂಥ ಕಟಿಭಯಂಕರನಿಗೆ ಸಿಗರೇಟು ಸ್ಪೀಟಿನ ವ್ಯವಸ್ಥೆ ಮಾಡಿಬಿಟ್ಟರೆ ಹಾಳುಬಾವಿಗೆ ಬೇಕಾದರೂ ಹಾರಿಬಿಡುತ್ತಾರೆ.

ಆದರೆ ಗಣಿರೆಡ್ಡಿಗಳ ಋಣದಲ್ಲಿಲ್ಲದೇ ಸಣ್ಣಪುಟ್ಟ ಕಾರಣಕ್ಕೆ ಯಡ್ಡಿ ವಿರುದ್ಧ ಮುನಿಸಿಕೊಂಡ ಶಾಸಕರಿದ್ದರಲ್ಲ-ಅಂಥ ಪ್ರತಿಯೊಬ್ಬ ಶಾಸಕನಿಗೆ ರೆಡ್ಡಿಗಳು ಕಟ್ಟುವ ಕಿಮ್ಮತ್ತು ಹತ್ತು ಕೋಟಿ!

ದಿನವೊಂದಕ್ಕೆ ಹದಿನೈದು ಕೋಟಿಯಷ್ಟು ಅದಿರು ದೋಚುವ ಗಣಿ ಖದೀಮರಿಗೆ ಒಬ್ಬ ಎಮ್ಮೆಲ್ಲೆಗೆ ಹತ್ತು ಕೋಟಿ ಕೊಡುವುದು ಯಾವ ಲೆಕ್ಕ?


ಬೆಳ್ಳುಬ್ಬಿ, ಸಾರ್ವಭೌಮಬಗಲಿ, ಹೊಳಲ್ಕೆರೆಯ ಚಂದ್ರಪ್ಪರಂಥ ಪಕ್ಕಾ ಪಕ್ಷನಿಷ್ಠ ಶಾಸಕರು ಕೂಡ ತಮ್ಮ ಕ್ಷೇತ್ರದ ನೆರೆಹಾವಳಿಯನ್ನೂ ಲೆಕ್ಕಿಸದೇ ರೆಡ್ಡಿಗಳ ರೆಸಾರ್ಟ್ ಮೋಜಿಗೆ ಬಲಿಯಾಗಿರುವುದು ಈ ಕಾರಣಕ್ಕೆ. ಅಷ್ಟೇ ಏಕೆ? ಜಸ್ಮಾಪಿ ಬಸವರಾಜ ಬೊಮ್ಮಾಯಿಗೆ ನಿಷ್ಠೆಯಿಂದಿರಬೇಕಿದ್ದ ನವಲಗುಂದದ ಶಾಸಕ ಶಂಕರ ಪಾಟೀಲ ಮುನೇನಕೊಪ್ಪರಂಥವರೂ ಕೂಡ ಕೈಲೆ ಬಿದ್ದು ರೆಡ್ಡಿಗಳ ರೆಸಾರ್ಟ್ ಪಾಲಾಗುತ್ತಿರುವುದು ಗಣಿ ಮಾಫಿಯಾದ ಮಹಾಬಲಕ್ಕೊಂದು ನಿದರ್ಶನವಷ್ಟೆ.

ಇಲ್ಲದಿದ್ದರೆ ಅಂತರಪಿಶಾಚಿಯಂತೆ ಅಲೆದುಕೊಂಡಿದ್ದ ಪತ್ತೂರು ಪ್ರಕಾಶನಂಥವರೂ ಕೂಡ ಗೋಗರೆದು ರೆಡ್ಡಿಗಳ ಜೊತೆ ಏಕೆ ಕೈಜೋಡಿಸುತ್ತಿದ್ದರು?


ಇಂಥ ದುರಾಶೆಯ ಎಮ್ಮೆಲ್ಲೆಗಳನ್ನು ಬುಟ್ಟಿಗೆ ಹಾಕಿಕೊಳ್ಳಲೆಂದೇ ಆಣಿಯಾದ ರೆಡ್ಡಿಗಳ ತಾಕತ್ತು, ದರ್ಪ, ದರ್ಪ, ಹಣಬಲ, ಭುಜಬಲದ ಮುಂದೆ ಮುಖ್ಯಮಂತ್ರಿ ಯಡ್ಡಿ ಯಕಶ್ಚಿತ್ತಾಗಿ ಕಾಣುತ್ತಾರೆ. ಒಂದೆಡೆ ಬಾಲಚಂದ್ರ ಜಾರಕಿಹೊಳಿ ದಜನ್ನು ಶಾಸಕರ ಸಮೇತ ಗೋವಾ ಸೇರಿಕೊಂಡರೆ, ಮತ್ತೊಂದೆಡೆ ಸೋಮಶೇಖರ ರೆಡ್ಡಿ-ಆನಂದ್‌ಸಿಂಗ್ ಜಾಲಿಯಮ್ಮು ಹೈದ್ರಾಬಾದಿನ ರೆಸಾರ್ಟನ್ನು ಬಾಡಿಸುತ್ತಿದೆ. ಕೂಡ್ಲಿಗಿಯ ನಾಗೇಂದ್ರ, ಕಂಪ್ಲಿಯ ಸುರೇಶ್ ಬಾಬು, ಹೂವಿನಹಡಗಲಿಯ

ಪ್ರತಿ ಶಾಸಕನಿಗೆ 10 ಕೋಟಿ

ಗಣಿರೆಡ್ಡಿಗಳ ಋಣದಲ್ಲಿಲ್ಲದೇ ಸಣ್ಣಪುಟ್ಟ ಕಾರಣಕ್ಕೆ ಯಡ್ಡಿ ವಿರುದ್ಧ ಮುನಿಸಿಕೊಂಡ ಶಾಸಕರಿದ್ದರಲ್ಲ-ಅಂಥ ಪ್ರತಿಯೊಬ್ಬ ಶಾಸಕನಿಗೆ ರೆಡ್ಡಿಗಳು ಕಟ್ಟುವ ಕಿಮ್ಮತ್ತು ಹತ್ತು ಕೋಟಿ! ದಿನವೊಂದಕ್ಕೆ ಹದಿನೈದು ಕೋಟಿಯಷ್ಟು ಅದಿರು ದೋಚುವ ಗಣಿ ಖದೀಮರಿಗೆ ಒಬ್ಬ ಎಮ್ಮೆಲ್ಲೆಗೆ ಹತ್ತು ಕೋಟಿ ಕೊಡುವುದು ಯಾವ ಲೆಕ್ಕ?




ಆನಂದ್ ಸಿಂಗ್



ಶಂಕರ್ ಪಾಟೀಲ್



ಕಲ್ಪಪ್ಪ ಬಂಡಿ



ಜಗದೀಶ್ ಮೇಟಗುಡ್ಡ

ಚಂದ್ರನಾಯ್ಕ ಅಕ್ಷರಶಃ ರೌಡಿಗಳಂತೆ ರೆಸಾರ್ಟ್ ಸೇರಿಕೊಂಡ ಶಾಸಕರನ್ನು ಸಂಭಾಳಿಸುತ್ತಾರೆ. ಮಗದೊಂದೆಡೆ ಶಿವನಗೌಡ ನಾಯಕ, ತಂಗಡಗಿ, ಅಸ್ನೋಟಿಕರ್ ಕಂಡ ಕಂಡ ಎಮ್ಮೆಲ್ಲೇಗಳಿಗಾಗಿ ಬಲೆ ಬೀಸುತ್ತಿದ್ದರೆ, ರೌಡಿ ಮಂತ್ರಿ ಶ್ರೀರಾಮುಲು ಪ್ರಾಪಗಾಂಡಾ ಕ್ಯಾಂಪೇನಿನಲ್ಲಿ, ಕರುಣಾಕರ ರೆಡ್ಡಿ ಬೆಂಗಳೂರಿನಲ್ಲಿ ಮತ್ತು ಜನಾರ್ದನ ರೆಡ್ಡಿ ಬಳ್ಳಾರಿಯಲ್ಲಿ ಕೂತು ಇಡೀ ವ್ಯವಸ್ಥೆಯನ್ನು ನಿಯಂತ್ರಿಸುತ್ತಾರೆ.

ಅದಕ್ಕೆಂದು ಗಣಿರೆಡ್ಡಿಗಳು ಬಳಸುತ್ತಿರುವ ಹೆಲಿಕಾಪ್ಟರು, ಚಾರ್ಟರ್ಡ್ ಫ್ಲೈಟುಗಳದ್ದೇ ಮತ್ತೊಂದು ಲೋಕ. ಬಳ್ಳಾರಿಯ ಜಿಂದಾಲ್ ಕಂಪೆನಿಯ ಚಾರ್ಟರ್ಡ್ ಫ್ಲೈಟ್ ಒಂದರಲ್ಲಿ ಹೈದರಾಬಾದ್‌ಗೆ ನಲವತ್ತು ನಿಮಿಷದ ಪ್ರಯಾಣವಾದರೆ ಅಂಥ ಒಂದು ಟ್ರಿಪ್ಪಿಗೆ ನಾಲ್ಕು ಲಕ್ಷ ರೂಪಾಯಿಗಳ ರೇಟಿದೆ. ಅದೇ ಜಿಂದಾಲ್ ಫ್ಲೈಟಿನಲ್ಲಿ ಬೆಂಗಳೂರಿಗೆ ಬರಬೇಕೆಂದರೂ ಅದಕ್ಕೆ 4 ಲಕ್ಷ ರೂ.ಗಳನ್ನು ತೆರಬೇಕು. ಹುಬ್ಬಳ್ಳಿಯಿಂದ ಬಳ್ಳಾರಿಯ ಜಿಂದಾಲ್ ಏರ್‌ಪೋರ್ಟಿಗೆ ಬಂದು ಅಲ್ಲಿಂದ ಹೈದ್ರಾಬಾದಿಗೆ ಹೋಗಲು ಕೇವಲ 6 ಲಕ್ಷ ತೆರಬೇಕು!

ಇದು ಚಾರ್ಟರ್ಡ್ ಫ್ಲೈಟುಗಳ ರೇಟಾದರೆ ಹೆಲಿಕಾಪ್ಟರುಗಳದೇ ಮತ್ತೊಂದು ಜಾಲವಿದೆ. ಬೆಳಗಾವಿಯಲ್ಲಿ ಒಂದು, ಹೈದರಾಬಾದಿನಲ್ಲಿ ಎರಡು, ಬಳ್ಳಾರಿಯಲ್ಲಿ ರೆಡ್ಡಿಗಳ ಎರಡು ಮತ್ತು ಆನಂದ್‌ಸಿಂಗ್‌ನ ಮತ್ತೊಂದು, ಜೊತೆಗೆ ಬೆಂಗಳೂರಿನ ಜಕ್ಕೂರು ವಾಯುನೆಲೆಯಲ್ಲಿ ಹದಿನಾರು ಸೀಟುಗಳ ರೆಡ್ಡಿಯ ಬ್ರಾಹ್ಮಿಣಿ ಸ್ಟೀಲ್ಸ್ ಕಂಪೆನಿಯ ಮಗದೊಂದು; ಹೀಗೆ ಬಿಜೆಪಿ ಶಾಸಕರನ್ನು ಹೊತ್ತೊಯ್ದು ಗುಡ್ಡೆ ಹಾಕಲೆಂದೇ ಗಣಿರೆಡ್ಡಿಗಳು ಬಳಸುತ್ತಿರುವ ಒಟ್ಟು ಹೆಲಿಕಾಪ್ಟರುಗಳ ಸಂಖ್ಯೆಯೇ ಏಳು.

ಇಷ್ಟೊಂದು ಹೆಲಿಕಾಪ್ಟರುಗಳನ್ನೇನಾದರೂ ನೆರೆ ಹಾವಳಿಯಲ್ಲಿ ಬಳಸಿದ್ದರೆ ರೆಡ್ಡಿಗಳು ಸಾವಿರಾರು ಜನರ ಪ್ರಾಣ ಕಾಯುತ್ತಿದ್ದರು!


ದಿನವೊಂದಕ್ಕೆ, ಹದಿನೈದು ಕೋಟಿಯ ಗಣಿ ಲೂಟಿಯ ಆದಾಯದ ಮುಂದೆ ಜನರ ಪ್ರಾಣ ಯಾವ ಲೆಕ್ಕ? ಮತ್ತು ಏನು ಲಾಭ? ಚಪ್ರಾಸಿಗೂ ಕೀಳಾಗಿದ್ದ ಶಂಕರಪಾಟೀಲ ಮುನೇನಕೊಪ್ಪನನ್ನು ಸಾಕಿ, ಬೆಳೆಸಿ, ಎಮ್ಮೆಲ್ಲೇ ಮಾಡಿದ ಬಸವರಾಜ ಬೊಮ್ಮಾಯಿಯನ್ನೂ ಧಿಕ್ಕರಿಸಿ ಗಣಿರೆಡ್ಡಿಗಳ ಬುಟ್ಟಿಗೆ ಬಿದ್ದ ನವಲಗುಂದದ ಶಾಸಕನ ಜೊತೆ ಸವದತ್ತಿ ಶಾಸಕ ವಿಶ್ವನಾಥ್ ಮಾಮನಿ ಕೂಡ ಇದ್ದ. ಈ ಮಾಮನಿ ಮಾಜಿ ಶಾಸಕ ಸಿ.ಎಂ. ಮಾಮನಿಯ ಮಗ. ಇವರಿಬ್ಬರನ್ನೂ ಗಂಟೆಗಟ್ಟಲೆ ಕಾಯಿಸಿ ದರ್ಶನ ಕೊಟ್ಟ ಜನಾರ್ದನ ರೆಡ್ಡಿ ಅಡ್ವಾನ್ಸಾಗಿ ತಲಾ ಮೂರು ಕೋಟಿ ಕೊಟ್ಟ ನಂತರವೇ ಹೈದ್ರಾಬಾದಿಗೆಂದು ಜಿಂದಾಲ್ ವಿಮಾನ ಹತ್ತಿಸಿದ್ದು!

ಹೀಗೆ ದುಡ್ಡು ಕೊಡುವ ರೆಡ್ಡಿಗಳು ಸಾಕಷ್ಟು ಕ್ರಿಮಿನಲ್ ತಲೆ ಓಡಿಸಿಯೇ ಕಾಸು ಬಿಚ್ಚಿರುತ್ತಾರೆ. ದುಡ್ಡು ಕೊಡುವಾಗ ಆಯಾ ಶಾಸಕ ತಮ್ಮಿಂದ ದುಡ್ಡು ಪಡೆಯುತ್ತಿರುವ ದೃಶ್ಯದ ವೀಡಿಯೋ ತೆಗೆಯುತ್ತಾರೆ. ಪ್ರತಿ ಕೋಣೆಯಲ್ಲೂ ರಹಸ್ಯ ಕ್ಯಾಮೆರಾಗಳನ್ನು ಜೋಡಿಸಿಬಿಟ್ಟಿದ್ದಾರೆ.


ಯಾರೇ ಶಾಸಕ ರೊಕ್ಕ ತಿಂದೂ ಕೈಕೊಟ್ಟನೆಂದರೆ ಆತನ ಮೊಬೈಲ್ ಸಂಭಾಷಣೆ, ದುಡ್ಡು ಬಾಚಿಕೊಳ್ಳುತ್ತಿರುವ ದೃಶ್ಯಾವಳಿ, ರೆಸಾರ್ಟಿನಲ್ಲಿ ಮಾಡಿದ ಮೋಜು ಇತ್ಯಾದಿಗಳೆಲ್ಲವನ್ನೂ ಚಿತ್ರೀಕರಿಸಿಟ್ಟುಕೊಂಡು ಬ್ಲಾಕ್‌ಮೇಲ್ ಮಾಡುತ್ತಾರೆ. ಇದು ಗೊತ್ತಾಗಿದ್ದೇ ತಡ ಯಲಬುರ್ಗಾದ ಈಶಣ್ಣ ಗುಳಗಣ್ಣವರ್, ಗಂಗಾವತಿಯ ಪರಣ್ಣ ಮುನವಳ್ಳಿ, ಗದಗ್‌ನ ಶ್ರೀಶೈಲಪ್ಪ ಬಿದರೂರು, ರೋಣದ ಕಳಕಪ್ಪ ಬಂಡಿ, ಶಿರಹಟ್ಟಿಯ ರಾಮಣ್ಣ ಲಮಾಣಿಯಂಥ ಶೆಟ್ಟರ್ ಶಿಷ್ಯರು ನೇರವಾಗಿ ದುಡ್ಡಿಸಿಕೊಳ್ಳದೇ ತಮ್ಮ ಛೇಲಾಗಳನ್ನು ಮುಂದೆಬಿಟ್ಟು ಗಂಟು ಹೊಡೆದರು.

ಹಾಗಂತ ರೆಡ್ಡಿಗಳ ಆಮಿಷಕ್ಕೆ, ನರಗುಂದದ ಶಾಸಕ ಸಿ.ಸಿ. ಪಾಟೀಲ್ ಬಲಿಯಾಗಲಿಲ್ಲ, ಹುಬ್ಬಳ್ಳಿಯ ವೀರಭದ್ರಪ್ಪ ಹಾಲರವಿ, ಧಾರವಾಡದ ಸೀಮಾ ಮಸೂತಿ, ಬೈಲಹೊಂಗಲದ ಜಗದೀಶ್ ಮೇಟಗುಡ್ಡ ಮುಂತಾದವರಿಗೂ ರೆಡ್ಡಿಗಳ ಪ್ರಸಾದ ಸಂದಾಯವಾಗಿದೆ. ಬಹುಶಃ ಸೀಮಾ ಮಸೂತಿಯೇನಾದರೂ ಹೈದರಾಬಾದ್ ರೆಸಾರ್ಟ್ ಸೇರಿಕೊಂಡಿದ್ದರೆ ಏನು ಫಜೀತಿಯಾಗುತ್ತೋ ಎಂದು ಮನೆಯಲ್ಲೇ ಇರುವಂತೆ ಶೆಟ್ಟರ್ ಬುದ್ಧಿ ಹೇಳಿದರಂತೆ!

ಹುಚ್ಚುಮುಂಡೆ ಮದುವೇಲಿ ಉಂಡವನೇ ಜಾಣ ಎಂಬಂತೆ ನರ್ಸ್ ಜಯಲಕ್ಷ್ಮಿ ಪೀಡಕ ರೇಣುಕಾಚಾರ್ಯ ಮತ್ತು ಒಂದಾನೊಂದು ಕಾಲಕ್ಕೆ ಕಳ್ಳ ವಿಸ್ಕಿ ಹೊಡೆಯುತ್ತಿದ್ದ ಬೇಳೂರು ಗೋಪಾಲಕೃಷ್ಣನಂಥವರು ರೆಡ್ಡಿಗಳ ಜೊತೆ ಕೈಜೋಡಿಸಿದ್ದಾರೆ.



ಈಶಣ್ಣ ಗುಳಣ್ಣನವರ್



ಸುರೇಶ್ ಬಾಬು



ಸೀಮಾ ಮಸೂತಿ



ಪರಣ್ಣ

ಬಳ್ಳಾರಿ, ರಾಯಚೂರು, ಕೊಪ್ಪಳದ ಬಹುತೇಕ ಬಿಜೆಪಿ ಶಾಸಕರೆಲ್ಲ ರೆಸಾರ್ಟ್ ಸೇರಿಕೊಂಡಿದ್ದಾರೆ. ಸಂಪಂಗಿಯಂಥ ಮಾನಗೆಟ್ಟ ಎಮ್ಮೆಲ್ಲೆಗಳಿಗೆ ಇದೊಂದು ಅವಕಾಶವಷ್ಟೆ. ಆರು ಸಾವಿರ ಕೋಟಿ ಬೇಕಾದರೂ ಸುರಿದು ಯಡಿಯೂರಪ್ಪನ್ನ ಇಳಿಸ್ತೀನಿ ಎಂದು ಹೂಂಕರಿಸುವ ಜನಾರ್ದನ ರೆಡ್ಡಿಗೆ ಇನ್ನೂರೋ ಮುನ್ನೂರೋ ಕೋಟಿ ಬಿಸಾಕಿ ಎಮ್ಮೆಲ್ಲೆಗಳನ್ನು ಖರೀದಿಸುವುದು ಏನು ತಾನೇ ಮಹಾ?

ಪ್ರತಿ ಲಾರಿಗೆ ಯಡ್ಡಿ ವಿಧಿಸಿದ ಸಾವಿರ ರೂಪಾಯಿಯ ಸುಂಕವೆಂದರೆ, ಅದು ರೆಡ್ಡಿಗಳ ಪಾಲಿಗೆ ವರ್ಷವೊಂದಕ್ಕೆ ಐದು ಸಾವಿರ ಕೋಟಿಯ ಲುಕ್ಸಾನು. ನಾವೇ ಲಕ್ಷ ಮನೆ ಕಟ್ಟಿಸಿಕೊಡ್ತೀವಿ, ಹಾಕಿದ ಸುಂಕವನ್ನು ರದ್ದು ಮಾಡಿ ಎಂದು ಯಡ್ಡಿಯನ್ನೇ ಬ್ಲಾಕ್‌ಮೇಲ್ ಮಾಡುತ್ತಿರುವ ಗಣಿ ರೆಡ್ಡಿಗಳ ಲೆಕ್ಕಾಚಾರವೇ ಬೇರೆಯಿದೆ. ಲಕ್ಷ ಮನೆ ಕಟ್ಟಿಸಲು ಹೆಚ್ಚೆಂದರೆ ಐನೂರು ಕೋಟಿ ಸಾಕು. ತಾವೊಂದಿಷ್ಟು ದುಡ್ಡು ಹಾಕಿ ಇತರೇ ಗಣಿ ದೊರೆಗಳಿಂದಲೂ ಒಂದಷ್ಟು ಕಿತ್ತು ಮನೆ ಕಟ್ಟಿಸಿಕೊಟ್ಟರೆ ಇನ್ನೂ ನಾಲ್ಕೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ರೊಕ್ಕ ಮಿಕ್ಕುತ್ತದೆಯಲ್ಲ?

ಅದಕ್ಕೆ ಪ್ರತಿ ಎಮ್ಮೆಲ್ಲೆಗೆ ಕೊಡುವ ಹತ್ತು ಕೋಟಿ ವ್ಯಾಪಾರಕ್ಕೆ ಹಾಕಿದ ಬಂಡವಾಳ ಮಾತ್ರ. ಪ್ರತಿ ಲಾರಿಗೆ ಯಡ್ಡಿ ವಿಧಿಸಿದ ಸಾವಿರ ರೂಪಾಯಿ ಸುಂಕದ ಆದೇಶ ಮರುಗಳಿಗೆಯಲ್ಲೇ ವಾಪಸ್ಸಾಗುತ್ತದೆ. ಯಡ್ಡಿಯ ಸರ್ಕಾರ ಇದ್ದರೆಷ್ಟು, ಬಿದ್ದರೆಷ್ಟು, ರೆಡ್ಡಿಗಳ ತಿಜೋರಿಯಂತೂ ಭದ್ರ!

ಗಣಿ ಮಾಫಿಯಾದ ಕೈಗೊಂಬೆ ಸರ್ಕಾರವೊಂದು ನಾಡಿನ ಭವಿಷ್ಯವನ್ನೇ ಬಲಿಕೊಡುವ ದುರಂತಕ್ಕೆ ಕನ್ನಡಿಗರೇನಿದ್ದರೂ ಮೂಕ ಪ್ರೇಕ್ಷಕರಷ್ಟೆ.

● ರಾ. ಸೋಮನಾಥ್

ನೆಲಮಂಗಲ ಶಾಸಕ ನಾಗರಾಜ್‌ನ ಬಿಳಿಬಟ್ಟೆಗೆ ಮಣ್ಣಿನ ಬಣ್ಣ ಬಂತು!

ರೆಡ್ಡಿಗಳು ಹಂಚುತ್ತಿರುವ ಹಣ ಬಿಜೆಪಿ ಶಾಸಕರನ್ನು ತರಹೇವಾರಿಯಾಗಿ ಆಡಿಸುತ್ತಿದೆ. ಹಾಲಿ ನೆಲಮಂಗಲದ ಬಿಜೆಪಿ ಶಾಸಕ ನಾಗರಾಜನ ಶುದ್ಧ ಬಿಳಿ ಶರ್ಟ್ ಮತ್ತು ಪ್ಯಾಂಟ್ ಮಣ್ಣಿನ ಬಣ್ಣಕ್ಕೆ ತಿರುಗಿದ್ದು ಅಂತಹ ಪ್ರಹಸನಗಳಲ್ಲಿ ಒಂದಾಗಿದೆ.

ಯಡ್ಡಿ ವಿರುದ್ಧ ಬಂಡಾಯಕ್ಕೆ ಜೊತೆಗೂಡುವಂತೆ ರೆಡ್ಡಿಗಳು ಒಡ್ಡಿದ ಆಮಿಷಕ್ಕೆ ಬಲಿಯಾದ ನಾಗರಾಜ ಒಂದೇ ಕಂತಿನಲ್ಲಿ ಸ್ಥಳದಲ್ಲೇ 5 ಕೋಟಿ ರೂಪಾಯಿ ಎಣಿಸಿಕೊಂಡನಂತೆ. ಪ್ರತ್ಯಕ್ಷದರ್ಶಿಗಳು ಹೇಳಿದ ಪ್ರಕಾರ ಆ ದಿನ ಬಂಡಾಯ ನಾಯಕರ ಭೇಟಿಗೆಂದು ಒಳಹೊಕ್ಕಾಗ ನಾಗರಾಜ ಶುದ್ಧ ವೈಟ್ ಅಂಡ್ ವೈಟ್‌ನಲ್ಲಿದ್ದರು. ಆದರೆ ಹಣ ಪಡೆದು ಹೊರಬರುವಷ್ಟರಲ್ಲಿ ಅವರ ಬಿಳಿ ಬಟ್ಟೆ ಪೂರ್ತಿ ಮಣ್ಣಾಗಿತ್ತು



ವಿಚಾರ ಏನೆಂದರೆ ಒಂದೇ ಸಾರಿಗೆ ಒಂದೇ ಕಡೆ ಅನಾಮತ್ತು 5 ಕೋಟಿ ರೂಪಾಯಿಗಳನ್ನು ನೋಡಿದ ನಾಗರಾಜ್ ಒಂದಿಷ್ಟು ಕ್ಷಣ ಫಿಟ್ಸ್ ಆಗಿ ನೆಲಕ್ಕೆ ಬಿದ್ದು ಉರುಳಾಡಿಬಿಟ್ಟರಂತೆ. ಈ ನಾಗರಾಜ್‌ಗೆ ಸ್ವಲ್ಪ ಲೋ ಬಿಪಿ ಇದೆ. ಒಂದೇ ಸಾರಿಗೆ 5 ಕೋಟಿ ರೂಪಾಯಿ ನೋಡಿದ ತಕ್ಷಣ ಸಡನ್ನಾಗಿ ಅವರ ಬಿಪಿ ಜಾಸ್ತಿಯಾಗಿ ಕುಸಿದು ಬಿದ್ದರು ಎಂತಲೂ ಕೆಲವರು ಹೇಳುತ್ತಿದ್ದಾರೆ. ಅಂದಹಾಗೆ ಈ ಉರುಳುಸೇವೆ ನಾಗರಾಜನೂ ಈಗ ಹೊಸದಾಗಿ ಹತ್ತು ಜೊತೆ ಸಫಾರಿ ಹೊಲಿಸಿಕೊಳ್ಳುತ್ತಿದ್ದಾರಂತೆ.

ಯಾಕೆ ಗೊತ್ತಾ?

ಜಗದೀಶ್ ಶೆಟ್ಟರ್ ಸಂಪುಟದಲ್ಲಿ ಮಂತ್ರಿಯಾಗಲು!

ಹಾಗಂತ ರೆಡ್ಡಿಗಳು ಪ್ರಾಮಿಸ್ ಮಾಡಿದ್ದಾರಂತೆ!!

ಷಡ್ಯಂತ್ರದ ಸೂತ್ರಧಾರ RSSನ ಮಂಗೇಶ್ ಭೆಂಡೆ



ಇಡೀ RSSನ ಆತ್ಮವೇ ಬ್ರಾಹ್ಮಣ್ಯಮಯ. ಅದರಲ್ಲೂ ಅನಂತ್‌ಕುಮಾರ್‌ಗೆ ಅನಾದಿಕಾಲದಿಂದಲೂ RSS ಮೇಲೊಂದು ಹಿಡಿತವಿದೆ. ಸದ್ಯ ಕರ್ನಾಟಕದ RSSನ ಸೂತ್ರಧಾರನಂತಿರುವ ಪ್ರಾಂತ ಪ್ರಚಾರಕ ಮಂಗೇಶ್ ಭೆಂಡೇಯೇ ಅನಂತ್‌ಕುಮಾರ್ ಆಜ್ಞಾನುವರ್ತಿ. ಮೂಲತಃ ಗುಲ್ಬರ್ಗದ ಮಂಗೇಶ್ ಭೆಂಡೆ ಒಂದಾನೊಂದು ಕಾಲಕ್ಕೆ ಸೇವಾ ಭಾರತಿಯ ಪೂರ್ಣಾವಧಿ ಕಾರ್ಯಕರ್ತನಾಗಿದ್ದಾತ. ಇಂಥವನನ್ನು ಉತ್ತರ ಕರ್ನಾಟಕದ ಪ್ರಾಂತ ಪ್ರಚಾರಕನನ್ನಾಗಿ ಮಾಡಿ, ಆನಂತರ ಇಡೀ ಕರ್ನಾಟಕ ಪ್ರಾಂತ ಪ್ರಚಾರಕನನ್ನಾಗಿ ನೇಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇ ಅನಂತ್‌ಕುಮಾರ್.

ನೋಡೀ.... ಯಡಿಯೂರಪ್ನೋರೇ, ಪರಿಸ್ಥಿತಿ ನಮ್ಮ ನಿಯಂತ್ರಣವನ್ನು ಮೀರಿ ಹೋಗಿದೆ. ನಮ್ಮ ಕೈಯಲ್ಲಿ ಏನೂ ಮಾಡಲಿಕ್ಕಾಗ್ತಿಲ್ಲ, ಅಯ್ಯಾಮ್ ವೆರೀ ಸಾರೀ....!

ಹಾಗೆಂದು ಕಲ್ಲಡ್ಕ ಪ್ರಭಾಕರ ಭಟ್ಟರು ಕೇಶವಕೃಪದ ಪಡಸಾಲೆಯಲ್ಲಿ ಕುಳಿತು ಮುಖ್ಯಮಂತ್ರಿ ಯಡಿಯೂರಪ್ಪನವರೆದುರು ನಿಟ್ಟುಸಿರಿಡುತ್ತಿದ್ದಂತೆಯೇ ಯಡ್ಡಿ ಮೆತ್ತಗೆ ಬೆವರೊರೆಸಿಕೊಂಡರು. ಇದು ಮೊನ್ನೆ ಅಂದರೆ ನವೆಂಬರ್ 3ರ ರಾತ್ರಿ ಹನ್ನೊಂದು ಗಂಟೆಗೆ ನಡೆದ ಘಟನೆ. ರಾತ್ರಿ ಒಂಬತ್ತೂವರೆಯಿಂದ ಹನ್ನೊಂದರ ತನಕ ಯಡ್ಡಿ ಮತ್ತು ಆರೆಸ್ಸೆಸ್ ಪ್ರಮುಖ ಪ್ರಭಾಕರ ಭಟ್ಟರ ನಡುವೆ ನಡೆದ ಮಾತುಕತೆಯ ಕೊನೆಯ ವಾಕ್ಯ ಇದಾಗಿತ್ತು. ಅಲ್ಲಿಗೆ ಯಡ್ಡಿ ಪಾಲಿಗೆ ಆರೆಸ್ಸೆಸ್ ಬಾಗಿಲು ಮುಚ್ಚಿದೆಯೆಂಬ ಸ್ಪಷ್ಟ ಸೂಚನೆ ಗೋಚರಿಸಿತ್ತು.



ಶ್ರೀಪತಿ



ಸೂರ್ಯನಾರಾಯಣ ರಾವ್

ಏಕಾಂಗಿಯಾಗಿ ಭಾರದ ಹೆಜ್ಜೆಗಳನ್ನಿಡುತ್ತ ಕೇಶವಕೃಪದಿಂದ ಹೊರಬಿದ್ದ ಯಡ್ಡಿ ಇನ್ನೇನು ತಮ್ಮ ಕಾರನ್ನು ಹೊಕ್ಕಬೇಕು; ಅಷ್ಟರಲ್ಲೇ ಮೊಬೈಲು ರಿಂಗಣಿಸಿ ಮತ್ತೊಂದು ಆಘಾತಕಾರಿ ಸುದ್ದಿ ಬಂದಿತ್ತು. ಬೆಂಗಳೂರಿನ ಮಟ್ಟಿಗೆ ಯಾವ ಕಟ್ಟಾ ಮತ್ತು ಅಶೋಕ್‌ರನ್ನು ಯಡ್ಡಿ ತಮ್ಮ ಎಡಗೈ ಮತ್ತು ಬಲಗೈಗಳೆಂದು ಬಲವಾಗಿ ನಂಬಿದ್ದರೋ ಅದೇ ಅಶೋಕ್ ಮತ್ತು ಕಟ್ಟಾ ತಮ್ಮಿಬ್ಬರ ಮೊಬೈಲುಗಳನ್ನು ಸ್ವಿಚ್ ಆಫ್ ಮಾಡಿಕೊಂಡು ದೆಹಲಿ ಸೇರಿಕೊಂಡಾಗಿತ್ತು. ತಾವಿಬ್ಬರೂ ನ್ಯೂಟ್ರಲ್ಲಾಗಿದ್ದು ಬಿಡಲು ಅಶೋಕ್-ಕಟ್ಟಾ ನಿರ್ಧರಿಸಿದ್ದಾರೆಂಬ ಸುದ್ದಿ ಕೇಳಿದ್ದೇ ಯಡ್ಡಿ ಕಾರಲ್ಲಿ ಕುಸಿದು ಕುಳಿತರು.



ನರಹರಿ

ಅದರ ಹಿಂದಿನ ದಿನವೇ ರಾಜ್ಯಪಾಲರು ಗೃಹಸಚಿವ ವಿ.ಎಸ್. ಆಚಾರ್ಯರನ್ನು ಕರೆದು ನಿಮ್ಮ ಕತೆ ಕೇಳಲು ನಾನು ಸಿದ್ಧನಿಲ್ಲ; ಇನ್ನೆರಡು ದಿನದೊಳಗೆ ನಿಮ್ಮ ಸ್ಟೆಂತ್ ಏನು ಅನ್ನೋದನ್ನ ನನಗೆ ಮನದಟ್ಟು ಮಾಡಲೇಬೇಕು ಎಂದು ತಾಕೀತು ಮಾಡಿದ್ದರು.

ಮರುದಿನ ಅಂದರೆ ನವೆಂಬರ್ ಐದರಂದು ಬಿಜೆಪಿ ನಾಯಕಿ ಸುಷ್ಮಾ ಸ್ವರಾಜ್ ಮನೆಯಲ್ಲಿ ತನಗೂ ಜನಾರ್ದನ ರೆಡ್ಡಿಗೂ ಕ್ಲೈಮ್ಯಾಕ್ಸ್‌ನಂತೆ ನಡೆಯುವ ಮಾತುಕತೆಯೊಂದನ್ನು ಬಿಟ್ಟರೆ ಯಡ್ಡಿ ಪಾಲಿನ ಬೇರೆಲ್ಲಾ ಬಾಗಿಲುಗಳೂ ಮುಚ್ಚಿ ಹೋಗಿದ್ದವು.

ಇನ್ನೂ ಹತಾಶೆಯೆಂದರೆ ಸುಷ್ಮಾ ಸ್ವರಾಜ್ ಕರೆದ ನಿರ್ಣಾಯಕ ಭೇಟಿಗೆ ಜನಾರ್ದನ ರೆಡ್ಡಿ ಬಿಲ್‌ಕುಲ್ ಒಪ್ಪೇ ಇರಲಿಲ್ಲ. ಮುಖ್ಯಮಂತ್ರಿ ಬದಲಾಗೋ ತನಕ ನಾನು ಯಡಿಯೂರಪ್ಪನವರ ಮುಖವನ್ನೇ ನೋಡಲ್ಲ ಎಂದು ಗಣಿಧೂರ್ತ ಜನಾರ್ದನ ಹಠಕ್ಕೆ ಬಿದ್ದುಬಿಟ್ಟಿದ್ದ.

ಇಷ್ಟೂ ನವೆಂಬರ್ 3 ರ ಮಂಗಳವಾರದ ನಡುರಾತ್ರಿ ತನಕದ ಬೆಳವಣಿಗೆಗಳಾದರೆ, ಬುಧವಾರ ಅಂದರೆ ನವೆಂಬರ್ 4 ರಂದು ಧಾರವಾಡದಲ್ಲಿ ನಡೆದ ನೆರೆ ಸಂತ್ರಸ್ತರ ಪರಿಹಾರ ಕಾರ್ಯಕ್ರಮದಲ್ಲಿ ಯಡ್ಡಿಯ ವರಸೆಗಳೇ ಬೇರೆಯಾಗಿದ್ದವು. 'ನಾನೇನು ತಪ್ಪು ಮಾಡಿದ್ದೇನೆ ಅಂತ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಿದ್ದಾರೆ? ಶೆಟ್ಟರ್ ಮಂತ್ರಿಯಾಗದೇ ಇರೋದಕ್ಕೆ ನಾನು ಕಾರಣನಲ್ಲ, ಅದು ಹೈಕಮಾಂಡ್ ನಿರ್ಧಾರ. ಇಷ್ಟರಲ್ಲೇ ಹುಬ್ಬಳ್ಳಿಯಲ್ಲಿ ಸಮಾವೇಶ ನಡೆಸಿ ಎಲ್ಲಾ ಸತ್ಯಾಸತ್ಯತೆಯನ್ನೂ ಜನರಿಗೆ ತಿಳಿಸುತ್ತೇನೆ. ಆ ಸಮಾವೇಶಕ್ಕೆ ಎಲ್ಲರಿಗೂ ಆಹ್ವಾನ ಪತ್ರಿಕೆ ಕಳಿಸುತ್ತೇನೆ....!'

ಹೀಗೆ ಯಡ್ಡಿಯ ಬಾಯಿಂದ ಬಂದ ಪ್ರತಿಯೊಂದು ವಾಕ್ಯವೂ ಅವರ ಹತಾಶೆ, ನಿರಾಶೆ, ಭೀತಿಯ ಪ್ರತಿಬಿಂಬವಾಗಿತ್ತು. ಏನೇ ಆದರೂ ಆರೆಸ್ಸೆಸ್ ತನ್ನ ಕೈಬಿಡೋಲ್ಲ ಎಂಬ ಯಡ್ಡಿಯ ನಂಬಿಕೆ ಹುಸಿಯಾಗಿತ್ತು. ಆರೆಸ್ಸೆಸ್ ಓಲೈಸಲೆಂದೇ ಯಡ್ಡಿ ಹೆಣಗಿದ್ದೇನು ಕಮ್ಮಿಯಿತ್ತಾ?


ಆರೆಸ್ಸೆಸ್ ಯಾವ್ಯಾವ ಮಠಮಾನ್ಯಗಳಿಗೆಲ್ಲ ಸರ್ಕಾರಿ ಬೊಕ್ಕಸದ ದುಡ್ಡು ಕೊಡುವಂತೆ ಆದೇಶಿಸಿತ್ತೋ ಯಡ್ಡಿ ಅದನ್ನು ಶಿರಸಾವಹಿಸಿ ಪಾಲಿಸಿದ್ದರು.

● ರಾ. ಸೋಮನಾಥ್

ವಿರೋಧ ಪಕ್ಷಗಳ ಟೀಕೆಯನ್ನೆಲ್ಲ ನುಂಗಿಕೊಂಡರು. ಬನಶಂಕರಿಯಲ್ಲಿ ತಾವೇ ನಿಂತು ಆರೆಸ್ಸೆಸ್‌ಗೆಂದು ಬಿಲ್ಡಿಂಗ್ ಕಟ್ಟಿಸಿಕೊಟ್ಟರು. ನಾಗರಬಾವಿಯಲ್ಲಿ ಎಬಿವಿಪಿಗೆಂದು ಸೈಟು ಕೊಡಿಸಿಕೊಟ್ಟದ್ದೂ ಅಲ್ಲದೇ, ತಾವೇ ದುಡ್ಡು ಸುರಿದು ಕಟ್ಟಡವನ್ನೂ ಕಟ್ಟಿಸಿಕೊಟ್ಟು ತಮ್ಮ ಕೈಯಾರೇ ಉದ್ಘಾಟನೆಯನ್ನೂ ನೆರವೇರಿಸಿಕೊಟ್ಟರು. ಸ್ವತಃ ಅನಂತ್‌ಕುಮಾರ್ ಕೇಂದ್ರ ಮಂತ್ರಿಯಾಗಿದ್ದಾಗಲೂ ಆರೆಸ್ಸೆಸ್‌ಗೆ ಈ ಪಾಟ ನೆರವಾಗಿರಲಿಲ್ಲ. ರಾಷ್ಟ್ರೋತ್ಥಾನ ಸಾಹಿತ್ಯ ಮಾಲಿಕೆಯ ಹದಿಮೂರು ಕೋಟಿಯಷ್ಟು ಬೆಲೆಬಾಳುವ ಪುಸ್ತಕಗಳನ್ನು ಶಾಸಕರ ಅನುದಾನದಿಂದ ಖರೀದಿಸುವಂತೆ ಆದೇಶ ಹೊರಡಿಸಿದ್ದು, ಡಜನ್ನುಗಟ್ಟಲೇ ಆರೆಸ್ಸೆಸ್ ಪ್ರಚಾರಕರಿಗೆ ಪ್ರತಿ ತಿಂಗಳ ಖರ್ಚಿಗೆಂದು ಹತ್ತು ಕೋಟಿಗೂ ಹೆಚ್ಚು ಬ್ಯಾಂಕ್ ಠೇವಣಿಯ ವ್ಯವಸ್ಥೆ ಮಾಡಿದ್ದು. ಅದರ ಬಡ್ಡಿಯಲ್ಲೇ ಪ್ರಚಾರಕರ ತಿಂಗಳ ಸಂಬಳದ ವ್ಯವಸ್ಥೆಯಾಗಿದ್ದು, ನೂರಕ್ಕೂ ಹೆಚ್ಚು ಮಂದಿ ಆರೆಸ್ಸೆಸ್ ಕಾರ್ಯಕರ್ತರನ್ನು ಸರ್ಕಾರಿ ನೌಕರಿಗೆ ಸೇರಿಸಿದ್ದು; ಹೀಗೆ ಆರೆಸ್ಸೆಸ್ ದಾಹ ತಣಿಸಲೆಂದು ಯಡ್ಡಿ ಮಾಡಬಾರದ್ದನ್ನೆಲ್ಲ ಮಾಡುತ್ತಲೇ ಬಂದಿದ್ದರು.

ತನ್ನ ವಿರುದ್ಧ ಬಂಡೆದ್ದ ಗಣಿ ರೆಡ್ಡಿಗಳ ವಿರುದ್ಧ ಆರೆಸ್ಸೆಸ್ ಇನ್ನಿಲ್ಲದಂತೆ ಬೀದಿಗಿಳಿಯುತ್ತದೆಯೆಂದೇ ಯಡ್ಡಿ ನಂಬಿ ಕೂತಿದ್ದರು. ಆರೆಸ್ಸೆಸ್‌ನ ದಕ್ಷಿಣ ಭಾರತ ಕ್ಷೇತ್ರೀಯ ಕಾರ್ಯವಾಹ ಮೈ.ಚ. ಜಯದೇವ ಹೇಳಿಕೇಳಿ ಯಡ್ಡಿಯ ಜಾತಿಬಂಧು. ದಕ್ಷಿಣ ಭಾರತದ ನಾಲ್ಕೂ ರಾಜ್ಯಗಳ ಆರೆಸ್ಸೆಸ್‌ಗೆ ಅವರೇ ಅಧಿಪತಿ. ಅವರೇ ತನ್ನ ಜೇಬಿನಲ್ಲಿರುವಾಗ ಯಾವ ಎಮ್ಮೆಲ್ಲೆಗೆ ತಾನೇ ತನ್ನ ವಿರುದ್ಧ ಸೊಲ್ಲೆತ್ತುವ ಧೈರ್ಯವಿದೆ? ಹಾಗೊಮ್ಮೆ ಯಾರೇ ಎಮ್ಮೆಲ್ಲೇ ಯಡ್ಡಿ ವಿರುದ್ಧ ರೆಡ್ಡಿಗಳ ಜೊತೆ ಕೈಜೋಡಿಸಿದನೆಂದರೆ ಆಯಾ ಕ್ಷೇತ್ರದ ಆರೆಸ್ಸೆಸ್ ಕಾರ್ಯಕರ್ತರೇ ಒದ್ದು ಬುದ್ಧಿ ಕಲ್ಲಿಸುತ್ತಾರೆಂಬ ಯಡ್ಡಿಯ ನಿರೀಕ್ಷೆ ಕೇವಲ ಭ್ರಮೆಯಾಗಿತ್ತು.

ಮೈ.ಚ. ಜಯದೇವ ಲಿಂಗಾಯತರಾದರೇನಂತೆ ಇಡೀ ಆರೆಸ್ಸೆಸ್‌ನ ಆತ್ಮವೇ ಬ್ರಾಹ್ಮಣ್ಯಮಯ. ಅದರಲ್ಲೂ ಅನಂತ್‌ಕುಮಾರ್‌ಗೆ ಅನಾದಿಕಾಲದಿಂದಲೂ ಆರೆಸ್ಸೆಸ್ ಮೇಲೊಂದು ಹಿಡಿತವಿದೆ. ಸದ್ಯ ಕರ್ನಾಟಕದ ಆರೆಸ್ಸೆಸ್‌ನ ಸೂತ್ರಧಾರನಂತಿರುವ ಪ್ರಾಂತ ಪ್ರಚಾರಕ ಮಂಗೇಶ್ ಭೆಂಡೆಯೇ ಅನಂತ್‌ಕುಮಾರ್ ಆಜ್ಞಾನುವರ್ತಿ. ಮೂಲತಃ ಗುಲ್ಬರ್ಗದ ಮಂಗೇಶ್ ಭೆಂಡೆ ಒಂದಾನೊಂದು ಕಾಲಕ್ಕೆ ಸೇವಾ ಭಾರತಿಯ ಪೂರ್ಣಾವಧಿ ಕಾರ್ಯಕರ್ತನಾಗಿದ್ದಾತ. ಇಂಥವನನ್ನು ಉತ್ತರ ಕರ್ನಾಟಕದ ಪ್ರಾಂತ ಪ್ರಚಾರಕನನ್ನಾಗಿ ಮಾಡಿ, ಆನಂತರ ಇಡೀ ಕರ್ನಾಟಕ ಪ್ರಾಂತ ಪ್ರಚಾರಕನನ್ನಾಗಿ ನೇಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದೇ ಅನಂತ್‌ಕುಮಾರ್.



ಮೈ.ಚ.

ಇನ್ನೂ ಅವಿವಾಹಿತನಾಗೇ ಇದ್ದು ಥೇಟು ಪ್ರಮೋದ್ ಮುತಾಲಿಕ್‌ನಂತೆ ಬೆಂಕಿಯುಗುಳುವ ಮಾತುಗಾರನಾದ ಮಂಗೇಶ್ ಭೆಂಡೆ ಇವತ್ತಿಗೂ ಅನಂತ್‌ಕುಮಾರ್ ತಮ್ಮ ನಂದಕುಮಾರ್‌ರ ಹುಬ್ಬಳ್ಳಿ ಮನೆಗೆ ಕಾಯಂ ಅತಿಥಿ! ಹುಬ್ಬಳ್ಳಿಯ ಕೇಶ್ವಾಪುರದ ಆರೆಸ್ಸೆಸ್ ಅಡ್ಡೆಯಾದ ಕೇಶವಕುಂಜದಲ್ಲೇ ಠಿಕಾಣಿ ಹೂಡಿ ಅಲ್ಲಿಂದಲೇ ಸಮಸ್ತವನ್ನೂ ನಿಭಾಯಿಸುವ ಮಂಗೇಶ್ ಭೆಂಡೆಯನ್ನೇ ಮುಂದಿಟ್ಟುಕೊಂಡ ಅನಂತ್‌ಕುಮಾರ್ ಅದಕ್ಕೆ ಭೇಂಡೆಯ ಜೊತೆ ಮಾಡಿದ್ದು ತನ್ನ ನಂಬಿಕಸ್ತ ಬಂಟ ಸಂಸದ ಪ್ರಹ್ಲಾದ್ ಜೋಷಿಯನ್ನು.



ರಾಮಣ್ಣ



ರುಕ್ಮಿಣಿ

ಮೈ.ಚ. ಜಯದೇವ ಒಬ್ಬರನ್ನು ಹೊರತುಪಡಿಸಿದರೆ ಇಡೀ ಆರೆಸ್ಸೆಸ್‌ನ ಬ್ರಾಹ್ಮಣ ಸಂಕುಲವಿಡೀ ಶುರುವಿನಿಂದಲೂ ಯಡ್ಡಿಗೆ ವಿರೋಧವಾಗೇ ಇತ್ತು. ಆರೆಸ್ಸೆಸ್‌ನ ಮತ್ತೊಬ್ಬ ಆಧಾರಸ್ತಂಭದಂತಿರುವ ಸೇವಾ ಭಾರತೀಯ ಸಂಘಟನಾ ಕಾರ್ಯದರ್ಶಿ ಕಲ್ಲಡ್ಕ ಪ್ರಭಾಕರ ಭಟ್ಟ, ಪ್ರಾಂತ ಪ್ರಚಾರಕ ದಾ.ಮ. ರವೀಂದ್ರ, ಸಂಸ್ಕಾರ ಭಾರತೀಯ ರಾಷ್ಟ್ರೀಯ ಸಂಘಟಕ ವ.ರಾ. ಕೃಷ್ಣಮೂರ್ತಿ, ಕ್ಷೇತ್ರ ಸಂಘಚಾಲಕ ರಾಘವೇಂದ್ರ ರಾವ್ ಕುಲಕರ್ಣಿ, ದಕ್ಷಿಣ ಭಾರತ ಪ್ರಚಾರಕ ಪ್ರಮುಖ ನ.ಕೃಷ್ಣಪ್ಪ, ಅಖಿಲ ಭಾರತ ಸಂಪರ್ಕ ಪ್ರಮುಖ ಶ್ರೀಪತಿ ಶಾಸ್ತ್ರಿ ಸದ್ಯ ಬಿಹಾರದ ಕ್ಷೇತ್ರ ಪ್ರಮುಖನಾಗಿರುವ ಸು. ರಾಮಣ್ಣ, ದಕ್ಷಿಣ ಭಾರತ ಕ್ಷೇತ್ರ ಪ್ರಚಾರಕ ಕೃ. ನರಹರಿ, ಆತನ ಅಣ್ಣ ಕೃ. ಸೂರ್ಯನಾರಾಯಣರಾವ್, ಅಕ್ಕ ರಾಷ್ಟ್ರ ಸೇವಿಕಾ ಸಮಿತಿಯ ಮುಖ್ಯಸ್ಥೆ ರುಕ್ಮಿಣಿ ಅಕ್ಕ; ಹೀಗೆ ಆರೆಸ್ಸೆಸ್‌ನ ಅಷ್ಟೂ ಮಂದಿ ವಿಪ್ರ ಚೆಡ್ಡಿಗಳ ಹಿಂಡು ಪರೋಕ್ಷವಾಗಿ ಅನಂತ್‌ಕುಮಾರ್ ಬೆನ್ನಿಗೆ ನಿಂತಿತ್ತು.

ಯಡ್ಡಿ ವಿರುದ್ಧ ಇಂಥದೊಂದು ಚೆಡ್ಡಿ ನೆಟ್‌ವರ್ಕ್‌ನ ನೇತೃತ್ವ ವಹಿಸಿದ್ದೇ ಕರ್ನಾಟಕ ಪ್ರಾಂತ ಪ್ರಚಾರಕ ಮಂಗೇಶ್ ಭೆಂಡೆ. ಅದಕ್ಕೆ ಒತ್ತಾಸೆಯಾಗಿ ನಿಂತವನು ಕಲ್ಲಡ್ಕ ಪ್ರಭಾಕರ ಭಟ್ಟ.

ಶುರುವಿನಿಂದಲೂ ಯಡ್ಡಿ ಪರ ಲಾಬಿಗೆ ಆಧಾರವಾಗಿದ್ದ ಮೈ.ಚ. ಜಯದೇವರನ್ನು ಸದ್ದಿಲ್ಲದೇ ಮೂಲೆಗುಂಪು ಮಾಡುವಲ್ಲಿ ಭೇಂಡೆ ಪಟಾಲಂ ಯಶಸ್ವಿಯಾಗಿದ್ದು ಗೊತ್ತಾಗಿದ್ದೇ ಅನಂತ್‌ಕುಮಾರ್ ಕಾರ್ಯಾಚರಣೆಗಿಳಿದಿದ್ದಾರೆ. ಸದ್ಯ ಮಧ್ಯಪ್ರದೇಶದ ಉಸ್ತುವಾರಿಯಾಗಿರುವ ಅನಂತ್ ಕಾರ್ಯಾಚರಣೆ ಶುರುವಾಗಿದ್ದು ಅಕ್ಟೋಬರ್ 23 ರ ರಾತ್ರಿ. ಅವತ್ತು ರೇಸ್‌ಕೋರ್ಸ್ ರಸ್ತೆಯ ಗಣಿರೆಡ್ಡಿಗಳ ವಾಸಸ್ಥಾನವಾದ ಪಾರಿಜಾತ ಅಪಾರ್ಟ್‌ಮೆಂಟನ್ನ ರಾತ್ರಿ ಹನ್ನೊಂದೂವರೆಗೆ ಹೊಕ್ಕ ಅನಂತ್ ಹೊರಬಂದಿದ್ದು ಬೆಳಿಗ್ಗೆ 4 ರ ಹೊತ್ತಿಗೆ.

ಅಲ್ಲಿ ಕರುಣಾಕರ ರೆಡ್ಡಿ, ಜನಾರ್ದನ ರೆಡ್ಡಿ ಜೊತೆ ಕೂತು ಬೆಳಗಾನ ಮಾತನಾಡಿದ ಅನಂತ್ ಅಲ್ಲಿಂದ ನೇರವಾಗಿ ಜಕ್ಕೂರು ಏರ್‌ಪೋರ್ಟ್‌ಗೆ ಬಂದಿದ್ದೇ ಶಾಮನೂರು ಶಿವಶಂಕರಪ್ಪನವರ ಖಾಸಗಿ ಹೆಲಿಕಾಪ್ಟರಿನಲ್ಲಿ ಹುಬ್ಬಳ್ಳಿಗೆ ಬರುತ್ತಾರೆ. ಅದು ಅಕ್ಟೋಬರ್ 24 ರ ಬೆಳ್ಳಂಬೆಳಿಗ್ಗೆ. ಜಗದೀಶ್ ಶೆಟ್ಟರ್ ಮನೆಯ ಹಿಂಭಾಗದಲ್ಲೇ ಇರುವ ಅನಂತ್ ತಮ್ಮ ನಂದಕುಮಾರ್ ಮನೆಗೆ ಅನಂತ್ ಕಾಲಿಡುತ್ತಿದ್ದಂತೆಯೇ ಅಲ್ಲಿಗೆ ಶೆಟ್ಟರ್ ತಮ್ಮ ಪ್ರದೀಪ್ ಶೆಟ್ಟರ್, ಸಂಸದ ಪ್ರಹ್ಲಾದ್ ಜೋಷಿ ಮತ್ತು ಸ್ವತಃ ಜಗದೀಶ್ ಶೆಟ್ಟರ್ ಬರುತ್ತಾರೆ. ಮೊದಲೇ ನಿರ್ಧಾರವಾದಂತೆ ಅಲ್ಲಿಗೆ ಬಂದ ಮತ್ತೊಬ್ಬ ಆಸಾಮಿ ಗಣಿ ರೆಡ್ಡಿಗಳಿಗೆ ಪರಮಾಪ್ತನಾದ ಹಿರೇಮಠ್ ಎಂಬಾತ.

ಅದೇನು ಚರ್ಚೆಯಾಯಿತೋ, ಯಾವ ಷಡ್ಯಂತ್ರ ಅಣಿಯಾಯಿತೋ, ಮಧ್ಯಾಹ್ನದ ಹೊತ್ತಿಗೆ ಅನಂತ್ ಅಲ್ಲಿಂದ ನೇರವಾಗಿ ಭೂಪಾಲ್ ತಲುಪಿದ್ದಾರೆ. ಶೆಟ್ಟರ್ ರಾಣಿ ಚೆನ್ನಮ್ಮ ಎಕ್ಸ್‌ಪ್ರೆಸ್ಸಿನಲ್ಲಿ ಬೆಂಗಳೂರು ಸೇರಿಕೊಂಡಿದ್ದಾರೆ. ಇದಾದ ನಂತರ ಏಕಾಏಕಿ ಯಾವುದೇ ಕಾರಣವಿಲ್ಲದೆ ಯಡ್ಡಿ ವಿರುದ್ಧ ಜನಾರ್ದನ ರೆಡ್ಡಿಯ ಅಟ್ಯಾಕ್ ಶುರುವಾಗಿದ್ದು ಇದರ ಮರುದಿನದಿಂದ ಅಂದರೆ ಅಕ್ಟೋಬರ್ 25 ರಿಂದ!

ಹಕೀಕತ್ತೆಂದರೆ ಅಕ್ಟೋಬರ್ 24 ರಂದು ಅನಂತ್ ತಮ್ಮ ನಂದಕುಮಾರ್ ಮನೆಯಲ್ಲಿ ನಡೆದ ರಹಸ್ಯ ಕೂಟದಲ್ಲಿ ಆರೆಸ್ಸೆಸ್‌ನ ಕರ್ನಾಟಕ ಪ್ರಾಂತ ಪ್ರಚಾರಕ ಮಂಗೇಶ್ ಭೆಂಡೆ ಕೂಡ ಇ...

ಅಕ್ಟೋಬರ್ 25 ರಿಂದ ಶುರುವಾದ ಗಣಿ ರೆಡ್ಡಿಗಳ ಕ್ಯಾತೆಯ ವಿರುದ್ಧ ಮೈ.ಚ. ಜಯದೇವ...

ಬಾಯಿ ಬಡಕೊಂಡರೂ ಅವರ ಕಲ್ಲು
ಜಾಗಲಿ, ಮಂಗೇಶ್ ಭೆಂಡೆಯಾಗಲಿ, ಕೃಷ್ಣಪ್ಪ
ಗೈ, ರವೀಂದ್ರ, ನರಹರಿ ಯಾರೂ
ಎಯುವುದೇ ಇಲ್ಲ. ಕಾಟಾಚಾರಕ್ಕೆ, ಭಿನ್ನಮತಕ್ಕೆ
ಹಾಕಿದಂತೆ ಭಟ್ಟ, ಭೆಂಡೆ ನಟಿಸುತ್ತಾರಾದರೂ
ರ್ಗಿಕವಾಗಿ ಕಾರ್ಯಚರಣೆಗಿಳಿಯುವುದೇ

ಹೊತ್ತಿಗಾಗಲೇ ಪರಿಸ್ಥಿತಿ ಕೈಮೀರಿ
ತ್ತು. ಐವತ್ತಕ್ಕೂ ಹೆಚ್ಚು ಎಮ್ಮೆಲ್ಲೆಗಳನ್ನು ರೆಡ್ಡಿ
ಗೋವಾ ಮತ್ತು ಹೈದರಾಬಾದಿನಲ್ಲಿಟ್ಟು
ವಿರುದ್ಧ ದಿನಕ್ಕೊಂದು ಬಾಂಬ್ ಸಿಡಿಸುತ್ತಿದ್ದರೆ
ಈ ವಿಷಯದಲ್ಲಿ ತಲೆಯನ್ನೇ ಹಾಕೋಲ್ಲ
ಆರೆಸ್ಸೆಸ್ ಹೇಳಿಕೆ ಕೊಟ್ಟು ಕೈತೊಳೆದು
ತು.

ದೇ ಹೊತ್ತಿಗೆ ಆರೆಸ್ಸೆಸ್ ಪ್ರಮುಖ ಮೈ.ಚ.
ದೇವಗೆ ಆರೆಸ್ಸೆಸ್‌ನ ಎರಡನೇ ಪರಮೋಚ್ಛ
ಕ ಅಖಿಲ ಭಾರತೀಯ ಬೌದ್ಧಿಕ ಪ್ರಮುಖ್
ತ್ರೇಯ ಹೊಸಬಾಳೆಯಿಂದ ಫೋನ್ ಬರುತ್ತದೆ.
ಜೀ ಪರಿಸ್ಥಿತಿ ಕೈಮೀರಿ ಹೋಗಿದೆ.
ಶಿಪ್ ವಿರುದ್ಧ ಶುರುವಾಗಿರೋ ಅತೃಪ್ತಿಯ
ಮದಲ್ಲಿ ದಯವಿಟ್ಟು ನೀವು ತಲೆ ಹಾಕಬೇಡಿ.
ಆರೆಸ್ಸೆಸ್‌ನವ್ರು ಏನೇ ಬೊಬ್ಬೆ ಹಾಕಿದ್ರೂ
ಒಪ್ಪೋ ಸ್ಥಿತಿಯಲ್ಲಿ ಹೈಕಮಾಂಡ್ ಇಲ್ಲ
ತ್ತೆ ಸುಮ್ನೆ ಯಾಕೆ ತಲೆ ಕೆಡಿಸ್ಕೋತೀರಿ?'
ದತ್ತಾತ್ರೇಯ ಹೊಸಬಾಳೆ ಸರಿಯಾದ
ಮನ್ನೇ ಇಟ್ಟಿದ್ದ.
ಕೆಂದರೆ ಮೂಲತಃ ಶಿವಮೊಗ್ಗದ ದತ್ತಾತ್ರೇಯ
ಬಾಳೆಯನ್ನು ರಾಷ್ಟ್ರೀಯ ಆರೆಸ್ಸೆಸ್‌ನ ಎರಡನೇ
ಮೋಚ್ಛ ನಾಯಕನ ಮಟ್ಟಕ್ಕೆ ಬೆಳೆಸಿದ್ದೇ
ತ್‌ಕುಮಾರ್.
ತ್ತ ದತ್ತಾತ್ರೇಯ ಹೊಸಬಾಳೆ ಫೋನ್ ಮಾಡಿ
ದೇವರ ಬಾಯಿ ಮುಚ್ಚಿಸಿದ ಕೆಲಗಳಿಗೆಯಲ್ಲೇ
ಭಟ್ಟ ಮುಖ್ಯಮಂತ್ರಿಗೆ ಫೋನ್ ಮಾಡಿ
ಪಕ್ಕಪಕ್ಕೇ ಕರೆಸಿಕೊಂಡು ಹೇಳಿದ್ದು ಕೇವಲ
ದ್ ಅಸಹಾಯತೆಯನ್ನಷ್ಟೇ ಅಲ್ಲ; ಅದು
ಗೆ ಹೇಳಿದ ಗುಡ್‌ಬೈ ಕೂಡ!
ಎದರೆ ಯಡ್ಡಿಯ ಅದೃಷ್ಟವಿನ್ನೂ ಬಾಕಿಯಿತ್ತಲ್ಲ;
ಬ್ 4 ರ ಬುಧವಾರ ಇದ್ದಕ್ಕಿದ್ದಂತೆ ಮೈ.ಚ.
ದೇವರ ಹಿತೈಷಿ ಗುಂಪೊಂದು ದೆಹಲಿಗೆ
ಗಿ ರಾಷ್ಟ್ರ ಆರೆಸ್ಸೆಸ್‌ನ ಪರಮೋಚ್ಛ ನಾಯಕ
ಹನ್ ಭಾಗವತ್‌ಗೆ ಪರಿಸ್ಥಿತಿಯನ್ನು ಮನದಟ್ಟು
ಕೊಟ್ಟಿದೆ.
ಹಾಗೊಮ್ಮೆ ಮುಖ್ಯಮಂತ್ರಿ
ಯನ್ನೇನಾದರೂ ಬದಲಾಯಿಸಿದ್ದೇ ಆದರೆ
ಡ್ಡಿಗಳು ಪವರ್ ಸೆಂಟರ್ ಆಗಿಬಿಡುತ್ತಾರೆ.
ದೋಚುವುದೊಂದೇ ಗುರಿಬಿಟ್ಟರೆ
ಸ್‌ನ ತತ್ವ, ಸಿದ್ಧಾಂತ ಯಾವುದೂ ಇವರಿಗೆ
ಯಾವುದೇ ರಾಜಕೀಯ
ಪಕ್ಷವೊಂದರ ನೀತಿ ಕೂಡ ಇಲ್ಲದ ಇಂಥ
ಧೂರ್ತರ ಕೈಗೆ ರಾಜ್ಯಾಧಿಕಾರ ಸಿಕ್ಕಿಬಿಟ್ಟರೆ
ಹಾಗೇ ಬಿಜೆಪಿ ಕಾರ್ಯಕರ್ತರಿಗೂ ಆರೆಸ್ಸೆಸ್
ವಕರಿಗೂ ಹಿನ್ನಡೆಯಾಗುತ್ತದೆ. ಪಕ್ಷ ತನ್ನ
ಕಳಕೊಂಡು ಗಣಿರೆಡ್ಡಿಗಳ ತಾಳಕ್ಕೆ ತಕ್ಕಂತೆ
ಬೇಕಾಗುತ್ತದೆ. ಒಂದು ಪಕ್ಷ ಯಡ್ಡಿಯನ್ನು
ಯಿಸಿ ಆ ಜಾಗಕ್ಕೆ ಶೆಟ್ಟರ್, ಅನಂತ್,
ಪ್ಪ ಯಾರೇ ಬಂದರೂ ಅದಿರು ಲೂಟಿಗೆ
ಹಾಕಲು ರೆಡ್ಡಿಗಳು ಬಿಡುವುದಿಲ್ಲ.
ಮಂಥ ಪಕ್ಷವೊಂದು ಅದೆಷ್ಟು ದಿನ ಅಂತ
ಡ್ಡಿಗಳ ಬ್ಲ್ಯಾಕ್‌ಮೇಲ್‌ಗೀಡಾಗಿ ಬದುಕುವುದು?
ದು ಮೈ.ಚ. ಜಯದೇವರ ವಾದ.
ಚಾಲಕ ಮೋಹನ್ ಭಾಗವತ್‌ಗಿದು
ಟ್ಟಾಗುತ್ತಿದ್ದಂತೆ ದತ್ತಾತ್ರೇಯ ಹೊಸಬಾಳೆಯ
ಮುಚ್ಚಿಸಿದ್ದಾರೆ. ತಕ್ಷಣವೇ ರಾಷ್ಟ್ರೀಯ
ಕಾರಿಣಿಯ ಸಭೆ ಕರೆದು ಚರ್ಚಿಸಿದ್ದಾರೆ.
ಸದ ರಾತ್ರಿ ಹೊತ್ತಿಗೆಲ್ಲಾ ಆರೆಸ್ಸೆಸ್ ಯಡ್ಡಿಯ
ನಿರ್ಧಾರಕ್ಕೆ ಬಂದಾಗಿತ್ತು.
ರನ್ನು ಛೂಬಿಟ್ಟು ಕಾಂಪ್ರೋಮೈಸ್
ಆಗಿ ಅಹುತಿಯನ್ನು ತರುವ ಭೆಂಡೆ,
ಸಹಾಯಕ್ಕೆ ಕೊನೆಗೂ
ಯಡ್ಡಿ ಅಷ್ಟಾದ
ನಡೆ.
ಮೂರೋ ಆರೋ
ಮತ್ತೊಂದು ಬಾಳಿಗೆ ಆಸೆಯಾಗುತ್ತಿದೆ.
ಕೂಡ
ಅದು ಆರೆಸ್ಸೆಸ್‌ನ

ಯಡ್ಡಿ ಏಕಾಂಗಿ

ಕೇವಲ ಮೂರು ತಿಂಗಳ ಹಿಂದೆ ಲೋಕಸಭೆಗೆ ಕರ್ನಾಟಕದಿಂದ 17 ಸಂಸದರನ್ನು ಗೆಲ್ಲಿಸಿ 'ಮೋದಿಗಿಂತಲೂ ಗಟ್ಟಿ' ಎಂಬ ಹೆಗ್ಗಳಿಕೆಗೆ ರಾಷ್ಟ್ರಮಟ್ಟದಲ್ಲೇ ಗೌರವ ಪಡೆದ ಮುಖ್ಯಮಂತ್ರಿ ಯಡಿಯೂರಪ್ಪ ಈಗ ದುರಂತ ನಾಯಕನ ತರಹ ಕಾಣಿಸುತ್ತಿದ್ದಾರೆ. ಸದ್ಯದ ಭಿನ್ನಮತೀಯ ಚಟುವಟಿಕೆಗಳನ್ನು ಕಳೆದ ಎರಡು ವಾರಗಳಿಂದ ಯಡಿಯೂರಪ್ಪ 'ಏಕಾಂಗಿ'ಯಾಗಿ ಎದುರಿಸುತ್ತಿರುವುದನ್ನು ನೋಡಿದರೆ ಅವರ ಬೆನ್ನಿಗಿದ್ದ ಹಿಂಬಾಲಕರೆಲ್ಲ ಈಗಾಗಲೇ ಬೇಲಿ ಹಾರಿದ್ದಾರೆ ಎಂದು ಸ್ಪಷ್ಟವಾಗುತ್ತದೆ.

ಲೋಕಸಭೆಯ ಚುನಾವಣಾ ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಯಡ್ಡಿ ಇನ್ನು ಮುಂದೆ ಪ್ರಶ್ನಾತೀತ, ಟೀಕಾತೀತ ರಾಜ್ಯ ನಾಯಕ ಎಂದು ಅವರ ಶಿಷ್ಯಂದಿರು ಡಂಗುರ ಬಾರಿಸಿದ್ದರು. ಅದಕ್ಕೆ ಮುಖ್ಯ ಕಾರಣ ಇಡೀ ದೇಶದಲ್ಲೇ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಬಿಜೆಪಿ ಸಂಸದರು ಕರ್ನಾಟಕದಿಂದ ಆಯ್ಕೆಯಾದದ್ದು.

ಸ್ವಯಂಕೃತ ಅಪರಾಧ

ತಾನೊಬ್ಬ ರಾಷ್ಟ್ರಮಟ್ಟದ ನಾಯಕ ಎಂಬ ಭ್ರಮೆ, ಅಹಂಕಾರ ಮತ್ತು ಭ್ರಮೆಯಲ್ಲಿ ಓಡಾಡಲಾರಂಭಿಸಿದ ಯಡ್ಡಿ ಒಂದೊಂದೇ ಸ್ವಯಂಕೃತ ಅಪರಾಧಗಳನ್ನು ಮಾಡುತ್ತಾ ಹೋಗಲಾರಂಭಿಸಿದ್ದೇ ಇಂದಿನ ಅವರ ಈ ದುಸ್ಥಿತಿಗೆ ಮುಖ್ಯ ಕಾರಣ.

ಕಳೆದ ನಲ್ವತ್ತು ವರ್ಷಗಳಿಂದ ರಾತ್ರಿ-ಹಗಲು ಪಕ್ಷದ ಸಂಘಟನೆಯಲ್ಲಿ ತನ್ನನ್ನು ತಾನು ಸಕ್ರಿಯವಾಗಿ ತೊಡಗಿಸಿಕೊಂಡು ಪಕ್ಷವನ್ನು ಅಧಿಕಾರಕ್ಕೆ ತಂದ ಯಡ್ಡಿಗೆ ಈಗ ಕೇವಲ ಒಂದೂವರೆ ವರ್ಷಗಳ ಕಾಲ ಅಧಿಕಾರವನ್ನು ಅನುಭವಿಸಿ ತಮ್ಮ ಅವಧಿಯನ್ನು ಸಂಪೂರ್ಣಗೊಳಿಸುವ ಮುನ್ನವೇ ಆ ಪಕ್ಷವನ್ನು ಬಳ್ಳಾರಿ ಗಣಿಧಣಿಗಳ ಮಡಿಲಿಗೆ ಹಾಕುವಂತಹ ಅನಿವಾರ್ಯ ಪರಿಸ್ಥಿತಿ ಒದಗಿಬಂದಿದೆ. ಇದನ್ನು ದುರಂತವಲ್ಲದೇ ಇನ್ನೇನು ಹೇಳಲು ಸಾಧ್ಯ?

ನೆಲೆಯಿಲ್ಲದ ಯಡ್ಡಿ

ರಾಜ್ಯ ರಾಜಕೀಯದಲ್ಲಿ ನಡೆಯುತ್ತಿರುವ ಭಿನ್ನಮತೀಯ ಚಟುವಟಿಕೆಗಳತ್ತ ಒಮ್ಮೆ ಕಣ್ಣು ಹಾಯಿಸಿದರೆ ಯಡ್ಡಿಗೆ ಎಲ್ಲೂ ಹೂವಿನ ಹಾದಿ ಕಾಣಿಸುತ್ತಿಲ್ಲ. ಬಳ್ಳಾರಿಯ ಸುತ್ತಮುತ್ತ ಇರುವ ನಾಲ್ಕು ಜಿಲ್ಲೆಗಳಲ್ಲಿ ರೆಡ್ಡಿ ಸಹೋದರರದ್ದೇ ರಾಜ್ಯಭಾರ. ಇತ್ತ ಸ್ವಜಾತಿ ಲಿಂಗಾಯತ ಶಾಸಕರೇ ತುಂಬಿರುವ ಉತ್ತರ ಕರ್ನಾಟಕದಲ್ಲೂ ಯಡ್ಡಿ ಬದಲಿಗೆ ಜಗದೀಶ್ ಶೆಟ್ಟರೇ ತಮ್ಮ ನಾಯಕ ಎಂಬ ಕೂಗು ಕೇಳಿಬರುತ್ತಿದೆ. ಬೆಂಗಳೂರಿನ ಶಾಸಕರೆಲ್ಲ ಆರಂಭದಿಂದಲೂ ಅನಂತಕುಮಾರ್ ಜಿಂದಾಬಾದ್ ಎಂದು ಸಾರಿದವರೇ ಆಗಿದ್ದಾರೆ. ತನ್ನ ಸ್ವಂತ ಊರಾದ ಶಿವಮೊಗ್ಗಕ್ಕೆ ಕಾಲಿಟ್ಟರೆ ಅಲ್ಲೂ ಈಶ್ವರಪ್ಪನ ಹಿಂಬಾಲಕರು ಯಡ್ಡಿ ವಿರುದ್ಧ ತೆರೆಮರೆಯಲ್ಲಿ ಕತ್ತಿ ಮಸೆಯುತ್ತಿದ್ದಾರೆ. ಮೈಸೂರಿನಲ್ಲಂತೂ ಯಡ್ಡಿಯ ಆಪ್ತೆ ಶೋಭಾ ಕರಂದ್ಲಾಜೆಯಿಂದಾಗಿ ಯಡ್ಡಿ ವಿರುದ್ಧ ಹಲ್ಲುಮಸೆಯುವವರೇ ಇದ್ದಾರೆ. ಇನ್ನು ಕರಾವಳಿ ಪ್ರದೇಶದಲ್ಲಿ ಯಡ್ಡಿಗಿಂತಲೂ ಚಡ್ಡಿ ಆರೆಸ್ಸೆಸ್ಸೇ ಮುಖ್ಯ. ಹೀಗೆ ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಭಿನ್ನಮತೀಯ ಶಾಸಕರು ಯಡ್ಡಿ ಮೇಲೆ ಗದಾಪ್ರಹಾರವನ್ನು ಮಾಡುತ್ತಲೇ ಇದ್ದಾರೆ. ಬಹುಶಃ ಕರ್ನಾಟಕದ ಇತಿಹಾಸದಲ್ಲೇ ಯಾವೊಬ್ಬ ಮುಖ್ಯಮಂತ್ರಿಯೂ ಇಷ್ಟೊಂದು ಭಿನ್ನಮತವನ್ನು ಎದುರಿಸಿದ್ದ ಉದಾಹರಣೆ ಇಲ್ಲ.

ಎಲ್ಲಿದ್ದಾರೆ ಹಿಂಬಾಲಕರು?

ಭಿನ್ನಮತೀಯ ಚಟುವಟಿಕೆ ಆರಂಭವಾದ ನಂತರ ಯಡ್ಡಿ ಪರವಾಗಿ ಗಟ್ಟಿಯಾಗಿ ನಿಂತ ಒಂದೇ ಒಂದು ಯಂಗ್‌ಟರ್ಕ್ ಶಾಸಕರು ಕಾಣಿಸುವುದಿಲ್ಲ. ಹಿಂದೆ ರಾಮಕೃಷ್ಣ ಹೆಗ್ಗಡೆ ರಾಜೀನಾಮೆಯ ನಾಟಕ ಮಾಡಿದಾಗ ಮಹಿಳಾ ಶಾಸಕಿಯರೂ ಸೇರಿದಂತೆ ಶಾಸಕರೆಲ್ಲ ಹೆಗಡೆಯ ಪಾದತಲದಲ್ಲಿ ಕುಳಿತು ಗೋಳೋ ಎಂದು ಅತ್ತಿದ್ದರು. ಅಂತಹ ಒಂದೇ ಒಂದು ದೃಶ್ಯವನ್ನು ಪುನರ್‌ಸೃಷ್ಟಿಸಲು ಯಡ್ಡಿಯಿಂದ ಸಾಧ್ಯವಾಗಿಲ್ಲ ಎಂದರೆ, ಅದರರ್ಥ ಇಂದು ಯಡ್ಡಿ ಏಕಾಂಗಿಯಾಗಿದ್ದಾರೆ.

ಕುಮಾರಣ್ಣನೇ ವಾಸಿ!

ಅಧಿಕಾರದಲ್ಲಿರುವ ಮುಖ್ಯಮಂತ್ರಿ ತಮ್ಮ ಸ್ಥಾನವನ್ನುಳಿಸಿಕೊಳ್ಳಲು ಕೆಲವು ಕಸರತ್ತು ಮತ್ತು ಗಿಮಿಕ್‌ಗಳನ್ನು ಮಾಡಬೇಕಾಗುತ್ತದೆ. ಆದರೆ ಶಾಸಕರತ್ತ ಸಿಡುಕು ಮುಖದಿಂದಲೇ ನೋಡುತ್ತಿದ್ದ, ಮನೆಗೆ ಬಂದ ಶಾಸಕರನ್ನು ಅವರ ಹಿಂಬಾಲಕರ ಸಮ್ಮುಖದಲ್ಲೇ ಬಾಯಿಗೆ ಬಂದಂತೆ ಬಯ್ಯುತ್ತಿದ್ದ ಯಡ್ಡಿಯ ಕಾರ್ಯಶೈಲಿಯೇ ಇಂದು ಶಾಸಕರು ಅವರ ವಿರುದ್ಧ ತಿರುಗಿ ಬೀಳಲು ಮುಖ್ಯ ಕಾರಣ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಅವರ ಪಕ್ಷದ ಶಾಸಕರು ಮಾತ್ರವಲ್ಲ ಬಿಜೆಪಿಯ ಶಾಸಕರೂ ಕೂಡಾ ಕುಮಾರಣ್ಣನ ಹಿಂದೆಮುಂದೆ ಅವರ ಅಭಿಮಾನಿಗಳಂತೆ ತಿರುಗಾಡುತ್ತಿದ್ದರು. ಕುಮಾರಣ್ಣ ಕೂಡಾ ಪ್ರತಿಯೊಬ್ಬ ಶಾಸಕನ ಮೇಲೆ ಕೈಹಾಕುತ್ತಾ ಒಬ್ಬ ಗೆಳೆಯನ ಜತೆ ವರ್ತಿಸಿದಂತೆ ಸಹಜವಾಗಿ ಇರುತ್ತಿದ್ದರು. ಆದರೆ ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಶಾಸಕರನ್ನು ಸಂಪೂರ್ಣವಾಗಿ ದೂರವಿಟ್ಟು ಮುಖ್ಯ ಕಾರ್ಯದರ್ಶಿ ಬಳಿಗಾರ್ ಮುಖಾಂತರ ರಾಜ್ಯಭಾರ ನಡೆಸಲಾರಂಭಿಸಿದರು.

ವೀಕ್ ಹೈಕಮಾಂಡ್

ಈಗ ಯಡ್ಡಿ ಮತ್ತು ರೆಡ್ಡಿ ಬಣಗಳಲ್ಲಿರುವ ಶಾಸಕರ ಸಂಖ್ಯಾಬಲವನ್ನು ನೋಡಿದರೆ ಖಂಡಿತವಾಗಿಯೂ ಯಡಿಯೂರಪ್ಪ ಶಾಸಕರ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ. ಲೋಕಸಭಾ ಚುನಾವಣೆಯ ನಂತರ ಹೈಕಮಾಂಡನ್ನು ಕೂಡಾ ಯಡ್ಡಿ ನಿರ್ಲಕ್ಷಿಸಿದ್ದರಿಂದ ದೆಹಲಿ ದೊರೆಗಳಿಗೂ ಈ ಯಡ್ಡಿ ಮೇಲೆ ಸ್ವಲ್ಪ ಸಿಟ್ಟಿದೆ. ಹೀಗಾಗಿ ಯಡ್ಡಿಯ ಅಹಂಕಾರವನ್ನು ಕತ್ತರಿಸಲು ಇದೇ ಸೂಕ್ತ ಸಮಯ ಎಂದು ಅವರೂ ಭಾವಿಸಿದ್ದಾರೆ. ಆದರೂ ಮೊದಲೇ ಒಡೆದ ಮನೆಯಂತಾಗಿರುವ ಬಿಜೆಪಿ ಪಕ್ಷದ ಇಮೇಜ್ ಇನ್ನಷ್ಟು ಕೆಡುತ್ತದೆಯೆಂಬ ಏಕೈಕ ಕಾರಣಕ್ಕಾಗಿ ಯಡ್ಡಿಯನ್ನು ಮುಖ್ಯಮಂತ್ರಿಯನ್ನಾಗಿ ಮುಂದುವರೆಸಲು ಹೈಕಮಾಂಡ್ ಪ್ರಯತ್ನಿಸುತ್ತಿದೆ. ಇದು ಖಂಡಿತವಾಗಿಯೂ ಯಡ್ಡಿ ಮೇಲಿನ ಪ್ರೀತಿಗಾಗಿ ಅಲ್ಲ; ತಾವಿನ್ನೂ ರಾಜ್ಯ ಬಿಜೆಪಿ ಘಟಕಗಳ ಮೇಲೆ ಹಿಡಿತವನ್ನು ಸಾಧಿಸಿದ್ದೇವೆ ಎಂದು ಹೊರಜಗತ್ತಿಗೆ ತೋರಿಸಲು ದೆಹಲಿ ನಾಯಕರು ಒದ್ದಾಡುತ್ತಿದ್ದಾರೆ.

ವೆಂಕಯ್ಯನಾಯ್ಡು ಮೌನಿ

ಈ ಹಿಂದೆ ಕರ್ನಾಟಕದ ಬಿಜೆಪಿ ವಲಯದಲ್ಲಿ ಏನೇ ಭಿನ್ನಮತ ಉದ್ಭವಿಸಿದಾಗ ದೆಹಲಿಯಿಂದ ಕೂಡಲೇ ಹಾರಿಬರುತ್ತಿದ್ದ ರಾಷ್ಟ್ರೀಯ ನಾಯಕರೆಂದರೆ ವೆಂಕಯ್ಯ ನಾಯ್ಡು. ಆದರೆ ಈ ಬಾರಿ ಬಂಡಾಯ ತಾರಕಕ್ಕೇರಿದರೂ ಇನ್ನೂ ಒಂದೇ ಒಂದು ಸಾರಿ ವೆಂಕಯ್ಯನಾಯ್ಡು ಬೆಂಗಳೂರಿಗೆ ಕಾಲಿಟ್ಟಿಲ್ಲ. ವೆಂಕಯ್ಯನಾಯ್ಡು ಪ್ರದರ್ಶಿಸಿರುವ ದಿವ್ಯ ಮೌನ ಮತ್ತು ನಿರ್ಲಕ್ಷ್ಯ ಕೂಡಾ ತುಂಬಾ ಸಂಶಯಕ್ಕೆ ಎಡೆಮಾಡಿಕೊಡುತ್ತಿದೆ.

ಹೀಗೆ ಯಡಿಯೂರಪ್ಪ ದಿಲ್ಲಿ ಮತ್ತು ಗಲ್ಲಿಯಲ್ಲಿ ಸ್ನೇಹಿತರಿಲ್ಲದೆ ಒಬ್ಬಂಟಿಗನಾಗಿದ್ದಾರೆ. ಕಳೆದ ಎರಡು ವಾರಗಳಲ್ಲಿ ಯಾವುದೇ ಸಚಿವ ಅಥವಾ ಶಾಸಕ ಬಹಿರಂಗವಾಗಿ 'ಯಡಿಯೂರಪ್ಪನವರೇ ನಮ್ಮ ಸರ್ವೋಚ್ಛ ನಾಯಕ' ಎಂದು ಘೋಷಿಸುವ ಧೈರ್ಯವನ್ನು ತೋರಿಸಿಲ್ಲ. ಅದರರ್ಥ ಬಹುತೇಕ ಎಲ್ಲ ಶಾಸಕರು ಪರಿಸ್ಥಿತಿಯನ್ನು ಅವಲೋಕಿಸುತ್ತಾ ಯಡಿಯೂರಪ್ಪ ದಿನದಿಂದ ದಿನಕ್ಕೆ ದುರ್ಬಲರಾಗುತ್ತಿದ್ದಾರೆ ಎಂಬ ಸತ್ಯವನ್ನು ಅರಿತು ಸುಮ್ಮನಿರುವುದೇ ವಾಸಿ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಜಾತಿಬೆಂಬಲವೂ ಇಲ್ಲ

ಈಗ ಯಡಿಯೂರಪ್ಪನವರ ಪರಿಸ್ಥಿತಿ ಹೇಗಿದೆಯೆಂದರೆ ಒಂದೆಡೆ ಅಸೆಂಬ್ಲಿ ಚುನಾವಣೆಯಲ್ಲಿ ಕೋಟಿ ಕೋಟಿ ಹಣವನ್ನು ಸುರಿದ ರೆಡ್ಡಿ ಸಹೋದರರು ಭಿನ್ನಮತದ ಅಗ್ರಗಣ್ಯ ನಾಯಕರಾಗಿದ್ದಾರೆ. ಮತ್ತೊಂದೆಡೆ 'ನಾವು ತಟಸ್ಥರು' ಎಂದು ಹೇಳಿರುವ ಈಶ್ವರಪ್ಪ, ಆರ್. ಅಶೋಕ್, ಸಿ.ಟಿ.ರವಿ ಮೊದಲಾದ ಮೂರು ಅಸ್ತ್ರಗಳು ಕೂಡಾ ಯಡ್ಡಿ ವಿರುದ್ಧ ದೆಹಲಿ ದೊರೆಗಳಿಗೆ ದೂರು ನೀಡಿದ್ದಾರೆ. ಲಿಂಗಾಯತ ಶಾಸಕರ ಬೆಂಬಲವೊಂದಿದ್ದರೆ ಸಾಕು ಎಂದು ತಿಳಿದುಕೊಂಡಿದ್ದ ಯಡ್ಡಿಗೆ ಇಲ್ಲೂ ಶಾಕ್ ಆಗಿದೆ. ಯಡ್ಡಿ ವಿಸಿದ್ದರೂ ಮುಂದ್ಯ ಕಡೆಯ ಲಿಂಗಾಯತರು. ತಮಗೆ ಉತ್ತರ ಕರ್ನಾಟಕದ ಜಗದೀಶ್ ಶೆಟ್ಟರೇ ನಾಯಕರು ಎಂದು ಅಲ್ಲಿಯ ಲಿಂಗಾಯತ ಶಾಸಕರು ಘೋಷಿಸಿದ್ದಾರೆ. ಮತ್ತೊಂದೆಡೆ ಯಡ್ಡಿಯ ಸಾಂಪ್ರದಾಯಿಕ ವೈರಿ ಅನಂತಕುಮಾರ್ ತೆರೆಮರೆಯಲ್ಲಿ ಯಡ್ಡಿ ಪತನಕ್ಕಾಗಿ ಹೊಂಚು ಹಾಕುತ್ತಾ ಕುಳಿತಿದ್ದಾರೆ. ಹೀಗಾಗಿ ಯಡ್ಡಿಗೀಗ ಹಣಬಲವಿಲ್ಲ, ಸಂಘಪರಿವಾರದ ಮತ್ತು ಸ್ವಜಾತಿ ಶಾಸಕರ ಬೆಂಬಲವೂ ಇಲ್ಲ.

ಯಡ್ಡಿಯ ಕೊನೆ ಅಧ್ಯಾಯ?

ಯಡ್ಡಿಯನ್ನು ಮುಖ್ಯಮಂತ್ರಿಗಾದಿಯಿಂದ ಕೆಳಗಿಳಿಸಿದರೆ ಎಲ್ಲಿ ಪುನರ್ವಸತಿ ಕಲ್ಪಿಸಿಕೊಡಬೇಕೆಂಬುದು ಹೈಕಮಾಂಡ್ ಎದುರಿಗಿರುವ ಸದ್ಯದ ಸಮಸ್ಯೆ. ಪಕ್ಷ ಕೇಂದ್ರದಲ್ಲಿ ಅಧಿಕಾರ ಹೊಂದಿದ್ದರೆ ಕೇಂದ್ರ ಮಂತ್ರಿ ಸ್ಥಾನವೋ ಅಥವಾ ಯಾವುದಾದರೊಂದು ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ಮಾಡಿ ಯಡ್ಡಿಯನ್ನು ಸಂತೈಸಬಹುದಾಗಿತ್ತು. ಆದರೆ ಸದ್ಯಕ್ಕೆ ಅಂತಹ ಅವಕಾಶವಿಲ್ಲದಿರುವುದರಿಂದ ದೆಹಲಿ ದೊರೆಗಳ ಬತ್ತಳಿಕೆಯಲ್ಲಿ ಯಾವುದೇ ರಾಜಿ ಸೂತ್ರ ಇಲ್ಲದಿರುವುದರಿಂದ ಈ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವಲ್ಲಿ ವಿಳಂಬವಾಗುತ್ತಿದೆ.



ಒಂದುವೇಳೆ ಮುಖ್ಯಮಂತ್ರಿಗಾದಿಯಿಂದ ಯಡ್ಡಿಯನ್ನು ಇಳಿಸಿ ಅವರಿಗೆ ಪರ್ಯಾಯ ಜವಾಬ್ದಾರಿಯನ್ನು ನೀಡದಿದ್ದರೆ, ಕಳೆದ ನಲ್ವತ್ತು ವರ್ಷಗಳಿಂದ ಬಿಜೆಪಿಗೆ ದುಡಿದ ಯಡ್ಡಿಗೆ ಮುಖ್ಯಮಂತ್ರಿ ಸ್ಥಾನವೇ ಅವರ ರಾಜಕೀಯ ಜೀವನದ ಕೊನೆಯ ಅಧ್ಯಾಯವಾಗಲಿದೆ. ಅಂತಹ ದುಸ್ಥಿತಿಗೆ ಯಡ್ಡಿಯನ್ನು ತಳ್ಳಲು ದೆಹಲಿ ನಾಯಕರು ತಯಾರಿಲ್ಲದ ಏಕೈಕ ಕಾರಣಕ್ಕಾಗಿ 'ಯಡ್ಡಿಯೇ ಮುಂದುವರೆಯಲಿ' ಎಂದು ಹೇಳುತ್ತಿದ್ದಾರೆ. ಆದರೆ ಹಣದ ಮದದಿಂದ ಕೊಬ್ಬಿರುವ ಬಳ್ಳಾರಿ ಗಣಿದಣಿಗಳು ಯಡ್ಡಿ ಬಿಟ್ಟು ಬೇರೆ ಯಾರು ಬೇಕಾದರೂ ಮುಖ್ಯಮಂತ್ರಿಯಾಗಲಿ ಎಂದು ಹಠ ಹಿಡಿದಿದ್ದಾರೆ. ಈ ಎಲ್ಲಾ ಗಲಾಟೆ ಗದ್ದಲದ ನಡುವೆ ಮುಖ್ಯಮಂತ್ರಿ ಸ್ಥಾನಕ್ಕೆ ಜಗದೀಶ್ ಶೆಟ್ಟರ್, ಅನಂತಕುಮಾರ್ ಮೊದಲಾದವರ ಹೆಸರು ಕೇಳಿಬರುತ್ತಿದ್ದರೂ ಇವರಿಬ್ಬರನ್ನೂ ಹೊರತುಪಡಿಸಿ ಎರಡೂ ಬಣಗಳಿಗೂ, ಸಂಘಪರಿವಾರಕ್ಕೂ ಇಷ್ಟವಾಗುವ ಒಬ್ಬ ನಾಯಕನನ್ನು ಮುಖ್ಯಮಂತ್ರಿ ಮಾಡಿದರೂ ಆಶ್ಚರ್ಯವಿಲ್ಲ.


ಈ ಎಲ್ಲಾ ರಾಜಕೀಯ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡಿ ಕೊನೆಗೂ ಮುಖ್ಯಮಂತ್ರಿ ಯಡಿಯೂರಪ್ಪನವರೇ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರೂ ಆಶ್ಚರ್ಯವೇನೂ ಇಲ್ಲ. ಹಾಗೇನಾದರೂ ಆದಲ್ಲಿ ಅವರು ಈ ಹಿಂದಿನಂತೆ ಪ್ರಶ್ನಾತೀತ, ಟೀಕಾತೀತ ನಾಯಕನಾಗಿ ಕಾಣಿಸುವುದಿಲ್ಲ. ಅದರ ಬದಲಿಗೆ ನಾಮಕಾವಸ್ತೆ ಮುಖ್ಯಮಂತ್ರಿಯಾಗಿರುತ್ತಾರೆ. ಆಗ ಕರ್ನಾಟಕದ ಜನ ರಾಜ್ಯ ರಾಜಕೀಯದ ಇತಿಹಾಸದಲ್ಲೇ ಅತ್ಯಂತ ದುರ್ಬಲವಾದ ಮುಖ್ಯಮಂತ್ರಿಯನ್ನು ಕಂಡಂತಾಗುತ್ತದೆ.


● ಸದಾಶಿವ ಶೆಣೈ

ಯಡ್ಡಿ ಕೊರಳಿಗೆ ಶೋಭಾ ಉರುಳು...

ಮುಖ್ಯಮಂತ್ರಿ ಯಡಿಯೂರಪ್ಪ ಪ್ರಾಯಶಃ ತಮ್ಮ ಜೀವನದಲ್ಲಿ ಹಿಂದೆಂದೂ ಅನುಭವಿಸಿರದಿದ್ದಂಥ ಪ್ರಾಣಸಂಕಟವನ್ನೀಗ ಎದುರಿಸುತ್ತಿದ್ದಾರೆ. ಗಣಿ ರೆಡ್ಡಿಗಳು ಅಲ್ಲಾಡಿಸುತ್ತಿರುವ ಭರಕ್ಕೆ ಯಡ್ಡಿಯ ಕುರ್ಚಿಯ ಕಾಲುಗಳು ಮುರಿದುಬೀಳುವುದು ಹೆಚ್ಚೂ ಕಡಿಮೆ ನಿಚ್ಚಳವಾಗಿರುವ ವಿಚಾರ. ಕುರ್ಚಿಯಿಂದ ತಾನೇ ಸ್ವಇಚ್ಛೆಯಿಂದ ಕೆಳಗೆ ಇಳಿಯಬೇಕೋ ಅಥವಾ ಬಿದ್ದು ಗಾಯಮಾಡಿಕೊಳ್ಳಬೇಕೋ ಎಂಬುದಷ್ಟೇ ಅವರ ಮುಂದಿರುವ ಎರಡು ಆಯ್ಕೆಗಳು. ಎರಡರಲ್ಲಿ ಯಾವುದನ್ನು ಆಯ್ದುಕೊಂಡರೂ ಅವರ ರಾಜಕೀಯ ಜೀವನ ದುರಂತಮಯವಾಗಿ ಅಂತ್ಯಗೊಳ್ಳುವುದು ಖಚಿತ.

ಯಡಿಯೂರಪ್ಪನ ಬಿಕ್ಕಟ್ಟಿಗೆ, ಇಕ್ಕಟ್ಟಿಗೆ ಪ್ರಧಾನ ಕಾರಣವಾಗಿರುವವಳು ಎಂದರೆ ಅವರ ಆಪ್ತೆ ಶೋಭಾ ಕರಂದ್ಲಾಜೆ. ಕೆಲವೇ ವರ್ಷಗಳ





ಹಿಂದೆಯಷ್ಟೇ ಬಜೆಪಿ ಪಕ್ಷದಲ್ಲಿ ಯಾರಿಗೂ ಪರಿಚಯವಿರದಿದ್ದ ಶೋಭಾ ಎಂಬ ಮಾಯೆ ಇಂದು ರಾಜಕೀಯ ವಲಯದಲ್ಲಿ ಎಲ್ಲರಿಗೂ ಚಿರಪರಿಚಿತ ಚಹರೆಯಾಗಿದೆ ಎಂದರೆ ಅದಕ್ಕೆ ಯಡಿಯೂರಪ್ಪನವರೇ ನೇರ ಕಾರಣ. ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಎಬಿವಿಪಿ ವಿದ್ಯಾರ್ಥಿ ಸಂಘಟನೆಯಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿದ್ದ ಶೋಭಾ 1992ರಲ್ಲೇ ಬಜೆಪಿ ಸೇರಿದ್ದು ನಿಜವಾದರೂ ಮೊನ್ನೆ ಮೊನ್ನೆಯ ತನಕ ಸಾಮಾನ್ಯ ಕಾರ್ಯಕರ್ತೆಯಾಗಿಯೇ ಇದ್ದಳು. ಕಳೆದ ಮೂವತ್ತೈದು ವರ್ಷಗಳಿಂದ ಬಜೆಪಿ ಪಕ್ಷ ಕಟ್ಟುವುದಕ್ಕಾಗಿ ಹಗಲು ರಾತ್ರಿಯೆನ್ನದೆ ದುಡಿದು ರಾಜ್ಯ ಬಜೆಪಿಯ ಅಗ್ರಮಾನ್ಯ ನಾಯಕನಾಗಿ ಹೊರಹೊಮ್ಮುತ್ತಿದ್ದ ಬಿ.ಎಸ್.ಯಡಿಯೂರಪ್ಪನಿಗೆ ಹತ್ತಿರವಾಗುತ್ತಿದ್ದಂತೆಯೇ ಶೋಭಾಳ ರಾಜಕೀಯ ಬೆಳವಣಿಗೆಯ ವೇಗವೂ ಹೆಚ್ಚಾಯಿತು. ಯಡ್ಡಿ ತನಗಿರುವ ಅಧಿಕಾರವನ್ನು ಬಳಸಿಕೊಂಡು 2008ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಹಿರಿಯರನ್ನೆಲ್ಲಾ ಕಡೆಗಣಿಸಿ, ಎಲ್ಲರ ವಿರೋಧದ ನಡುವೆಯೂ ಯಶವಂತಪುರ ಕ್ಷೇತ್ರದ ಟಿಕೆಟ್ ಅನ್ನು ಶೋಭಾಗೆ ಕೊಟ್ಟರು. ಬಜೆಪಿ ಚುನಾವಣೆಯಲ್ಲಿ ಗೆದ್ದು ಅಧಿಕಾರಕ್ಕೆ ಬಂದ ಮೇಲೆ ಜಗದೀಶ್ ಶೆಟ್ಟರ್‌ನಂಥ ಹಿರಿಯ ನಾಯಕರಿಗೆ ಒಂದು ಪುಟ್ಟ ಮಂತ್ರಿಗಿರಿಯನ್ನೂ ಕೊಡದೆ ವಂಚಿಸಿ ಶೋಭಾಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಎಂಬ ಬಹುಮುಖ್ಯ ಖಾತೆಯನ್ನೂ ಕೊಟ್ಟರು. ಆಕೆ ತನ್ನ ಇಲಾಖೆ ಮಾತ್ರವಲ್ಲದೇ ಬೇರೆ ಇಲಾಖೆಗಳಲ್ಲೂ ನೇರವಾಗಿ ಹಸ್ತಕ್ಷೇಪ ಮಾಡಿ ನಿಯಂತ್ರಿಸುವ ಮಟ್ಟಕ್ಕೆ ಹೋಗಿದ್ದಳು. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಯಡ್ಡಿಯ ಪಂಚೆಯಂಚಿನಲ್ಲೇ ರಾಜಕೀಯವಾಗಿ ಪ್ರವರ್ಧಮಾನಕ್ಕೆ ಬಂದ ಶೋಭ ಸರ್ಕಾರದ ಅತ್ಯಂತ ಶಕ್ತಿಶಾಲಿ ಮಂತ್ರಿಯಾಗಿ, ಪಕ್ಷದ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿ ಹೊರಹೊಮ್ಮಿದ್ದಳು. ಇಷ್ಟೊಂದು ಕಾಳಜಿಯಿಂದ ಬೆಳೆಸಿದ ಶೋಭಾಳೇ ತನಗೆ ಮುಳುವಾಗುತ್ತಾಳೆಂದು ಪ್ರಾಯಶಃ ಯಡ್ಡಿ ಯಾವತ್ತೂ ಎಣಿಸಿರಲಿಲ್ಲವೇನೋ? ಆದರೆ, ಅವರ ಎಣಿಕೆಯೀಗ ಸುಳ್ಳಾಗಿದೆ. ಶೋಭಾಳೇ ಇವತ್ತು ಯಡ್ಡಿಗೆ ಕೊರಳ ಉರುಳಾಗಿ ಬಿಗಿಯುತ್ತಿದ್ದಾಳೆ. ಬಂಡೆದ್ದಿರುವ ಬಹುತೇಕ ಶಾಸಕರು ಶೋಭಾಗೆ ಯಡ್ಡಿ ಕೊಟ್ಟಿರುವ ಪ್ರಾಶಸ್ತ್ಯವನ್ನೇ ಪ್ರಧಾನ ಅಸ್ತ್ರವನ್ನಾಗಿ ಪ್ರಯೋಗಿಸುತ್ತಿದ್ದಾರೆ. ಶೋಭಾಳ ಕಾರಣಕ್ಕಾಗಿ ಮೂಲೆಗುಂಪಾಗಿದ್ದವರೆಲ್ಲಾ ಬೂದಿಯಿಂದ ಪುಟಿದೆದ್ದು ಯಡ್ಡಿ-ಶೋಭಾ ವಿರುದ್ಧ ಸೆಡ್ಡು ಹೊಡೆದಿದ್ದಾರೆ.

ಇದು ರಾಜಕಾರಣದಲ್ಲಿ ಅಪರೂಪದ ಘಟನೆಯೇನಲ್ಲ. ಹೀಗೆ ಬಲಿಯಾಗುತ್ತಿರುವವರಲ್ಲಿ ಯಡ್ಡಿ ಮೊದಲಿಗರೇನಲ್ಲ. ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಬಜೆಪಿಯ



ಪ್ರಭಾವಿ ನಾಯಕರಾಗಿದ್ದ ಕಲ್ಯಾಣ್ ಸಿಂಗ್ ಕುಸುಮ್ ರಾಯ್ ಎಂಬಾಕೆಯನ್ನು ತಮ್ಮ ಹತ್ತಿರಕ್ಕೆ ಬಿಟ್ಟುಕೊಂಡು ಬಂಡಾಯವನ್ನೆದುರಿಸಿದ್ದರೆ, ಆಂಧ್ರದ ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಕೂಡ ಲಕ್ಷ್ಮಿ ಪಾರ್ವತಿ ಎಂಬ ಮಹಿಳೆಯ ಮೋಹಕ್ಕೆ ಬಲಿಯಾಗಿ ಮೂಲೆಗುಂಪಾಗಿದ್ದರು. ಕಲ್ಯಾಣ್ ಸಿಂಗ್ ಕೇವಲ ಉತ್ತರ ಪ್ರದೇಶದ ಮುಖ್ಯಮಂತ್ರಿ ಮಾತ್ರವಾಗಿಯಲ್ಲ ರಾಷ್ಟ್ರ ಬಿಜೆಪಿಯಲ್ಲೂ ಭಾರಿ ಪ್ರಭಾವಿಯಿದ್ದ ವ್ಯಕ್ತಿಯಾಗಿದ್ದರು. ಯಡಿಯೂರಪ್ಪನವರು ಶೋಭಾ ಕರಂದ್ಲಾಜೆಯನ್ನು ಬೆಳೆಸಿದಂತೆಯೇ ಕಲ್ಯಾಣ್ ಸಿಂಗ್ ಅವರು ಬಜೆಪಿ ಕಾರ್ಯಕರ್ತೆ ಹಾಗೂ ಲಕ್ನೋ ಮುನಿಸಿಪಲ್ ಕಾರ್ಪೋರೇಶನ್‌ನ ಮೆಂಬರ್ ಆಗಿದ್ದ ಕುಸುಮ್ ರಾಯ್ ಎಂಬ 33 ವರ್ಷದ ಮಹಿಳೆಯನ್ನು ಬೆಳೆಸಿದ್ದರು. ಸಾಮಾನ್ಯ ಮುನಿಸಿಪಲ್ ಸದಸ್ಯೆಯಾಗಿದ್ದ ಕುಸುಮ್ ರಾಯ್ ಅವರನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆಯನ್ನಾಗಿ, ವಿಧಾನ ಪರಿಷತ್ ಸದಸ್ಯೆಯನ್ನಾಗಿ, ಅಷ್ಟೇ ಅಲ್ಲ ರಾಜ್ಯಸಭೆಯ ಸದಸ್ಯೆಯನ್ನಾಗಿಯೂ ಮಾಡಿದ್ದರು. ಹೀಗೆ, ನೋಡುನೋಡುತ್ತಿದ್ದಂತೆ ಕುಸುಮ್ ರಾಯ್ ಎಷ್ಟರಮಟ್ಟಿಗೆ ಬೆಳೆದಳೆಂದರೆ ಪಕ್ಷದಲ್ಲಿ, ಸರ್ಕಾರದಲ್ಲಿ ಕಲ್ಯಾಣ್ ಸಿಂಗ್ ನಂತರದ ಅತ್ಯಂತ ಪ್ರಭಾವಿ ವ್ಯಕ್ತಿ ಎಂದರೆ ಕುಸುಮ್ ರಾಯ್ ಎಂಬಂತಾಗಿಬಿಟ್ಟಿತ್ತು. ಇನ್ನೂ ವಿಚಿತ್ರ ಎಂದರೆ ಪಕ್ಷದ ಕಾರ್ಯಕರ್ತರು, ಎರಡನೇ ಹಂತದ ನಾಯಕರು ಕಲ್ಯಾಣ್ ಸಿಂಗ್ ಅವರನ್ನು ಭೇಟಿ ಮಾಡಬೇಕೆಂದರೆ ಮೊದಲು ಕುಸುಮ್ ರಾಯ್ ಅವರ ಬಳಿಗೆ ಹೋಗಬೇಕಿತ್ತು! ಕೊನೆಗೆ ಅದೇ ಕುಸುಮ್ ರಾಯ್ ಕಲ್ಯಾಣ್ ಸಿಂಗ್ ಕೊರಳಿಗೆ ಉರುಳಾಗಿ ಪರಿಣಮಿಸಿದರು. ಕುಸುಮ್ ಸರ್ವಾಧಿಕಾರದ ವಿರುದ್ಧ ಅವರ ಬೆನ್ನಿಗೆ ನಿಂತಿದ್ದ ಕಲ್ಯಾಣ್ ಸಿಂಗ್ ವಿರುದ್ಧ ಬಜೆಪಿಯ ನಾಯಕರು ಬಂಡಾಯವೆದ್ದರು. ಕಲ್ಯಾಣ್ ಸಿಂಗ್ ಅಂತಿಮವಾಗಿ ರಾಜೀನಾಮೆ ಕೊಡಬೇಕಾಗಿ ಬಂತು.

ಆಂಧ್ರದ ಮಾಜಿ ಮುಖ್ಯಮಂತ್ರಿಯಾಗಿದ್ದ ಎನ್.ಟಿ.ರಾಮರಾವ್ ಅವರದ್ದೂ ಇದೇ ಕತೆ. ಎನ್.ಟಿ.ಆರ್ ಅವರ ಜೀವನಚರಿತ್ರೆ ಬರೆಯುವ ನೆಪದಲ್ಲಿ ಅವರ ಮನೆಗೆ ಕಾಲಿಟ್ಟ ಲಕ್ಷ್ಮಿ ಪಾರ್ವತಿ ಅಲ್ಲಿಂದ ಹೊರಬರಲೇ ಇಲ್ಲ. ಎನ್.ಟಿ.ಆರ್ ಅವರ ಎರಡನೇ ಹೆಂಡತಿಯಾಗಿ ಪರ್ಮನೆಂಟಾಗಿ ಸೆಟಲ್ ಆದಳು. ಅದು ಅಲ್ಲಿಗೆ ನಿಂತಿದ್ದರೆ ಪ್ರಾಯಶಃ ಯಾರಿಗೂ ಸಮಸ್ಯೆಯಾಗಿರುತ್ತಿರಲಿಲ್ಲ. ಲಕ್ಷ್ಮಿ ಪಾರ್ವತಿ ಒಬ್ಬ ಗೃಹಿಣಿಯಾಗಿರುವ ಜಾಯಮಾನದವಳಲ್ಲ. ತನ್ನ ಗಂಡನಿಗಿರುವ ಅಧಿಕಾರವನ್ನು ತಾನೂ ಅನುಭವಿಸಬೇಕೆಂಬ ತಹತಹವಿದ್ದವಳು. ಪರಿಣಾಮವಾಗಿ ಕೆಲವೇ ಸಮಯದಲ್ಲಿ ಆಕೆ ಸರ್ಕಾರದ, ಪಕ್ಷದ ಪ್ರಮುಖ ನಿರ್ಧಾರಗಳನ್ನು ನಿರ್ದೇಶಿಸುವ ಪ್ರಭಾವಿ ವ್ಯಕ್ತಿಯಾಗಿ ಬೆಳೆದಳು. ಸಹಜವಾಗಿ ಇದು ಪಕ್ಷದ ಎರಡನೇ ಸ್ಥಾಯಿಯ ನಾಯಕರನ್ನು, ಕಾರ್ಯಕರ್ತರನ್ನು ಬಹಳವಾಗಿ ಕೆರಳಿಸಿತು. ಅದರಲ್ಲೂ ಎನ್.ಟಿ.ರಾಮರಾವ್ ಮಂತ್ರಿಮಂಡಳದಲ್ಲಿ ಕ್ಯಾಬಿನೆಟ್ ಮಂತ್ರಿಯಾಗಿದ್ದ ಹಾಗೂ ಅವರ ಖುದ್ದು ಅಳಿಯನಾಗಿದ್ದ ಎನ್.ಚಂದ್ರಬಾಬು ನಾಯ್ಡು ಬೆಳೆಯುತ್ತಿರುವ ಪಾರ್ವತಿಯ ಪ್ರಭಾವದಿಂದ ಬಹಳಷ್ಟು ಕ್ರುದ್ಧನಾಗಿದ್ದ. ಹೀಗೆ, ಲಕ್ಷ್ಮಿ ಪಾರ್ವತಿಯ ವಿರುದ್ಧ ಕುದಿಯುತ್ತಿದ್ದ ಎಲ್ಲಾ ಕಾರ್ಯಕರ್ತರು, ನಾಯಕರು ಒಗ್ಗಟ್ಟಾಗಿ ಎನ್.ಟಿ.ರಾಮರಾವ್ ವಿರುದ್ಧ ತಿರುಗಿಬಿದ್ದರು. ಅಂತಿಮವಾಗಿ ಎನ್.ಟಿ.ರಾಮರಾವ್ ತನ್ನ ಪ್ರಿಯತಮೆ ಲಕ್ಷ್ಮಿ ಪಾರ್ವತಿಗೋಸ್ಕರ ತಾನು ದಶಕಗಳ ಕಾಲ ಬೆವರು ಹರಿಸಿ ಕಟ್ಟಿದ್ದ ಪಕ್ಷದಿಂದಲೇ ಹೊರನಡೆಯಬೇಕಾಯಿತು.





ಕೊಟ್ಟಕೊನೆಯಲ್ಲಿ ಕಲ್ಯಾಣ್ ಸಿಂಗ್ ಜೊತೆ ಕುಸುಮ್ ರಾಯ್, ಎನ್.ಟಿ.ರಾಮರಾವ್ ಜೊತೆಯಲ್ಲಿ ಲಕ್ಷ್ಮಿ ಪಾರ್ವತಿ ಮಾತ್ರವೇ ಉಳಿದುಕೊಂಡಿದ್ದರು. ಈಗ ಕರ್ನಾಟಕದಲ್ಲಿ ನಡೆಯುತ್ತಿರುವ ಬೆಳವಣಿಗೆಗಳನ್ನು ಕಂಡರೆ ಯಡಿಯೂರಪ್ಪನವರ ಜೊತೆಯಲ್ಲಿ ಶೋಭಾ ಮಾತ್ರವೇ ಉಳಿಯುತ್ತಾರೆ ಅಂತ ಕಾಣುತ್ತೆ.

● ಕುಮಾರ್ ಬುರಡಿಕಟ್ಟಿ

ಅದಿರುಗಳ್ಳರ ಅಟ್ಟಹಾಸಕ್ಕೆ ಸಣ್ಣದೊಂದು ಬ್ರೇಕ್!





ರಾಜ್ಯದ ಆಡಳಿತ ಪಕ್ಷದ ಬಿಕ್ಕಟ್ಟು ಕೆಲ ಪ್ರಾಮಾಣಿಕ ಅಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಿರುವುದರಿಂದ ಸದ್ಯಕ್ಕೆ ಬಳ್ಳಾರಿಯ ಕಡೆಯ ಅದಿರುಗಳ್ಳರು ತೆಪ್ಪಗಾಗಿದ್ದಾರೆ.

ಡಿ.ಸಿ. ಹರ್ಷ ಗುಪ್ತಾ, ಎಸ್ಪಿ ರಾಜಪ್ಪ ಮತ್ತು ಡಿಎಫ್‌ಓ ಬಿಸ್ವಜಿತ್ ಮಿಶ್ರಾರಂತಹ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಸದ್ಯದ ಮಟ್ಟಿಗೆ ಅಕ್ರಮ ಅದಿರು ಸಾಗಾಣಿಕೆ ನಿಂತಿದೆ. ಆದರೆ ಈಗಾಗಲೇ ಮಾಡಿಟ್ಟಿರುವ ಅಕ್ರಮ ಅದಿರಿನ ಸಂಗ್ರಹಣೆ ಮತ್ತು ಅಕ್ರಮ ಗಣಿಗಾರಿಕೆಗಳು ಪೂರ್ತಿ ನಿಂತಿಲ್ಲ. ಅಂದರೆ ಅದಿರುಗಳ್ಳರೀಗ ರಾಜಕೀಯ ಬಿಕ್ಕಟ್ಟು ಬಗೆಹರಿಯುವುದನ್ನೇ ಕಾದು ನೋಡುತ್ತಿದ್ದಾರೆ. ಯಡಿಯೂರಪ್ಪ ಹೋಗಿ ಜಗದೀಶ್ ಶೆಟ್ಟರ್ ಬಂದರೂ ಅದಿರುಗಳ್ಳರಿಗೆ ಖುಷಿ, ಇಲ್ಲವೇ ಯಡ್ಡಿ-ರೆಡ್ಡಿಗಳ ಮಧ್ಯೆ ಸಂಧಾನ ಏರ್ಪಟ್ಟರೂ ಅದಿರುಗಳ್ಳರಿಗೆ ಮುಕ್ತ ರಹದಾರಿ. ಒಟ್ಟಿನಲ್ಲಿ ಈಗ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವ ಅಧಿಕಾರಿಗಳ ಎತ್ತಂಗಡಿ ಆಗುವುದಂತೂ ಗ್ಯಾರಂಟಿ.


ಕೇವಲ ಒಂದೂವರೆ ವರ್ಷಗಳ ಹಿಂದೆ ಇದೇ ಡಿಎಫ್‌ಓ ಬಿಸ್ವಜಿತ್ ಮಿಶ್ರಾರನ್ನು ಆರೇ ತಿಂಗಳಲ್ಲಿ ಎತ್ತಂಗಡಿ ಮಾಡಿ ಚಾಮರಾಜನಗರಕ್ಕೆ ಹಾಕಲಾಗಿತ್ತು, ಆವತ್ತು ಅವರು ರೆಡ್ಡಿಗಳಿಗೆ ಮುಳುವಾಗಿದ್ದರು. ಗಣಿರೆಡ್ಡಿಗಳ ಎಲ್ಲ ಪಾಪಗಳಿಗೂ ಪೋಷಣೆ ನೀಡುತ್ತಾ ಬಂದ ಯಡ್ಡಿ ಮತ್ತು ರಾಜ್ಯ ಬಜೆಪಿ ನಾಯಕರುಗಳು ಬಳ್ಳಾರಿಗೆ ಪರಮಭ್ರಷ್ಟ ಅಧಿಕಾರಿಗಳನ್ನು ನೇಮಿಸುತ್ತಾ ಬಂದಿದ್ದರು.

ಈಗ ಏರ್‌ಪೋರ್ಟ್‌ಗೆಂದು ಗುರ್ತಿಸಿರುವ ಜಾಗ ನೀರಾವರಿ ಪ್ರದೇಶವಾಗಿದ್ದರೂ ಕೂಡಾ ಅದನ್ನು ಖುಷ್ಕಿ ಎಂದು ಗೆಜೆಟ್ ಪ್ರಕಟಣೆ ಹೊರಡುವಂತೆ ಮಾಡಿದ್ದು ಹಿಂದಿನ ಡಿ.ಸಿ.ಶಿವಪ್ಪ ಎಂಬ ರೆಡ್ಡಿಗಳ ಗುಲಾಮ. ರಾಜ್ಯದ ಗಡಿ ಒತ್ತುವರಿಯಾದರೂ ಈ ಶಿವಪ್ಪ ಸೈಲೆಂಟಾಗೇ ಇದ್ದ. ಪ್ರತಿಭಟಿಸಿದ ರೈತರ ಮೇಲೆಯೇ ಲಾಠಿ ಚಾರ್ಜ್ ಮಾಡಿಸಿದ್ದು ಅಂದಿನ ಎಸ್.ಪಿ. ಸೀಮಂತಕುಮಾರ್ ಎಂಬ ಇನ್ನೊಬ್ಬ ರೆಡ್ಡಿ ಚೇಲಾ. ಜೊತೆಗೆ ರಾಜ್ಯದ ಅರಣ್ಯ ಭೂಮಿಯನ್ನು ರೆಡ್ಡಿಗಳ ಮಡಿಲಿಗೆ ಹಾಕಿದ್ದು ಅಂದಿನ ಡಿಎಫ್‌ಓ ಮುತ್ತಯ್ಯ. ಈಗ ಈ ಮೂರೂ ಮನೆಹಾಳರ ಸ್ಥಾನದಲ್ಲಿ ಪ್ರಾಮಾಣಿಕ ಅಧಿಕಾರಿಗಳು ಬಂದಿದ್ದು ಅವರ ಮೇಲೆ ಸದ್ಯಕ್ಕೆ ಯಾವುದೇ ಒತ್ತಡ ಇಲ್ಲದಿರುವುದು ಅಕ್ರಮ ಅದಿರು ಸಾಗಾಣಿಕೆಗೆ ಕಡಿವಾಣ ಹಾಕಲು ನೆರವಾಗಿದೆ. ಕಲ್ಲಳ್ಳಿ, ಬನ್ನಿಹಟ್ಟಿ, ಯಶವಂತನಗರ, ಹಗರಿ ಎಂಬ ನಾಲ್ಕು ಚೆಕ್‌ಪೋಸ್ಟ್‌ಗಳಲ್ಲಿ ಹಗಲು ರಾತ್ರಿ ಅದಿರು ಲಾರಿಗಳ ತಪಾಸಣೆ ನಡೆಯುತ್ತಿರುವುದರಿಂದ ಅದಿರಗಳ್ಳರು ಕೊಂಚ ತಣ್ಣಗಾಗಿದ್ದಾರೆ. ಹಿಂದೆ ರೆಡ್ಡಿಗಳ ಪರವೇ ಆಂಧ್ರದ ಅನಂತಪುರ ಅರಣ್ಯಾಧಿಕಾರಿ ಕಲ್ಲೋಳ್ ಬಿಸ್ವಾಸ್ ಕೂಡಾ ಈಗ ರೆಡ್ಡಿಗಳ ವಿರುದ್ಧ ತಿರುಗಿ ಬಿದ್ದಿದ್ದಾರೆ.

ಆದರೆ? ಈ ಮೂವರು ಪ್ರಾಮಾಣಿಕ ಅಧಿಕಾರಿಗಳು ಎಷ್ಟು ದಿನ ಇದ್ದಾರು? ಬಜೆಪಿಯ ರಾಜಕೀಯ ಬಿಕ್ಕಟ್ಟು ಬಗೆಹರಿದ ಕೂಡಲೇ ಇವರ ಎತ್ತಂಗಡಿಯಾಗಲಿದೆ. ಹಾಗಾಗದಂತೆ ನೋಡಿಕೊಳ್ಳುವುದು ಬರೀ ಬಳ್ಳಾರಿ ಜನರ ಕರ್ತವ್ಯವಷ್ಟೇ ಅಲ್ಲ, ಅದು ರಾಜ್ಯದ ಸಮಸ್ತ ಜನತೆಯ ಕರ್ತವ್ಯವೇ ಆಗಿದೆ.







● ಮಲ್ಲಿ

ಒಂದು ಪ್ಲಾಂಟೆಡ್ ಸತ್ಯ ಸುದ್ದಿಯ ಸುತ್ತ...

ಬಿಜೆಪಿಯಲ್ಲಿನ ಭಿನ್ನಮತ ಚಟುವಟಿಕೆಗಳು ದೆಹಲಿಗೆ ಆದ ಎರಡು ದಿನಗಳ ನಂತರ - ಅಂದರೆ ವಾರ ರಾತ್ರಿ ಒಂಬತ್ತು ಗಂಟೆಗೆ - ಎನ್‌ಡಿಟಿವಿ ಒಂದು ಸುದ್ದಿಯನ್ನು ಪ್ರಸಾರ ಮಾಡಿತು. ಅಂದರೆ ರಾಜ್ಯ ಬಿಜೆಪಿಯಲ್ಲಿನ ಭಿನ್ನಮತೀಯ ಚಟುವಟಿಕೆಗಳ ಸೂತ್ರಧಾರ ಅನಂತ್‌ಕುಮಾರ್ ಎಂದು. ಇಲ್ಲಿಯವರೆಗೆ ಬಿಜೆಪಿಯಲ್ಲಿನ ಭಿನ್ನಮತೀಯ ಚಟುವಟಿಕೆಗಳನ್ನು ಬಗೆಹರಿಸಲು ಪಕ್ಷದ ವರಿಷ್ಠರು ನಡೆಸುತ್ತಿರುವ ಮಾತುಕತೆಗಳನ್ನು, ಕಸರತ್ತುಗಳನ್ನು ಈ ಅಪೂರ್ವ ಘಟನೆಗಳೆಂಬಂತೆ 'ಸಂಪೂರ್ಣವಾಗಿ' ವರದಿ ಮಾಡುತ್ತಿದ್ದ ರಾಜ್ಯದ ಮಾಧ್ಯಮಗಳು ಈ ಸುದ್ದಿಯನ್ನು ನೋಡಿ ಬೆಚ್ಚಿಬಿದ್ದವು.

ಅನಂತ್‌ಕುಮಾರ್‌ನನ್ನು 'ಮಿಸ್ಟ್ರಿ ಮ್ಯಾನ್' ಎಂದು ಎನ್‌ಡಿಟಿವಿಯ ರಾಜಕೀಯ ವರದಿಗಾರ, ಅನಂತು ಜನಾರ್ದನ ರೆಡ್ಡಿಯನ್ನು ಪಾರಿಜಾತ ಅಪಾರ್ಟ್‌ಮೆಂಟನಲ್ಲಿ ಭೇಟಿಯಾಗಿದ್ದು, ಮಾರನೇ ದಿನ ವಿಶೇಷ ವಿಮಾನದಲ್ಲಿ ಹುಬ್ಬಳ್ಳಿಗೆ ಹೋಗಿ ತನ್ನ ಸಹೋದರ ನಂದಕುಮಾರ್ ಮನೆಯಲ್ಲಿ ಜಗದೀಶ್ ಶೆಟ್ಟರ್‌ರನ್ನು ಭೇಟಿಯಾಗಿ ಏನೇನು ಮಾಡಬೇಕೆಂದು ಚರ್ಚಿಸಿದ್ದು, ಎಲ್ಲವನ್ನೂ ವರದಿಯಲ್ಲಿ ವಿವರಿಸಿದ. ಭಿನ್ನಮತೀಯ ಚಟುವಟಿಕೆಗಳ ಸೂತ್ರಧಾರ ಅನಂತ್‌ಕುಮಾರ್ ಎಂಬುದು ಬಿಜೆಪಿ ವರಿಷ್ಠರ ಗಮನಕ್ಕೆ ಬಂದಿದೆ ಎಂದೂ ಆ ವರದಿಗಾರ ಹೇಳಿದ.

ಆತನ ವರದಿಯಲ್ಲಿನ ಒಂದಕ್ಷರವೂ ಸುಳ್ಳಾಗಿರಲಿಲ್ಲ. ಏಕೆಂದರೆ ಇದೆಲ್ಲವೂ ರಾಜ್ಯ ಗುಪ್ತಚರ ಇಲಾಖೆ ಸಂಗ್ರಹಿಸಿದ್ದ ಮಾಹಿತಿಗಳಾಗಿದ್ದವು. ಈ ವಿವರಗಳು ಯಡಿಯೂರಪ್ಪನವರಿಗೂ ಗೊತ್ತಿತ್ತು. ಆದರೆ ಇದನ್ನು ಬಹಿರಂಗಪಡಿಸಿದವರು ದೆಹಲಿಯಲ್ಲಿರುವ ರಾಜ್ಯದ ವಿಶೇಷ ಪ್ರತಿನಿಧಿ ಧನಂಜಯ್ ಕುಮಾರ್!

ರಾಜ್ಯದ ನಾಯಕತ್ವ ಬದಲಾಗಬೇಕೆಂದು ಪಟ್ಟು ಹಿಡಿದಿರುವ ರೆಡ್ಡಿ ಬಣ ತನ್ನ ಬಿಗಿ ಹಿಡಿತ ಮುಂದುವರೆಸುತ್ತಿರುವಾಗಲೇ ಹೆದರಿದ ಯಡ್ಡಿ ಬಣ ಈ ಸುದ್ದಿಯನ್ನು ಪ್ಲಾಂಟ್ ಮಾಡಿ ಅದರಿಂದ ಲಾಭಪಡೆಯಲು ಸಂಚು ರೂಪಿಸಿತು. ಈ ಸುದ್ದಿ ಬಹಿರಂಗಗೊಂಡರೆ, ಪಕ್ಷದ ವರಿಷ್ಠರು ಅನಂತ್ ವಿರುದ್ಧ ತಿರುಗಿ ಬೀಳುತ್ತಾರೆ. ನೀವೇ ಬಗೆಹರಿಸಿ ಎಂದು ಅನಂತು ತಲೆಗೆ ಕಟ್ಟುತ್ತಾರೆ. ಆಗ ತಮಗೆ ಬೇಕಾದ ರೀತಿಯಲ್ಲೇ ಭಿನ್ನಮತವನ್ನು ಶಮನಗೊಳಿಸಬಹುದು ಎಂಬುದು ಯಡ್ಡಿ ಬಣದ ಲೆಕ್ಕಾಚಾರವಾಗಿತ್ತು, ಹೀಗಾಗಿ ಧನಂಜಯ್ ಕುಮಾರ್ ಭಾನುವಾರ ಸಂಜೆ ಈ ಸುದ್ದಿಯನ್ನು ಪ್ಲಾಂಟ್ ಮಾಡಿದರು. ಆದರೆ ಪರಿಸ್ಥಿತಿ ಆಗಲೇ ಕೈ ಮೀರಿಹೋಗಿತ್ತು. ಯಡ್ಡಿ ವಿರುದ್ಧ ಭಿನ್ನಮತೀಯರು ದೂರು ನೀಡಿದಾಗಲೇ ಅನಂತ್‌ಕುಮಾರ್ ಕೂಡ ಯಡ್ಡಿ ವಿರುದ್ಧ ವರಿಷ್ಠರಿಗೆ ದೊಡ್ಡ ವರದಿಯನ್ನೇ ನೀಡಿದರು. ಓಡಾಟದ ಮೇಲೆ, ಚಟುವಟಿಕೆ ಮೇಲೆ ಯಡ್ಡಿ ನಿಗಾ ಇಟ್ಟು ತಮಗೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ



ದೆಹಲಿಯಲ್ಲಿ ಮುಖ್ಯಮಂತ್ರಿ ಚಂದ್ರು ಮತ್ತು ಶಂಕರಮೂರ್ತಿ ಜೊತೆ ಜನಾರ್ದನ ರೆಡ್ಡಿ...

ಎಂದೆಲ್ಲಾ ದೂರಿದರು. ಅದಕ್ಕೆ ಸರಿಯಾಗಿ ಧನಂಜಯ್ ಕುಮಾರ್ ಪ್ಲಾಂಟ್ ಮಾಡಿದ್ದ ಈ ಸುದ್ದಿ ಅನಂತು ದೂರಿಗೆ ಸಾಕ್ಷ್ಯ ನೀಡಿದಂತಿತ್ತು! ಆದ್ದರಿಂದ ಈ ಸುದ್ದಿಯಿಂದ ತಮಗೆ ಲಾಭವಾಗಲಿದೆ ಎಂದುಕೊಂಡಿದ್ದ ಯಡ್ಡಿ ಬಣಕ್ಕೆ ಇದು ತಿರುಗುಬಾಣವಾಯಿತು. ವರಿಷ್ಠರೆಲ್ಲರೂ ಒಟ್ಟಿಗೆ ಹರಿಹಾಯ್ದರು. ಈ ರೀತಿ ರಾಜಕೀಯ ಮಾಡಿದರೆ ಪಕ್ಷದಲ್ಲಿ ಒಗ್ಗಟ್ಟು ಕಾಯ್ದುಕೊಳ್ಳಲು ಹೇಗೆ ಸಾಧ್ಯವಾಗುತ್ತದೆ ಎಂದು ಯಡ್ಡಿಯನ್ನೇ ಪ್ರಶ್ನಿಸಿದರು. ಈ ಬೆಳವಣಿಗೆಯಿಂದ ಬೆಚ್ಚಿಬಿದ್ದ ಧನಂಜಯ್ ಕುಮಾರ್, ಸದಾನಂದ ಗೌಡ, ಮತ್ತಿತರ ಯಡ್ಡಿ ಪಟಾಲಂನವರು ಮಾರನೆ ದಿನವೇ ಪ್ಲೇಟ್ ಬದಲಾಯಿಸಿದರು. ಸೋಮವಾರ ಬೆಳಗ್ಗೆಯಿಂದ ಅನಂತುವನ್ನು ಅವರೆಲ್ಲ ಹೊಗಳಿದ್ದೇ ಹೊಗಳಿದ್ದು. ಅನಂತಕುಮಾರ್ ಭಿನ್ನಮತೀಯ ಚಟುವಟಿಕೆಗಳ ಸೂತ್ರಧಾರರು ಎಂಬುದರಲ್ಲಿ ಒಂದಿಷ್ಟೂ ಹುರುಳಿಲ್ಲ ಎಂದು ಹೇಳುವ ಮೂಲಕ ಅದರ ಹಿಂದಿನ ದಿನ ತಾವೇ ಲೀಕ್ ಮಾಡಿದ ಸುದ್ದಿಯನ್ನು ನಿರಾಕರಿಸಿದರು!

ಸುದ್ದಿ ಮುಚ್ಚಿಟ್ಟ ಮಾಧ್ಯಮಗಳು

ಭಿನ್ನಮತದಲ್ಲಿ ಅನಂತು ಪಾತ್ರ ಕುರಿತ ಸುದ್ದಿಯನ್ನು ಎನ್‌ಡಿಟಿವಿ ಪ್ರಸಾರ ಮಾಡುತ್ತಿದ್ದಂತೆ ಕರ್ನಾಟಕದ ಪತ್ರಿಕೆಗಳ ಸಂಪಾದಕರು ಗೊಂದಲಕ್ಕೊಳಗಾದರು. ಕಾರಣ ಅವರಲ್ಲಿ ಬಹುತೇಕರು ಅನಂತು ಪರ ಇರುವುದು.

ರಾಜ್ಯ ನಂ.1 ಚೆಡ್ಡಿ ಪತ್ರಿಕೆ 'ವಿಜಯ ಕರ್ನಾಟಕ'ದ ಸಂಪಾದಕ ವಿ.ಭಟ್ಟರಿಗಂತೂ ಗೊಂದಲವೋ ಗೊಂದಲ. ಹೇಳಿಕೇಳಿ ಅವರು ಈ ಹಿಂದೆ ಅನಂತಕುಮಾರ್ ಅವರ ವಿಶೇಷ ಸಹಾಯಕರಾಗಿದ್ದರಲ್ಲವೇ? ಅಕಸ್ಮಾತ್ ಬೇರೆ ಪತ್ರಿಕೆಗಳು ಈ ಸುದ್ದಿಯನ್ನು ದೊಡ್ಡದಾಗಿ ಪ್ರಕಟಿಸಿ ತಾನು ಅದನ್ನು ಕೈಬಿಟ್ಟರೆ ಅನಂತು ಪರವಾದ ತನ್ನ ನಿಲುವು ಬಟಾಬಯಲಾಗುತ್ತದೆ ಎಂದು ಹೆದರಿ 'ಬಿಜೆಪಿ ಬಿಕ್ಕಟ್ಟಿನಲ್ಲಿ ಮೂರನೇ ವ್ಯಕ್ತಿಯ ಕೈವಾಡ' ಎಂಬ ಚಿಕ್ಕ ಸುದ್ದಿಯೊಂದನ್ನು ಬೇಕೋಬೇಡವೋ ಎಂಬಂತೆ ಪ್ರಕಟಿಸಿದರು. ತಲೆಬುಡವಿರದಿದ್ದ ಆ ವರದಿಯಲ್ಲಿ ಭಿನ್ನಮತದಲ್ಲಿ ಅನಂತು ಕೈವಾಡದ ಬಗ್ಗೆ ಸ್ಪಷ್ಟ ವಿವರಣೆಗಳೂ ಇರಲಿಲ್ಲ.

ಇನ್ನು ಸಂಪಾದಕರಾಗಲು ಅನಂತುವಿನಿಂದ ಶಿಫಾರಸು ಮಾಡಿಸಿಕೊಂಡಿದ್ದ 'ಕನ್ನಡ ಪ್ರಭ'ದ ಸಂಪಾದಕರು ಹಿಂದುಮುಂದು ಯೋಚಿಸದೇ ಆ ಸುದ್ದಿಯನ್ನು ನೇರವಾಗಿ ಕಸದಬುಟ್ಟಿಗೆ ಎಸೆದರು. ಈ ಮಧ್ಯೆ 'ಪ್ರಜಾವಾಣಿಗೆ' ಈ ಸುದ್ದಿ ಏಕೆ ಸಿಗಲಿಲ್ಲವೋ? 'ಟಿವಿ ಒಂಬತ್ತು' ಮಾತ್ರ ಸೋಮವಾರ ಬೆಳಿಗ್ಗೆಯಿಂದ ಇದು ತಮ್ಮ ಚಾನಲ್‌ನ ವಿಶೇಷ ಇನ್‌ವೆಸ್ಟಿಗೇಷನ್ ಸುದ್ದಿಯೆಂಬಂತೆ ಪೋಸು ಕೊಡುತ್ತಾ ಬಿಜೆಪಿ ನಾಯಕರಿಗೆ ನೀರಿಳಿಸುತ್ತಿತ್ತು.

ಲೆಕ್ಕಾಚಾರ ತಪ್ಪಿದ ಅನಂತು!

ಸೆಪ್ಟೆಂಬರ್ 24ರಂದು ತಮ್ಮ ಸಹೋದರನ ಮನೆಯಲ್ಲಿ ನಡೆದ ಚಂಡಿಕಾ ಹೋಮ ಮತ್ತು ಹೊಸ ಉದ್ಯಮದ ಆರಂಭದ ಕಾರ್ಯಕ್ರಮದಲ್ಲಿ ಭಾಗವಹಿಸುವ ನೆಪಮಾಡಿಕೊಂಡು ಅನಂತ್‌ಕುಮಾರ್ ಹುಬ್ಬಳ್ಳಿಗೆ ಹೋಗಿದ್ದರು. ಅಂದೇ ತಾವು ಹೊಸಪೇಟೆಯಲ್ಲಿ ಕಟ್ಟಿಸಿದ ಪಂಚತಾರಾ ಹೊಟೇಲ್‌ನ ಉದ್ಘಾಟನೆಯ ಆಹ್ವಾನ ಪತ್ರಿಕೆ ನೀಡುವ ನೆಪದಲ್ಲಿ ಜನಾರ್ದನ ರೆಡ್ಡಿ ಹುಬ್ಬಳ್ಳಿಗೆ ಬಂದಿದ್ದರು. ಆಗ ಶೆಟ್ಟರ್ ಸಮ್ಮುಖದಲ್ಲಿಯೇ ರೆಡ್ಡಿಗಳು ಯಡ್ಡಿ ವಿರುದ್ಧ ಬಂಡಾಯ ಏಳುವ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರಲಾಯಿತು.



"ಯಡ್ಡಿ ಬದಲಾವಣೆ ವಿಷಯ ಹೈಕಮಾಂಡ್ ಬಳಿಗೆ ಹೋಗುವಂತೆ ಮಾಡಿ. ಸಂಧಾನ ನಡೆಸಲು ಅರುಣ್ ಜೇಟ್ಲಿಯೋ, ವೆಂಕಯ್ಯ ನಾಯ್ಡುವೋ ಬಂದರೆ ಈ ವಿಚಾರ ಪಕ್ಷದ ಸಂಸದೀಯ ಸಮಿತಿಯಲ್ಲಿ ಚರ್ಚೆಗೆ ಬರುವವರೆಗೂ ಬಗ್ಗಬೇಡಿ. ಅಲ್ಲಿ ನಾನು ನಿಮ್ಮ ಪರವಾಗಿಯೇ ಅಂದರೆ ಯಡ್ಡಿ ಬದಲಾಗುವಂತೆ ಮಾಡುತ್ತೇನೆ'' ಎಂದು ಅನಂತು ಈ ಸಂದರ್ಭದಲ್ಲಿ ಭರವಸೆ ಕೊಟ್ಟಿದ್ದ.

ಇದನ್ನು ನಂಬಿದ ರೆಡ್ಡಿ ಬಣ ಅನಂತು ಹೇಳಿದಂತೆಯೇ ಬಿಗಿಪಟ್ಟು ಹಿಡಿಯಿತು. ಎಣಿಸಿದಂತೆಯೇ ಭಿನ್ನಮತೀಯ ಚಟುವಟಿಕೆ ದೆಹಲಿಯ ವರಿಷ್ಠರ ಅಂಗಳವನ್ನೂ ತಲುಪಿತು. ಇನ್ನೇನು ಈ ವಿಷಯ ಪಕ್ಷದ ಸಂಸದೀಯ ಸಮಿತಿಯಲ್ಲಿ ಚರ್ಚಿಸಲ್ಪಡುತ್ತದೆ ಎನ್ನುವಾಗ ಅನಂತುವಿನ ಕುತಂತ್ರವನ್ನು ಅರಿತ ಯಡ್ಡಿ ಬಣ "ನೀವೆಲ್ಲಾ ಸೇರಿ ಚರ್ಚೆ ನಡೆಸಿ. ಆದರೆ ರಾಜ್ಯದವರೇ ಆದ ಅನಂತು ಈ ಸಂದರ್ಭದಲ್ಲಿ ಇರಬಾರದು'' ಎಂದು ಪಕ್ಷದ ನಾಯಕರ ಮೇಲೆ ಒತ್ತಡ ಹೇರಲಾರಂಭಿಸಿತು.

ಸಂಸದೀಯ ಸಮಿತಿಯಲ್ಲಿ ತಮ್ಮ ಮಾತು ನಡೆಯುತ್ತದೆ. ಜೊತೆಗೆ ಅಡ್ವಾಣಿ ಅಂಡ್ ಟೀಮ್ ತಮ್ಮ ಬೆಂಬಲಕ್ಕೆ ನಿಲ್ಲುತ್ತದೆ ಎಂಬ ಅನಂತು ಲೆಕ್ಕಾಚಾರ ಇಲ್ಲಿ ಹಾದಿ ತಪ್ಪಿತು. ಹೀಗಾಗಿ ಗೆಲುವು ಸಾಧ್ಯವಾಗದಿದ್ದರೂ ಸೋಲಬಾರದೆಂಬ ತಂತ್ರವನ್ನು ಅನಂತು ಬಣ ಆ ನಂತರ ಅನುಸರಿಸಲಾರಂಭಿಸಿತು. ಇದರಿಂದಾಗಿ ಭಿನ್ನಮತದ ಗಂಟು ಕಗ್ಗಂಟಾಗುತ್ತಲೇ ಹೋಯಿತು.


ಈ ಬೆಳವಣಿಗೆಯಿಂದ ಕಕ್ಕಾಬಿಕ್ಕಿಯಾದವರೆಂದರೆ ರೆಡ್ಡಿಗಳು. ಅನಂತು ಲೆಕ್ಕಾಚಾರ ತಲೆಕೆಳಗೆ ಆಗುವಷ್ಟರಲ್ಲಿ ಬಂಡಾಯದ ಹಾದಿಯಲ್ಲಿ ಅರ್ಧ ದಾರಿ ಬಂದಿದ್ದ ಅವರು ಮುಂದೇನು ಮಾಡಬೇಕೆಂದು ನಿರ್ಧರಿಸಲು ಎರಡು ದಿನಗಳೇ ಬೇಕಾಯಿತು. ಹೀಗಾಗಿ ಒಮ್ಮೆ "ಯಡ್ಡಿ ನಮ್ಮ ಮುಖ್ಯಮಂತ್ರಿ'' ಎಂದರೆ, ಮತ್ತೆ ಕೆಲ ಕ್ಷಣದಲ್ಲಿಯೇ ಆತನನ್ನು "ಕಂಸ'' ಎಂದು ಜರೆದರು.

ಅಷ್ಟೇ ಅಲ್ಲ, ಸೀದಾ ದೆಹಲಿಗೆ ತೆರಳಿದ ಜನಾರ್ದನ ರೆಡ್ಡಿ ಮೊದಲು ಮಾಡಿದ ಕೆಲಸವೆಂದರೆ ಅನಂತುವನ್ನು ಭೇಟಿಯಾಗಿ ಅವರನ್ನು ಹಿಗ್ಗಾ-ಮುಗ್ಗಾ ಬೈಯ್ದಿದ್ದು. "ನಿಮ್ಮ ಮಾತು ಕೇಳಿ ನಾವು ಕೆಟ್ಟೆವು'' ಎಂದು ಉಗಿದರು. ಜೊತೆಗೆ ಶೆಟ್ಟರ್ ಕೂಡ ಸೇರಿಕೊಂಡರು.

ಅತ್ತ ಆಂಧ್ರ ಪ್ರದೇಶ ಸರ್ಕಾರ ತಿರುಗಿ ಬಿದ್ದಿದೆ. ಇತ್ತ ಬಂಡಾಯದ ಹೋರಾಟವೂ ಪೂರ್ತಿಯಾಗದಿದ್ದರೆ ತಮಗೆ ನೆಲೆಯೇ ಇಲ್ಲದಂತಾಗುತ್ತದೆ ಎಂದು ಹೆದರಿದ ರೆಡ್ಡಿ ಬ್ರದರ್ಸ್ ಸುದೀರ್ಘ ಚಿಂತನೆ ನಡೆಸಿ, ಈಗ ತಾವು ಸೋತರೆ ಸರ್ವನಾಶವಾದಂತೆ ಎಂದು ತೀರ್ಮಾನಿಸಿ ಬಂಡಾಯದ ಹೋರಾಟ ಮುಂದುವರೆಸಲು ನಿರ್ಧರಿಸಿದರು.

ಈ ನಡುವೆ, ಸುಷ್ಮಾ ಸ್ವರಾಜ್ ಮೂಲಕ ಪಕ್ಷದ ಅಧ್ಯಕ್ಷ ರಾಜನಾಥ್ ಸಿಂಗರ ತಲೆತಿರುಗಿಸಲೂ ನೋಡಿದರು. ಈ ಸಂದರ್ಭದಲ್ಲಿ ರಾಜನಾಥ್ ಸಿಂಗ್ ಖಡಕ್ ತೀರ್ಮಾನ ಪ್ರಕಟಿಸದೆ ಮತ್ತೊಂದಿಷ್ಟು ಗೊಂದಲ ಉಂಟು ಮಾಡಿದರು. ಆದರೆ ಕೊನೆ ಕ್ಷಣದಲ್ಲಿ ಆರ್‌ಎಸ್‌ಎಸ್ ಯಡ್ಡಿಗೆ ಸಂಪೂರ್ಣ ಬೆಂಬಲ ಘೋಷಿಸಿದ್ದರಿಂದ ರೆಡ್ಡಿಗಳ ಪರ ಮಾತಾಡಲು ರಾಜನಾಥ್ ಸಿಂಗ್ ಸೇರಿದಂತೆ ಯಾರೂ ಮುಂದೆ ಬರಲಿಲ್ಲ. ಮುಂದೆ ಪಕ್ಷದ ಅಧ್ಯಕ್ಷ ಪಟ್ಟದ ಮೇಲೆ ಕಣ್ಣಿಟ್ಟಿರುವ ರೆಡ್ಡಿಗಳ 'ಅಮ್ಮ' ಸುಷ್ಮಾ ಕೂಡ ಸಂಘಪರಿವಾರದ ತೀರ್ಮಾನವನ್ನು ಧಿಕ್ಕರಿಸಿ ನಿಲ್ಲಲು ಸಿದ್ಧರಿಲ್ಲ. ಪಾಪ ಅದಿರು ಬಗೆದು ದುಡ್ಡಿನ ರಾಶಿ ಹಾಕಿಕೊಂಡಿರುವ ರೆಡ್ಡಿಗಳು ಈಗ ಒಂದು ರೀತಿಯಲ್ಲಿ ಅನಾಥರು. ಈಗ ಅವರ ಬೆಂಬಲಕ್ಕಿರುವವರೆಂದರೆ ದುಡ್ಡಿ ಕೊಟ್ಟು ಕೊಂಡ, 60ಕ್ಕೂ ಹೆಚ್ಚು ಶಾಸಕರು ಮಾತ್ರ! ಒಂದು ವೇಳೆ ಆರ್‌ಎಸ್‌ಎಸ್ ಮಾತು ಕೇಳಿ, ಯಡ್ಡಿಯನ್ನು ಬದಲಾಯಿಸುವುದೇ ಇಲ್ಲ ಎಂದು ಪಕ್ಷದ ನಾಯಕರು ಒಮ್ಮತದಿಂದ ತೀರ್ಮಾನಿಸಿದರೆ, ಇವರಲ್ಲಿ ಹೆಚ್ಚಿನ ಶಾಸಕರು ಇತ್ತ ಜಂಪ್ ಮಾಡುವವರೇ...

● ನೀರದ, ಬೆಂಗಳೂರು



ಸ್ಟೈಟು ಪಡೆದ ಜಯದೇವ ಯಡ್ಡಿಗೆ ಜೈ ಎಂದ

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಎರಡು ವರ್ಷ ಪೂರೈಸುವುದರೊಳಗೆ ಪತನದ ಹಾದಿ ಹಿಡಿದಿದೆ. ಇದಕ್ಕೆ ಮೂಲ ಕಾರಣ ಆರ್‌ಎಸ್‌ಎಸ್!

ಬಿಜೆಪಿಯ ಬೆಳವಣಿಗೆಯ ಪ್ರತಿ ಹಂತದಲ್ಲಿ ಆರ್‌ಎಸ್‌ಎಸ್‌ನ ಶ್ರಮವಿದೆ. ಅಂತೆಯೇ ಅಧಿಕಾರದಲ್ಲಿಯೂ ಹಸ್ತಕ್ಷೇಪ ನಡೆಸುತ್ತಾ ಬಂದಿದೆ. ಸಚಿವ ಸಂಪುಟದಲ್ಲಿ ಯಾರಿರಬೇಕು, ಯಾರಿರಬಾರದು ಎಂದೆಲ್ಲಾ ರಾಜ್ಯ ಆರ್‌ಎಸ್‌ಎಸ್ ನಾಯಕರೇ ತೀರ್ಮಾನಿಸಿದ್ದಾರೆ. ಇಲ್ಲವೇ ಯಡ್ಡಿಯ ತೀರ್ಮಾನಕ್ಕೆ ತಮ್ಮ ಒಪ್ಪಿಗೆ ಸೂಚಿಸಿದ್ದಾರೆ.

ಯಡ್ಡಿ ಸಚಿವ ಸಂಪುಟ ರಚಿಸುವಾಗ ಶೆಟ್ಟರ್‌ರನ್ನು ಕೈಬಿಡುವ ತೀರ್ಮಾನ ತೆಗೆದುಕೊಂಡಾಗಾಗಲೀ, ಸಭಾ ಕಲಾಪಕ್ಕೆ ಹಚ್ಚಿದ ಪಾಪಸಸ್ತ ನೀಡಿದಾಗಲಾಗಲೀ ಅಥವಾ ಚುನಾವಣಾ ಖರ್ಚಿಗೆ ರೆಡ್ಡಿಗಳಿಂದ ಕೋಟಿ ಕೋಟಿ ಪಡೆದುದಾಗಲೀ, ಆಪರೇಷನ್ ಕಮಲ ನಡೆಸಿದಾಗಾಗಲೀ ಆರ್‌ಎಸ್‌ಎಸ್ ಎಚ್ಚರಿಸಿದ್ದರೆ ಈಗ ಈ ದುರ್ಗತಿ ಬರುತ್ತಿರಲಿಲ್ಲ.

ಆದರೆ ಜಾಣ ಯಡ್ಡಿ ಬಹಿರಂಗವಾಗಿ ಆರ್‌ಎಸ್‌ಎಸ್‌ನ್ನು ಹೊಗಳುತ್ತಾ, ತಾವು ನಿಷ್ಠಾವಂತ ಆರೆಸ್ಸೆಸ್ಸಿಗ ಎಂದು ಹೇಳಿಕೊಳ್ಳುತ್ತಾ ಸ್ವಜನಪಕ್ಷಪಾತ ನಡೆಸಿದರು. ಶಿವಮೊಗ್ಗದಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರ ಮಾತನ್ನು ಧಿಕ್ಕರಿಸಿ ತಮ್ಮ ಮಗನನ್ನು ಲೋಕಸಭೆಗೆ ಕಳುಹಿಸಿದರು. ಆಗಲೂ ಆರ್‌ಎಸ್‌ಎಸ್ ಬಾಯಿ ಬಿಡಲಿಲ್ಲ.

ಇದಕ್ಕೆ ಕಾರಣ [illegible] ಆರ್‌ಎಸ್‌ಎಸ್ ಮುಖ್ಯಸ್ಥ ಮೈ.ಚ.ಜಯದೇವ್‌ಗೆ ಮತ್ತು ಕೆಲವರು [illegible]. ಯಡ್ಡಿ ತಮ್ಮ ಮುಖ್ಯಮಂತ್ರಿಯ ಕೋಟಾದಲ್ಲಿ ಜಯದೇವ್‌ಗೆ ಸೈಟು ಕೂಡ ನೀಡಿದ್ದಾರೆ. ಹೀಗಾಗಿ ಯಡ್ಡಿ ಎಂದರೆ ಶೋಭಾಗೆ, ಬಸವರಾಜ ಬೊಮ್ಮಾಯಿಗೆ ಅಥವಾ ಆಚಾರ್ಯರಿಗೆ [illegible] ಆರ್‌ಎಸ್‌ಎಸ್ ನಾಯಕರಿಗೂ ಇಷ್ಟವೇ. ಹೀಗಾಗಿ ಬುಧವಾರ ಸಭೆ ನಡೆಸಿದ ಚೆಡ್ಡಿ ನಾಯಕರು ಯಡ್ಡಿಯನ್ನು ಬದಲಾಯಿಸದಂತೆ ಪಕ್ಷದ ರಾಷ್ಟ್ರೀಯ ನಾಯಕತ್ವಕ್ಕೆ ಸಂದೇಶ ರವಾನಿಸಿದ್ದಾರೆ. ಥೀ... ಈಗ [illegible] ಪಡುತ್ತಿರುವವರು ಈ ಚೆಡ್ಡಿ ಸಿದ್ಧಾಂತವನ್ನು ನಂಬಿರುವ ಜನತೆ!

ಮೂರ್ಖರ ಸಂತೆಯಲ್ಲಿ



ಬಿಜೆಪಿ ಸಂಪೂರ್ಣವಾಗಿ ಮೌಢ್ಯವನ್ನು ನಂಬಿರುವ ಪಕ್ಷ. ಹೀಗಾಗಿ ಪಕ್ಷದಲ್ಲಿನ ಭಿನ್ನಮತೀಯ ಚಟುವಟಿಕೆಗಳೂ ಮೌಢ್ಯಗಳನ್ನೇ ಆಧರಿಸಿವೆ!

ಮೊದಲಿಗೆ ಯಡ್ಡಿಯ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದು ಯಾರು ಎಂದು ನೆನಪಿಸಿಕೊಳ್ಳಿ, ಅದು ಜನಾರ್ದನ ರೆಡ್ಡಿಯಲ್ಲ, ಬದಲಾಗಿ ಅವರ ಸಹೋದರ ಕರುಣಾಕರ ರೆಡ್ಡಿ. ಬೆಂಗಳೂರಿನಲ್ಲಿ ಅರುಣ್ ಜೇಟ್ಲಿ ಜೊತೆಗೆ ಮಾತುಕತೆ ನಡೆಸಿದ್ದೆಲ್ಲಾ ಕರುಣಾಕರ ರೆಡ್ಡಿಯೇ. ಇದಕ್ಕೆ ಕಾರಣ ಜ್ಯೋತಿಷ್ಯ. ಈ ವರ್ಷ ಜನಾರ್ದನ ರೆಡ್ಡಿ ಯಾವ ಕೆಲಸಕ್ಕೆ ಕೈಹಾಕಿದರೂ ಸೋಲುತ್ತಾರೆ ಎಂದು ಯಾವುದೋ ಜ್ಯೋತಿಷಿ ಹೇಳಿದ್ದಾನಂತೆ. ಹೀಗಾಗಿ ಭಿನ್ನಮತೀಯ ಚಟುವಟಿಕೆಗೆ ಮೊದಲು ನಾಯಕತ್ವ ನೀಡಿದ್ದು ಕರುಣಾಕರ ರೆಡ್ಡಿ. ಆದರೂ ಕೊನೆಗೂ ದೆಹಲಿಗೆ ಅಣ್ಣ ಜನಾರ್ದನ ರೆಡ್ಡಿಯೇ ಹೋಗಬೇಕಾಗಿತ್ತು. ಅದಕ್ಕೆ ಕಾರಣ ಕರುಣಾಕರ ರೆಡ್ಡಿಯ ಮನೆಯಲ್ಲಿ ಕಾಣಿಸಿಕೊಂಡ ಮರಿನಾಗರ!

ಕರುಣಾಕರ ರೆಡ್ಡಿಯ ಮನೆಯಲ್ಲಿ ಹಾವು ಕಾಣಿಸಿಕೊಳ್ಳುತ್ತಿದ್ದಂತೆಯೇ ಮತ್ತೆ ರೆಡ್ಡಿ ಬ್ರದರ್ಸ್ ಜ್ಯೋತಿಷಿಯ ಮೊರೆಹೋದರು. ಆಗ "ನೀವು ದೂರ ಪ್ರಯಾಣ ಮಾಡಬೇಡಿ, ಜನಾರ್ದನನೇ ದೆಹಲಿಗೆ ಹೋಗಲಿ'' ಎಂದು ಜ್ಯೋತಿಷಿ ಕರುಣಾಕರ ರೆಡ್ಡಿಗೆ ಹೇಳಿದರಂತೆ. ಹೀಗಾಗಿ ಈಗ ದೆಹಲಿಯಲ್ಲಿ ಜನಾರ್ದನ ರೆಡ್ಡಿ ಬಂಡಾಯದ ಬಾವುಟ ಹಿಡಿದು ಓಡಾಡುತ್ತಿದ್ದಾರೆ.

ಯಡ್ಡಿ ಸುಬ್ರಮಣ್ಯಕ್ಕೆ ಹೋಗಿದ್ದು, ಮಾರನೇ ದಿನವೇ ಕರುಣಾಕರ ರೆಡ್ಡಿ ಮನೆಯಲ್ಲಿ ಹಾವು ಕಾಣಿಸಿಕೊಂಡಿದ್ದು ಎಲ್ಲ ದೊಡ್ಡ ಸುದ್ದಿಯೇ ಆಗಿದೆ. ಇನ್ನು ಮುಜರಾಯಿ ಖಾತೆಗೆ ಸಂಬಂಧಿಸಿದ ಮೌಢ್ಯ ಮತ್ತೆ ಈ ಸಂದರ್ಭದಲ್ಲಿ ಸುದ್ದಿ ಮಾಡಿದೆ.

ಈ ಖಾತೆ ಹೊಂದಿದವರು ಶಾಪಗ್ರಸ್ತರಾಗುತ್ತಾರೆ, ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೌಢ್ಯದ ಮಾತುಗಳು ಕೇಳಿಬರುತ್ತಲೇ ಇವೆ. ಇದನ್ನೇ ನಂಬಿದ ಯಡ್ಡಿ ಭಿನ್ನಮತೀಯ ಚಟುವಟಿಕೆ ಭುಗಿಲೇಳುತ್ತಿದ್ದಂತೆಯೇ ತಮ್ಮ ಬಳಿಯಿದ್ದ ಈ ಶಾಪಗ್ರಸ್ತ ಖಾತೆಯನ್ನು ಆಚಾರ್ಯರ ಹೆಗಲಿಗೆ ಏರಿಸಿದ್ದಾರೆ

ಈ ಭಿನ್ನಮತೀಯ ಚಟುವಟಿಕೆ ಜ್ಯೋತಿಷಿಗಳ ಪಾಲಿಗೆ ಹಬ್ಬದ ವಾತಾವರಣ ಮೂಡಿಸಿದೆ. ಎಲ್ಲರೂ ತಮಗೆ ತಿಳಿದಂತೆ ಜ್ಯೋತಿಷ್ಯ ಹೇಳುವವರೇ... ಅವುಗಳನ್ನು ಪ್ರಕಟಿಸಲು, ಅವರನ್ನು ಸಂದರ್ಶಿಸಲು ನಮ್ಮ ಮಾಧ್ಯಮಗಳೂ ತುದಿಗಾಲಲ್ಲಿ ನಿಂತಿವೆ. ವೈಜ್ಞಾನಿಕ ಚಿಂತನೆ ಪೈಪೋಟಿಗೆ ಬಿದ್ದಿರುವುದು ದೊಡ್ಡ ದುರಂತ! ಈಗ ವೈಚಾರಿಕತೆ ಬಗ್ಗೆ ಮಾತನಾಡಿದರೆ [illegible] ಖಂಡಿತ. ನಾವೆಂತಹ ಮೂರ್ಖರ ನಾಡಿನಲ್ಲಿದ್ದೇವೆ, ಯೋಚಿಸಿದರೇ ಭಯವಾಗುತ್ತದೆ.

ಒಳ್ಳೆ ಮಾತನಾಡಿ ಸಗಣಿ ತಿನ್ನಿಸಬಹುದು ಗೊತ್ತುಂಟಿ

ಥೂತ್ತೇರಿ ► ಯಾಹೂ

ಅಧಿಕಾರದ ಅನುಭವವಿಲ್ಲದೆ ಆರೇಳು ತಿಂಗಳಿಂದ ಆರಾಮವಾಗಿ ಕಾಲಹಾಕಿದ್ದ ಕರ್ನಾಟಕದ ಎಡೂರಪ್ಪನ ಸಂಪುಟದ ಗುಂಪಿಗೆ ಬುದ್ಧಿ ಹೇಳಲು ಬಂದಿದ್ದ ಗುಜರಾತಿನ ಮೋದಿಗೆ ಹಂದಿಜ್ವರ ಕಾಣಿಸಿಕೊಂಡಿದೆಯಂತಲ್ಲಾ! ಹಂದಿ ಜ್ವರದ ಹೊಡೆತಕ್ಕೆ ಅಂಗಾತ ಬಿದ್ದಿರುವ ಮೋದಿಗೆ ಮೊದಲೇ ಮುಸ್ಲಿಮರನ್ನು ಕಂಡರಾಗುವುದಿಲ್ಲ. ಹೇಳಿಕೇಳಿ ಮೈಸೂರಿನ ಮತಾಂಧ ಚೆಡ್ಡಿಗಳು ಮುಸ್ಲಿಮರ ಮಸೀದಿ ಆವರಣಕ್ಕೆ ಹತ್ಯೆಗೊಂಡ ಹಂದಿಯನ್ನು ಎಸೆದುಬಂದಿದ್ದವು. ಇದರಿಂದ ಸಿಟ್ಟುಗೊಂಡ ಮುಸ್ಲಿಮರು ಹಂದಿ ಜ್ವರದ ವೈರಸ್ ನೇರ ಹೋಗಿ ಮೋದಿಯನ್ನು ತಾಕುವಂತೆ ಏನಾದರೂ ಮಾಡಿದ್ದಾರೆ ಎಂದು ಕೆಲ ಮಂದಮತಿಗಳು ಆಲೋಚಿಸುತ್ತಿವೆಯಂತಲ್ಲಾ. ಮೈಸೂರಿಗೆ ಬಂದಿದ್ದ ಮೋದಿಗೆ ಹಂದಿ ಜ್ವರ ಬರುವುದು, ರೆಡ್ಡಿ ಮನೆಗೆ ಹಾವು ಬರುವುದು, ಕುಕ್ಕೆ ಸುಬ್ರಹ್ಮಣ್ಯದ ಪುರೋಹಿತರಿಗೆ ಎಡೂರಪ್ಪ ತೊಂಭತ್ತು ಕೆ.ಜಿ. ಒಣದ್ರಾಕ್ಷಿ ಕೊಟ್ಟು ಸಮಾಧಾನಗೊಳ್ಳದೆ ಮುಜರಾಯಿ ಖಾತೆಯನ್ನು ಆಚಾರಿ ಅಡಿಗೆ ತಳ್ಳುವುದು, ಇವೆಲ್ಲಾ ಗಾಂಧಿನಗರದ ಪಿಂಜರಾಪೋಲು ನಿರ್ದೇಶಕರಿಗೆ ನೂರು ಗಂಟೆ ಓಡುವ ಸಿನಿಮಾ ಸಾಮಗ್ರಿಯನ್ನು ಬಾಚಿವೆಯಂತಲ್ಲಾ, ಥೂತ್ತೇರಿ!

******

ಬೃಹತ್ ಜೆಸಿಬಿ ಯಂತ್ರಗಳಂತೆ ಕಾಣುವ ಜನ, ಕರುಣಾ, ಸೋಮರೆಡ್ಡಿಗಳು ಕರ್ನಾಟಕದ ಅದಿರನ್ನು ಸಂಪೂರ್ಣ ಗೋರಿ ಅದರ ಆದಾಯದ ಒಂದು ಪರ್ಸೆಂಟನಲ್ಲಿ ಎಡೂರಪ್ಪನ ಸರ್ಕಾರ ಸ್ಥಾಪಿಸಿ, ರೆವಿನ್ಯೂ, ಪ್ರವಾಸ, ಆರೋಗ್ಯ ಖಾತೆಯನ್ನು ಲಪಟಾಯಿಸಿದ್ದೂ ಅಲ್ಲದೆ, ಅನಾಮತ್ ಯಡ್ಡಿಯ ಕುತ್ತಿಗೆಗೇ ಕೈಹಾಕಿರುವ ಸಂದರ್ಭ ನೋಡಿದ ಜ್ಞಾನಪೀಠಿಗಳಾದ ಅನಂತಮೂರ್ತಿಗಳು "ಎಡೂರಪ್ಪ ನೀವು ಹೆದರಬೇಡಿ. ನಿಮಗೆ ನಮ್ಮ ನೈತಿಕ ಬೆಂಬಲವಿದೆ" ಎಂದು ಧೈರ್ಯ ತುಂಬಿದ್ದಾರಂತಲ್ಲಾ. ಈ ನೈತಿಕ ಎಂಬ ಪದವೇ ಎಡೂರಪ್ಪನಿಗೆ ಹೊಸದಾಗಿ ಕಂಡು, ಕೇವಲ ಒಂದಡಿ ಅಂತರದಲ್ಲೇ ಅದೂ ಎಡೂರಪ್ಪನ ಎಡಗಿವಿ ಸಮೀಪ ಸದಾ ನಿಂತಿರುವ ವಕೀಲನೊಬ್ಬನ ಕಡೆ ನೋಡಲಾಗಿ, ಸದರಿ ವಕೀಲ "ಅನಂತಮೂರ್ತಿ ಮಾತನ್ನ ನಂಬಬೇಡಿ ಸಾರ್. ಆತ ಆರೆಸೆಸ್ ದ್ವೇಷಿ. ನಾಳೆ ರೆಡ್ಡಿಗಳ ಸಭೆಗೂ ಹೋಗಿಬಿಡಬಲ್ಲ ಅಪಾಯಕಾರಿ" ಎಂದುಬಿಟ್ಟನಂತಲ್ಲಾ. ಇದರಿಂದ ಎಚ್ಚೆತ್ತುಕೊಂಡ ಯಡ್ಡಿ ಮರುದಿನವೇ "ನನಗೆ ಮತ್ತು ರೆಡ್ಡಿ ಸಹೋದರರಿಗೆ ಯಾವ ಮನಸ್ತಾಪವೂ ಇಲ್ಲ, ಕರ್ನಾಟಕದ ಅಭಿವೃದ್ಧಿಗೆ ನಾವೆಲ್ಲಾ ಒಟ್ಟಾಗಿ ಹೋರಾಡಿ ಮಡಿಯುತ್ತೇವೆ" ಎಂದರಂತಲ್ಲಾ, ಥೂತ್ತೇರಿ!

******

ಬಿಜೆಪಿ ಪಾರ್ಟಿ ಪಿಂಜರಾಪೋಲು ಪಾರ್ಟಿಯಾಗುತ್ತಿರುವ ಸಂದರ್ಭದಲ್ಲಿ ಅದರ ಅಪರೂಪದ ಅಧ್ಯಕ್ಷರಾದ ಸದಾನಂದಗೌಡರನ್ನು ಮಾತನಾಡಿಸಿ ಒಂದಿಷ್ಟು ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆನ್ನಿಸಿ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್‌ಟೋನ್: "ತ್ರಿಮೂರ್ತಿ ರೂಪಾ ದತ್ತಾತ್ರೇಯ, ತ್ರಿಗುಣಾತೀತ ದತ್ತಾತ್ರೇಯ....."

"ಹಲೋ ಯಾರು?"

"ನಾನು ಸಾರ್ ಯಾಹು. ನಮಸ್ಕಾರ."

"ನಮಸ್ಕಾರ, ಹೇಳಿ ಯಾಹು ಅವರೆ."

"ನಿಮ್ಮ ಫೋನಿನ ರಿಂಗ್‌ಟೋನ್ ಕೇಳಿ ಒಂದು ಪ್ರಶ್ನೆ ಹೊಳೀತು ಸಾರ್. ದತ್ತಪೀಠದ ಗುಹೆ ಕಾಮಗಾರಿಗೆ ಸ್ಟೇ ಸಿಕ್ಕಿದೆಯಂತಲ್ಲಾ."

"ಸ್ಟೇ ವಿಷಯ ಬಿಡಿ, ನೀವು ಎಲ್ಲಿದ್ದೀರಿ?"

"ನಮ್ಮ ಪತ್ರಿಕೆ ಆಫೀಸಲ್ಲಿ."

"ನೀವು ಅಲ್ಲಿಂದ ಹೊರಬರದಂತೆ ಸ್ಟೇ ತರಲಾ."

"ಬೇಡಿ ಸಾರ್, ಸಂಜೆ ಮನಿಗೆ ಹೋಗ್ಬೇಬೇಕು."

"ಒಂದು ಕೆಲಸಕ್ಕೆ ಸ್ಟೇ ತರುವುದು ಮತ್ತೆ ತೆರವುಗೊಳಿಸುವುದು ಇದು ಕೋರ್ಟಿನ ಪ್ರಕ್ರಿಯೆಗಳು. ನಾವು ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ."

"ಆದ್ರೆ ಇಡೀ ಕರ್ನಾಟಕದ ಜನಗಳ ತಲೆ ಕೆಡಿಸಿದ್ದೀರಲ್ಲಾ ಸಾರ್?"

"ಯಂತ ಹೇಳುವುದು ನೀವು?"

"ಬಿಜೆಪಿ ಜಗಳದಿಂದ ಕರ್ನಾಟಕ ರೋಸಿದೆ ಸಾರ್."

"ರೋಸಯ್ಯನ ರಾಜ್ಯದಲ್ಲಿ ರೋಸಿ ಹೋಗಿರಬಹುದು. ನಮ್ಮಲ್ಲಿ ಎಲ್ಲ ಚಂದವುಂಟು."

"ಏನು ಚೆನ್ನಾಗಿದೆ ಸಾರ್. ರೆಡ್ಡಿ ಶಾಸಕರನ್ನು ಕರಕಂಡೋಗಿ ಹೈದರಾಬಾದಿನ ರೆಸಾರ್ಟಿನಲ್ಲಿಟ್ಟವುನೆ?"

"ಅದರಲ್ಲಿ ತಪ್ಪೇನು? ಪ್ರವಾಹದಲ್ಲಿ ದುಡಿದ ಶಾಸಕರಿಗೆ ವಿಶ್ರಾಂತಿ ಬೇಡವಾ?"

"ವಿಶ್ರಾಂತಿಗೆ ಇಲ್ಲೆ ಜಾಗ ಇಲ್ಲವಾ ಸಾರ್? ನಂದಿ ಹಿಲ್ಸ್, ಸಂಜಯ್ ಖಾನ್ ರೆಸಾರ್ಟ್, ಕೆಮ್ಮಣ್ಣುಗುಂಡಿ... ನಮ್ಮಲ್ಲೆ ಬೇಕಾದಷ್ಟಿವೆಯಲ್ಲಾ."

"ಇರಬಹುದು. ನಾನು ಇಲ್ಲ ಅಂತ ಹೇಳಲಿಲ್ಲ, ಆದರೆ ನಮ್ಮಲ್ಲಿ ಜನ ಹೋಗಿ ತೊಂದರೆ ಕೊಡುವುದುಂಟು. ಅದಕ್ಕಾಗಿ ನಮ್ಮ ಶಾಸಕರು ಬೇರೆ ಕಡೆ ಹೋದರೆ ಅದನ್ನು ಭಿನ್ನಮತ ಅಂತ ಹೇಳುವುದಾಗಲಿ, ಗುಂಪುಗಾರಿಕೆ ಅಂತ ಹೀಗಳೆಯುವುದನ್ನಾಗಲಿ ನಾನು ಒಪ್ಪುವುದಿಲ್ಲ."

"ಹೋಗ್ಲಿ, ಬಿಜೆಪಿಲಿ ಜಗಳ ಇಲ್ಲವ?"

"ಜಗಳ ಅಂತ ಯಾರು ಹೇಳಿದ್ದು ನಿಮಗೆ?"

"ಮತ್ತೆ ರೆಡ್ಡಿ, ಎಡೂರಪ್ಪನ್ನ ಕಂಸ ಅಂದವುರೆ. ಕೃಷ್ಣ ಕಂಸನ ವಧೆ ಮಾಡಿದಂಗೆ ಮಾಡ್ತಿವಿ ಅಂದವುನಲ್ಲಾ?"

"ಅದೇ ನೀವು ತಪ್ಪು ತಿಳಿದದ್ದು. ನಮ್ಮ ಪಾರ್ಟಿಯಲ್ಲಿ ರಾಮ, ಕೃಷ್ಣ ಶಿವ ಇದ್ದಾರೆಯೇ ಹೊರತು ಕಂಸ ಯಾರೂ ಇಲ್ಲ, ಇದ್ದರೆ ಬೇರೆ ಪಾರ್ಟಿಯಲ್ಲಿರಬಹುದು ಅಷ್ಟೆ."

"ನಿಮ್ಮ ಮಾತನ್ನ ಕೇಳಿದ್ರೆ ಬಿಜೆಪಿ ಪಾರ್ಟಿಲಿ ಜಗಳ ಇಲ್ಲ, ಭಿನ್ನಮತ ಇಲ್ಲ, ಏನೂ ಇಲ್ಲದ ಸಜ್ಜನರ ಪಾರ್ಟಿ ಅಂತ ಆಯ್ತಲ್ಲ ಸಾರ್?"

"ಅದೌದು. ಕರ್ನಾಟಕವನ್ನು ಚಂದ ಮಾಡಿ ಕಟ್ಟುವಂತಹ ಕಾರ್ಯಕರ್ತರ ಪಡೆಯಿದೆಯೇ ಹೊರತು ಜಗಳ ಆಡುವಂತಹವರು ನಮ್ಮಲ್ಲಿ ಯಾರೂ ಇಲ್ಲ."

"ನಿಮ್ಮ ಇಂತಹ ಮಾತನ್ನ ಕೇಳಿದ್ರೆ, ಕರ್ನಾಟಕದ ಜನ ನಗುತರೆ ಅನ್ನಲ್ಲವಾ ಸಾರ್?"

"ಜನ ನಗಾಡುವಂತೆ ಮಾತನಾಡಲಿಕ್ಕೆ ನಾನೇನು ಯಕ್ಷಗಾನದ ಮಿಜಾರು ಅಣ್ಣಪ್ಪನ, ಅಥವ ನಯನಕುಮಾರನ?"

"ಇಬ್ಬರೂ ಅಲ್ಲ ಸಾರ್. ನಿಮ್ಮನ್ನು ನೋಡಿದ ಕೂಡ್ಲೆ ನಾವು ಕಳಕೊಂಡ ನರಸಿಂಹರಾಜು ನೆನಪು ಬರುತ್ತೆ."

"ಅಂತ ಒಳ್ಳೆ ಕಲಾವಿದರಿಗೆ ಓಲಿಸಿದ್ದಕ್ಕೆ ಥ್ಯಾಂಕ್ಸ್."

"ನಿಜಕ್ಕೂ ನಾವೇ ನಿಮಗೆ ಥ್ಯಾಂಕ್ಸ್ ಹೇಳಬೇಕು ಸಾರ್. ತಮ್ಮ ಅಧ್ಯಕ್ಷಗಿರಿಲಿ ನಿಮ್ಮ ಪಾರ್ಟಿ ಇಂತಹ ಹೀನಾಯಸ್ಥಿತಿ ತಲುಪಿದ್ರೂ ಅಷ್ಟೂ ಹಲ್ಲು ಕಾಣಂಗೆ ನಗ್ತಿರಲ್ಲ ಸಾರ್."

"ಯಾವುದೇ ಸಮಸ್ಯೆಯನ್ನು ನಗುತ್ತ ಬಗೆಹರಿಸಿಕೊಳ್ಳಬೇಕು. ಸಿಟ್ಟಿನಿಂದ ಯಾವುದೂ ಆಗುವುದಿಲ್ಲ ಗೊತ್ತುಂಟ. ಒಬ್ಬ ಮನುಷ್ಯನಿಗೆ ಒಳ್ಳೆ ಮಾತಿನಿಂದ ನಗಿಸುತ್ತ ಸಗಣಿ ತಿನ್ನಿಸಿಬಿಡಬಹುದು. ಅದೇ ಸಿಟ್ಟಿನಿಂದ ಜೋರು ಮಾಡಿ ಸಿಹಿ ತಿನ್ನಿಸುವುದು ಕಷ್ಟ ಅನ್ನುವುದು ನನ್ನ ಲೆಕ್ಕ."

"ಈಗ ನಿಮ್ಮಲ್ಲಿ ಮಡಕಂಡಿರೊ ಯಾವ ಬಣದ ಲೀಡ್ರಿಗೆ ಸಗಣಿ ತಿನ್ನಸ್ತಿರಿ? ಇನ್ಯಾವ ಲೀಡ್ರಿಗೆ ಸಿಹಿ ತಿನ್ನಿಸ್ತಿರಿ ಸಾರ್?"

"ಅದನ್ನ ಹೇಳ್ಳಿಕ್ಕೆ ಬರುವುದಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಯಾರಾದರೂ ಒಬ್ಬ ಏನನ್ನಾದರೂ ತಿನ್ನಲೇಬೇಕಿದೆ."

"ಅಲ್ಲಿಗೆ ನಿಮ್ಮ ಪಾರ್ಟಿ ಭಿನ್ನಮತವನ್ನ ಒಪ್ಗಂಡ್ರಲ್ಲ ಸಾರ್?"

"ಒಪ್ಪಿಕೊಂಡದ್ದೆಲ್ಲಿ, ಹಾಗೆ ಮಾತಿಗೆ ಹೇಳಿದ್ದು ಗೊತ್ತುಂಟಾ."

"ಥೂತ್ತೇರಿ!!!"



ಬಾಗಲಕೋಟೆ ಚರಂತಿಮಠನ ಚೆಲ್ಲಾಟ ಪರಿಹಾರ ಕೇಳಿದರೆ ಪನಿಷ್‌ಮೆಂಟ್

ನೆರೆ ಸಂತ್ರಸ್ತರು ಹಾಗೂಹೀಗೂ ಬದುಕು ಕಟ್ಟಿಕೊಳ್ಳಲು ಒದ್ದಾಡುತ್ತಿದ್ದರೆ, ಬಾಗಲಕೋಟೆ ಶಾಸಕ ಚರಂತಿಮಠ ಪರಿಹಾರ ಕೇಳಿದ ಹಿಂದುಳಿದ, ದಲಿತ ಜನರ ಮೇಲೆ ಕೇಸು ಹಾಕಿಸುವ ಹೀನ ಕೆಲಸ ಮಾಡಿದ್ದಾನೆ.

ಹುನಗುಂದ ತಾಲ್ಲೂಕಿನ, ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಗೆ ಬರುವ ಹಿರೇಮಳಗಾಂವಿ ಗ್ರಾಮ ನೆರೆಯಿಂದ ಹೆಚ್ಚೂ ಕಡಿಮೆ ನಿರ್ನಾಮಗೊಂಡಿದೆ. ಅಲ್ಲಿ ಚರಂತಿ ಮಠನ ಚೇಲಾ ಶಿವಕುಮಾರ ಸ್ವಾಮೀಜಿ ಎಂಬ ಕಳ್ಳ ಸ್ವಾಮಿ ಗಂಜಿಕೇಂದ್ರಕ್ಕೆ ಸರ್ಕಾರ ಕೊಡಮಾಡಿದ ಅಕ್ಕಿ, ಬೇಳೆಗಳನ್ನು ತನ್ನ ಮಠದಲ್ಲಿ ಸಂಗ್ರಹಿಸಿಟ್ಟುಕೊಂಡ. ದಲಿತ ಕೇರಿಯವರು ಅಕ್ಕಿ, ಬೇಳೆ ನೀಡುವಂತೆ ಕೇಳಿದರೆ, ಈ ಕುಬ್ಜಸ್ವಾಮಿ ಜಾತಿನಿಂದನೆ ಮಾಡಿದ್ದಲ್ಲದೇ, ಹಲ್ಲೆ ಮಾಡಿ ಕಳುಹಿಸಿದ್ದಾನೆ. ತಾನು ಸದ್ಯದಲ್ಲೇ ನಡೆಸಲಿರುವ ಸಾಮೂಹಿಕ ವಿವಾಹಕ್ಕೆ ಈ ಅಕ್ಕಿಬೇಳೆ ಬೇಕಂತೆ ಈ ಸ್ವಾಮಿಗೆ!

ಮೂರು ತಿಂಗಳ ಹಿಂದೆ ಬೇವಿನಮಟ್ಟಿಯ ಜನರು ಈ ಸ್ವಾಮಿಯನ್ನು ತಮ್ಮೂರಿನಿಂದ ಓಡಿಸಿದ್ದರು. ಆಗ ಹಿರೇಮಳಗಾಂವಿಗೆ ಬಂದು ಟೆಂಟು ಹಾಕಿದ ಸ್ವಾಮಿ ಇಲ್ಲಿನ ದಲಿತರು ಮತ್ತು ಕುರುಬರ ನಡುವೆ ವೈಮನಸ್ಸು ಬಿತ್ತಿ... ಇದಕ್ಕೆ ಚರಂತಿಮಠನ ಹಿಂಬಾಲಕನಂತಿರುವ ಪಿಎಸ್ಐ ಶ್ರೀಶೈಲ ಗಾಬಿ ಕೂಡಾ ಕೈ ಜೋಡಿಸುತ್ತಿದ್ದಾನೆ.


ಚರಂತಿಮಠ

ಚರಂತಿಮಠನ ನಿರ್ದೇಶನದಂತೆ ಈಗ ಹಲ್ಲೆಗೊಳಗಾದ ದಲಿತರ ಮೇಲೇ ಪಿಎಸ್ಐ ಶ್ರೀಶೈಲ ಐಪಿಸಿ 307 ಕಲಂ ಅಡಿ ದೂರು ದಾಖಲಿಸಿಕೊಂಡು ಬಂಧಿಸಲು ಚಾರ್ಜ್‌ಶೀಟು ರೆಡಿ ಮಾಡ್ತಾ ಇದ್ದಾನೆ.

ಹೀರೆಮಾಗಿ ಗ್ರಾಮದಲ್ಲಿ ಶಾಸಕ ಚರಂತಿಮಠ ಒದೆ ತಿಂದಿದ್ದನ್ನು 'ಲಂಕೇಶ್' ಬರೆದಿತ್ತು. ಈಗ ಅಮೀನಗಡ ಪಿಎಸ್ಐ ಪಾಲಾಕ್ಷಿಗೆ ಸೂಚನೆ ಕೊಟ್ಟ ಚರಂತಿಮಠ, ತನ್ನನ್ನು 'ಒದ್ದು ಓಡಿಸಿದ ನೆರೆ ಸಂತ್ರಸ್ತರನ್ನು 'ಸರಿಯಾಗಿ' ನೋಡಿಕೊಳ್ಳುವಂತೆ ಹುಕುಂ ಚಲಾಯಿಸಿದ್ದಾನೆ. ಯಾವ್ಯಾವುದೋ ನೆಪ ಹೂಡಿದ ಪಾಲಾಕ್ಷ ಹೀರೆಮಾಗಿ ಗ್ರಾಮದ 16 ಜನರ ಮೇಲೆ ಕೇಸು ಜಡಿದಿದ್ದಾನೆ. ಈ ಹದಿನಾರು ಜನರಲ್ಲಿ ದೋಣಿ ಮುಳುಗಿ ಸತ್ತ ಐವರ ಕುಟುಂಬದವರೂ ಇದ್ದಾರೆ.

ಈ ಎಲ್ಲದರ ವಿರುದ್ಧ ಬಾಗಲಕೋಟೆಯ ಪ್ರಗತಿಪರ ಸಂಘಟನೆಗಳು ಪ್ರತಿಭಟನೆಗೆ ತಯಾರಾದವು. ತನ್ನ ಸಂಸ್ಥೆಯ ದಲಿತ ನೌಕರರನ್ನು ಬಳಸಿಕೊಂಡ ಶಾಸಕ ಚರಂತಿಮಠ 'ಭಾರತೀಯ ದಲಿತ ಸೇವಾಸಮಿತಿ' ಎಂಬ ಹೆಸರಲ್ಲಿ ತನ್ನ ಪರ ಪ್ರಚಾರ ಮಾಡಿಸಿಕೊಂಡ. ಕಳೆದ 28ರಂದು ನಡೆದು ಪ್ರಗತಿಪರರ ಪ್ರತಿಭಟನೆಯನ್ನು ನಿಲ್ಲಿಸಲು ಡಿವೈಎಸ್ಪಿ ಪಾಟೀಲ್ ಮೂಲಕ ಯತ್ನಿಸಿ ವಿಫಲನಾದ ಚರಂತಿಮಠ ಈಗ ಪ್ರಗತಿಪರರ ಒಕ್ಕೂಟವನ್ನು ಒಡೆಯಲು ಯತ್ನಿಸುತ್ತಿದ್ದಾನೆ. ಪರಶುರಾಮ ಬೆಂಡಿಗೆ, ನಾರಾಯಣಿಗಳಂತಹ ದಲಿತರನ್ನು ಗುರಾಣಿಯನ್ನಾಗಿ ಬಳಸಿಕೊಳ್ಳುತ್ತಿರುವ ಚರಂತಿಮಠ ಬಡ ದಲಿತರನ್ನು ಜೈಲಿಗೆ ಹಾಕಿಸುವುದರಲ್ಲಿ ನಿರತನಾಗಿದ್ದಾನೆ.

ಪರಿಹಾರ ಕೇಳಿದ ತಪ್ಪಿಗೆ ಜೈಲ್ ಪನಿಷ್‌ಮೆಂಟ್ ಕೊಡುತ್ತಿರುವ ಈ ಶಾಸಕನಿಗೆ ಜನರೇ ಬುದ್ಧಿ ಹೇಳಬೇಕಾಗಿದೆ.

-ಮೇಘರಾಜ

ಕೊಳ್ಳೇಗಾಲ: ತಾ.ಪಂ.ನಲ್ಲಿ ಶ್ರೀನಿವಾಸನೆಂಬ ಭೂಪಂ!

ಕೊಳ್ಳೇಗಾಲ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಹಣಾಧಿಕಾರಿ (ಇ.ಒ) ಎಚ್. ಶ್ರೀನಿವಾಸ್‌ಗೆ ನುಂಗುವುದನ್ನು ಬಿಟ್ಟರೆ ಮತ್ತೇನೂ ಗೊತ್ತಿಲ್ಲ. ಕೊಳ್ಳೆಗಾಲ, ಹನೂರು ಕ್ಷೇತ್ರಗಳ ವ್ಯಾಪ್ತಿಯ 37 ಗ್ರಾಮ ಪಂಚಾಯತ್‌ಗಳನ್ನು ಕುಲಗೆಡಿಸುತ್ತಿರುವ ಈತ ಕಳ್ಳ ಬಿಲ್ ಸೃಷ್ಟಿಸಲೊಲ್ಲದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಸಸ್ಪೆಂಡ್ ಮಾಡಿ ಒಗೆಯುತ್ತಾನೆ. ಕೊಳ್ಳೇಗಾಲ, ಹನೂರು ಶಾಸಕರಾದ ನರೇಂದ್ರಸ್ವಾಮಿ ಮತ್ತು ಜಿ.ಎನ್. ನಂಜುಂಡಸ್ವಾಮಿಗಳಿಗೆ ಅದೇನು ಮೋಡಿ ಮಾಡಿದ್ದಾನೋ ಏನೋ? ಶಾಸಕರೀರ್ವರು ಈತನ ತಂಟೆಗೇ ಬರಲ್ಲ. ಚಾಮರಾಜನಗರ ನಗರ ಜಿ.ಪಂ.ಸಿಇಓ ಸುಂದರ್‌ನಾಯಕ್ ಈತನ ವಿರುದ್ಧ ದೂರೊಂದನ್ನು ಪರಿಶೀಲಿಸಿದರೆ ಸಾಕು, ಎಚ್. ಶ್ರೀನಿವಾಸ್ ಮನೆಯಲ್ಲಿ ಕೂಡಬೇಕಾಗುತ್ತದೆ. ಸಮಗ್ರ ಬಂಜರು ಭೂಮಿ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, SEP, TSP, ಸ್ಟಾಂಪ್ ಡ್ಯೂಟಿ ಹಾಗೂ 12ನೇ ಹಣಕಾಸು ಯೋಜನೆಯ ಕಾಮಗಾರಿ-ಹೀಗೆ ಎಲ್ಲೆಂದರಲ್ಲಿ ಗಬಕ್ ಗಬಕ್ ನುಂಗುವ ಶ್ರೀನಿವಾಸ್, ತನಗೆ ಇಂತಹ ನುಂಗಾಟದಲ್ಲಿ ಸಹಕರಿಸದ ಮೂವರು ಗ್ರಾ.ಪಂ. ಕಾರ್ಯದರ್ಶಿಗಳನ್ನು ಸಸ್ಪೆಂಡ್ ಮಾಡಿ ಕೂತಿದ್ದಾನೆ. ಉಳಿದವರಿಗೆಲ್ಲ ಈ ಸಸ್ಪೆನ್ಸನ್ ಬೆದರಿಕೆ ಒಡ್ಡಿ ಕಳ್ಳ ಬಿಲ್ಲುಗಳನ್ನು ಸೃಷ್ಟಿಸುತ್ತಿದ್ದಾನೆ. ಸತ್ತೇಗಾಲ ಗ್ರಾ.ಪಂ.ನ ಶಿವಮಲ್ಲು, ಸಿದ್ದಯ್ಯನಪುರ ಗ್ರಾ.ಪಂ.ನ ಪುಟ್ಟರಾಜು ಹಾಗೂ ಧನಗೆರೆ ಗ್ರಾ.ಪಂ.ನ ಉಷಾ ಈ ಕಾರ್ಯದರ್ಶಿಗಳು ಶ್ರೀವಾಸನ ಸಂಚಿಗೆ ಬಲಿಯಾಗಿ ಒದ್ದಾಡುತ್ತಿದ್ದಾರೆ. ಶ್ರೀನಿವಾಸನ ಕಳ್ಳಾಟಕ್ಕೆ ಸಹಕರಿಸಲು ತಾ.ಪಂ.ನ ಅಧಿಕಾರಿಗಳಾದ ಧನರಾಜ್ ಮತ್ತು ಸಿದ್ದಪ್ಪ ಸದಾ ತಯಾರು. ಶ್ರೀನಿವಾಸನ ಕಮಿಷನ್ ಎತ್ತುವಳಿ ಕೆಲಸವನ್ನು ಈ ಇಬ್ಬರು ಅಧಿಕಾರಿಗಳು ನೋಡಿಕೊಳ್ಳುತ್ತಾರೆ.


ಶ್ರೀನಿವಾಸ್

ಆಶ್ರಯ ಮನೆಗಳಲ್ಲೂ ಗೋಲ್‌ಮಾಲ್ ಮಾಡುತ್ತಾನೆ ಶ್ರೀನಿವಾಸ. ಉದ್ಯೋಗ ಖಾತ್ರಿ ಯೋಜನೆ ವಿವರಗಳನ್ನು ಆನ್‌ಲೈನ್ ಮೂಲಕ ಸರ್ಕಾರಕ್ಕೆ ಸಲ್ಲಿಸಲು ಕಂಪ್ಯೂಟರ್ ವಿಭಾಗದವರು ವರದಿ ತಯಾರಿಸಿದಾಗ ಶ್ರೀನಿವಾಸನ ಅಪರಾತಪರಾಗಳು ಬಯಲಾದವು. ಆದರೆ ಧೂರ್ತ ಶ್ರೀನಿವಾಸ್ ಆನ್‌ಲೈನ್ ವಿಭಾಗದವರ ಮೇಲೆ ಸೇಡು ತೀರಿಸಿಕೊಂಡು, ಆ ವಿಭಾಗದ ಮುಖ್ಯಸ್ಥೆ ಸಾಕಮ್ಮ ಎಂಬುವವರನ್ನು ಕೆಲಸದಿಂದ ಏಕಾಏಕಿ ತೆಗೆದುಹಾಕಿದ್ದ. ಕೊನೆಗೆ ತಾ.ಪಂ. ಸದಸ್ಯರೆಲ್ಲ ಸಾಕಮ್ಮರ ಪರವಾಗಿ ನಿಂತು, ಶ್ರೀನಿವಾಸನಿಗೆ ಉಗಿದು ಬುದ್ಧಿ ಹೇಳಿ, ಮತ್ತೆ ಸಾಕಮ್ಮರಿಗೆ ಕೆಲಸ ಸಿಗುವಂತೆ ಮಾಡಬೇಕಾಯ್ತು. ಹಿಂದೆ ಗುಂಡ್ಲುಪೇಟೆಯ ಅರಣ್ಯ ಇಲಾಖೆಯಲ್ಲಿ ಎಸಿಎಫ್ ಆಗಿದ್ದ ಶ್ರೀನಿವಾಸ ಅಲ್ಲಿನ ಶಾಸಕ ಎಚ್.ಎಸ್. ಮಹದೇವಪ್ರಸಾದರ ಕೆಂಗಣ್ಣಿಗೆ ಗುರಿಯಾಗಿ ಇಲ್ಲಿಗೆ ವರ್ಗ ಆಗಿ ಬಂದವನು. ಈಗ ಸರ್ಕಾರದ ಅತಿಥಿಗೃಹ ರಿಪೇರಿಯಲ್ಲೂ ಲಕ್ಷಾಂತರ ಲೂಟಿ ಮಾಡಿರುವ ಶ್ರೀನಿವಾಸ್ ಇದೀಗ ಸಸ್ಪೆಂಡಾಗಿರುವ ಒಳ್ಳೆ ಸುದ್ದಿ ಬಂದಿದೆ.

-ಚಿಕ್ಕಮಾಳಿಗೆ


...ನಂತಮೂರ್ತಿಗಳು ಹೀಗೇಕೆ ಮಾಡುತ್ತಾರೆ?

▶▶▶

...ಭ್ರಷ್ಟತೆಯನ್ನು ನೆಲ-ಜಲ ಮಾರುವವರಲ್ಲಿ ಹುಡುಕಲು ಸಾಧ್ಯ? ಅದಿರು ... ತಾ ಕೊಳ್ಳೆ ಹೊಡೆಯುತ್ತಿರುವ ರೆಡ್ಡಿಗಳ ರಾಜಕೀಯ ಮನೋಧರ್ಮಕ್ಕೂ ...ಯ ರಾಜಕೀಯ ಮನೋಧರ್ಮಕ್ಕೂ ಯಾವ ವ್ಯತ್ಯಾಸ? ಯಾವ ರಾಜಕೀಯ ...ಯ ಆಧಾರದಲ್ಲಿ ಯಡ್ಡಿಗೆ ಬೆಂಬಲ ನೀಡಲು ಸಾಧ್ಯ?

...ಸ್ತವವಾಗಿ ರೆಡ್ಡಿಗೂ ಯಡ್ಡಿಗೂ ಭಿನ್ನಾಭಿಪ್ರಾಯ ಬಂದಿರುವುದು ಲೂಟಿ ...ವ ರಾಜಕಾರಣದ ಬಗ್ಗೆ ಅಲ್ಲವೇ ಅಲ್ಲ, ಇದು ಲೂಟಿಯ ಪಾಲಿನ ...ದಾರಿಕೆಯಲ್ಲಿ ಆಗಿರುವ ಸಮಸ್ಯೆ. ಇದರಲ್ಲಿ ಯಾವುದೇ ಪ್ರಜಾತಾಂತ್ರಿಕ ... ಜನಪರ ಹಿತಾಸಕ್ತಿಗಳನ್ನು ಅರಸುವುದು ಅಥವಾ ಯಡಿಯೂರಪ್ಪನವರಿಗೆ ತಪ್ಪುಗಳ ಅರಿವಾಗಿದೆ ಎಂದು ಅರ್ಥೈಸುವುದು ಸಂಪೂರ್ಣವಾಗಿ ತಪ್ಪು ...ಷ್ಟು ವಿಷಯ ಬುದ್ಧಿಜೀವಿಗಳಾದ ಅನಂತಮೂರ್ತಿಗಳಿಗೆ ಗೊತ್ತಾಗುವು...ೇ? ಇದು ಮಾಹಿತಿ ಕೊರತೆಯಿಂದ ಉಂಟಾದ ಸಮಸ್ಯೆ ಅಲ್ಲವೇ ಅಲ್ಲ. ...ದ್ದರೂ ಅನಂತಮೂರ್ತಿಗಳು ಹೀಗೇಕೆ ಮಾಡುತ್ತಾರೆ?

... ಹಿಂದೆಯೂ ಯಡಿಯೂರಪ್ಪನವರು ಅಧಿಕಾರಕ್ಕೇರಿದಾಗ ಅವರಲ್ಲಿ ...ವಿಟ್ಟು ಅನಂತಮೂರ್ತಿಗಳು ಪತ್ರ ಬರೆದು ಅದಿರು ...ಯನ್ನು ತಡೆಯುತ್ತಾರೆಂಬ ವಿಶ್ವಾಸವನ್ನು ವ್ಯಕ್ತಪಡಿಸಿ ಆದರೆ ಆ ಸಮಯದಲ್ಲಿ ಯಡ್ಡಿ ಚುನಾವಣೆ ... ಅದಿರಿನ ದುಡ್ಡಿನಲ್ಲಿ ಎಂಬುದು ಅವರಿಗೆ ...ಲಿಲ್ಲವೇ? ಯಡ್ಡಿಯ ಮತ್ತು ಬಿಜೆಪಿಯ ರಾಜಕೀಯ ... ಮಾರಾಟವನ್ನು ವ್ಯತಿರೇಕಿಸುವ ರಾಜಕೀಯವಲ್ಲ ...ದು ಸ್ಪಷ್ಟವಾದ ಮೇಲೆಯೇ ಅಲ್ಲವೇ ರೆಡ್ಡಿಗಳು ... ಸೇರಿದ್ದು. ಹಾಗೆ ನೋಡಿದಲ್ಲಿ ಅವರಿಗೆ ಅದಿರು ...ಯ ರಹದಾರಿ ತೋರಿಸಿ ಮಾರ್ಗದರ್ಶನ ಮಾಡಿದ್ದೇ ...ಯ ರಾಷ್ಟ್ರೀಯ ನಾಯಕಿ ಸುಷ್ಮಾ ಸ್ವರಾಜ್ ಅಲ್ಲವೇ?



... ದೇಶದ ಸಂಪನ್ಮೂಲವನ್ನು ಮಾರಿ ಹಣ ...ುವ ರಾಜಕೀಯ ಕೇವಲ ರೆಡ್ಡಿಗಳಿಗೆ ಮಾತ್ರ ...ತವಾಗಿಲ್ಲ. ಆಂಧ್ರದಲ್ಲಿ ಕಾಂಗ್ರೆಸ್ಸಿನ ವೈ.ಎಸ್. ರಾಜಶೇಖರರೆಡ್ಡಿ ಮತ್ತು ... ಮಗ ಜಗನ್‌ಮೋಹನ ರೆಡ್ಡಿ ಇವರುಗಳು ಧನಾಢ್ಯರಾಗಿದ್ದೇ ಅದಿರು ...ನ್ಮೂಲವನ್ನು ಲೂಟಿ ಮಾಡುವುದರ ಮೂಲಕ. ಗಣಿ ರೆಡ್ಡಿಗಳು ಮತ್ತು ...ಮೋಹನ ರೆಡ್ಡಿಗಳು ಇಬ್ಬರೂ ಓಬಲಾಪುರಂ ಮೈನ್ಸ್‌ನಿಂದ ಹಿಡಿದು ಇತರ ... ಲೂಟಿಗಳಲ್ಲೂ ಅಧಿಕೃತ ಪಾಲುದಾರರು. ಗಣಿ ರೆಡ್ಡಿಗಳು ಬಿಜೆಪಿ. ...ಮೋಹನ ರೆಡ್ಡಿ-ರಾಜಶೇಖರ ರೆಡ್ಡಿಗಳು ಕಾಂಗ್ರೆಸ್ಸು. ಅಷ್ಟೇ ವ್ಯತ್ಯಾಸ.

...ದ್ದರಿಂದ ರಾಜಕೀಯವನ್ನು ಮತ್ತು ರಾಜಕೀಯ ಅಧಿಕಾರಸ್ಥರನ್ನು ಕೇವಲ ...ಮಾತ್ರರನ್ನಾಗಿ ನೋಡುವ ದೃಷ್ಟಿಕೋನದಲ್ಲೇ ಪ್ರಮುಖ ಸೈದ್ಧಾಂತಿಕ ಮತ್ತು ...ೀಯ ಲೋಪವಿದೆ. ಅದು ಅನಂತಮೂರ್ತಿಗಳು ಪ್ರತಿನಿಧಿಸುವ ರಾಜಕೀಯ ...ತದ ಲೋಪವೂ ಆಗಿದೆ. ಅಧಿಕಾರಸ್ಥರು ವ್ಯಕ್ತಿಗಳೂ ಆಗಿರುತ್ತಾರೆ ಮತ್ತು ... ವ್ಯಕ್ತಿ ವಿಲಕ್ಷಣತೆಯಿಂದ ಪ್ರತ್ಯೇಕವಾಗಿಯೂ ಇರುತ್ತಾರೆ ನಿಜ. ಆದರೆ ...ರ ಹಿಡಿಯುವುದು ವ್ಯಕ್ತಿಗಳಲ್ಲ. ಒಂದು ಗುಂಪಿನ ಅಥವಾ ಸಮುದಾಯದ ...ಗಳೇ ವ್ಯಕ್ತಿಗಳ ಮೂಲಕ ಅಧಿಕಾರ ಹಿಡಿಯುತ್ತದೆ. ಬಲವಾದ ಜನಪರ ...ಳಿ ಮತ್ತು ಜನಪರ ರಾಜಕಾರಣದ ಅಡೆತಡೆಯಿಲ್ಲದ ಸಂದರ್ಭದಲ್ಲಿ ಆಳುವ ...ಗಳ ಹಿತಾಸಕ್ತಿಗಳು ಅಧಿಕಾರ ಹಿಡಿಯುತ್ತವೆಯೇ ವಿನಃ ಜನಪರ ಹಿತಾಸಕ್ತಿಗಳಲ್ಲ. ...ೀಯ ಪ್ರಜಾತಂತ್ರವು ಮತ್ತು ಆಳುವ ವರ್ಗಗಳ ಹಿತಾಸಕ್ತಿಗಳು ಸಹ ...ರ ಮುಸುಕನ್ನು ಹೊಂದುವುದು ಕಡ್ಡಾಯ ಮಾಡುತ್ತವಾದ್ದರಿಂದ ರೆಡ್ಡಿಗಳ ...ಗೂ ಜನರ ಹಿತಾಸಕ್ತಿಯ ಮುಖವಾಡವಿರುತ್ತದೆ. ಯಡ್ಡಿಯ ಎಲ್ಲಾ ...ಮುವಾದಿ ಮತ್ತು ಲೂಟಿಕೋರ ಯೋಜನೆಗಳಿಗೂ ಜನಪರತೆಯ ಮಾತಿನ ...ವಿರುತ್ತದೆ. ಈಗ ಎಲ್ಲರೂ ತಾವು ಮಾಡುತ್ತಿರುವುದೇ ನೆರೆ ಸಂತ್ರಸ್ತರ ...ಣಕ್ಕೆ ಅನ್ನುತ್ತಿರುವಂತೆ!

...ದರೆ ಈ ರೆಡ್ಡಿಗಳು ಹೇಳಿಕೇಳಿ ಊಳಿಗಮಾನ್ಯ ದರ್ಪದ ಹಿನ್ನೆಲೆಯಿಂದ ...ರುವುದರಿಂದ ಪ್ರಜಾತಂತ್ರದ ಕೆಲವು ಸೋಗಲಾಡಿತನಗಳನ್ನು ಅನುಸರಿಸು... ಬದಲಿಗೆ ತಾವೇ ಜನರಿಗೆ 50,000 ಮನೆ ಕಟ್ಟಿಸಿಕೊಡುವುದಾಗಿಯೂ, ಆಶ್ರಿತರನ್ನು ಕೈಬಿಡುವುದಿಲ್ಲವೆಂದೂ ಪಕ್ಕಾ ಹಳೇ ಪಾಳೆಗಾರರ ಸ್ಟೈಲಿನಲ್ಲಿ ಮಾಡುತ್ತಾರೆ. ಈ ನಡವಳಿಕೆ ಪ್ರಜಾತಂತ್ರಕ್ಕೇ ಅಪಾಯ ಎಂದು ...ಮೂರ್ತಿಗಳಂತ ಪ್ರಜಾತಂತ್ರವಾದಿಗಳಿಗೆ ಅನ್ನಿಸುವುದು ಸಹಜ. ಆದರೆ ...ಯೂರಪ್ಪನವರು ವಿರೋಧಿಸುತ್ತಿರುವುದು ಈ ದರ್ಪವನ್ನೇನೂ ಅಲ್ಲ ಅಥವಾ ಆರ್ಥಿಕ ಯೋಜನೆಗಳಲ್ಲಿ ರೆಡ್ಡಿ ಪ್ರತಿನಿಧಿಸುವ ಊಳಿಗಮಾನ್ಯ ಸಂಸ್ಕೃತಿಯನ್ನೂ ಅಲ್ಲ. ಏಕೆಂದರೆ ಜನರ ಅಂದರೆ ಸರ್ಕಾರದ್ದೇ ಪರಮಾಧಿಕಾರ ಇರಬೇಕಾದ ವಲಯದಲ್ಲಿ ಖಾಸಗಿ ಮಠಮಾನ್ಯಗಳನ್ನು ಮತ್ತು ವ್ಯಕ್ತಿಗಳನ್ನು ಪ್ರತಿಷ್ಠಾಪಿಸಿದ್ದು ಯಡಿಯೂರಪ್ಪನವರೇ. ಯಾವುದೇ ಸರ್ಕಾರಿ ಯೋಜನೆಯಲ್ಲಿ ಖಾಸಗಿ-ಸರ್ಕಾರಿ ಸಹಭಾಗಿತ್ವ ಎಂಬುದು ಇಂದು ಅಧಿಕೃತ ನೀತಿಯೇ ಆಗಿಬಿಟ್ಟಿದೆ. ಅಷ್ಟೇ ಏಕೆ, ಈಗ ನೆರೆ ಪರಿಹಾರದ ವಿಷಯದಲ್ಲಿ ಪುನರ್‌ವಸತಿಯ ಜವಾಬ್ದಾರಿಯನ್ನು ಕೊಟ್ಟಿರುವುದು ರಾಜೀವ್ ಚಂದ್ರಶೇಖರ್ ಎಂಬ ಖಾಸಗಿ ಉದ್ಯಮಿಗೆ. ಈ ಮನುಷ್ಯ ಸಹ ತನ್ನ ಉದ್ಯಮ ಶ್ರೀಮಂತಿಕೆಯ ಹಮ್ಮಿನಿಂದ ಬಡವರಿಗೆ 50,000 ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಘೋಷಿಸಿದ್ದಾನೆ. ರೆಡ್ಡಿಗೂ ಈತನಿಗೂ ವ್ಯತ್ಯಾಸವೇನೆಂದರೆ ಈತನ ಧೋರಣೆಯಲ್ಲಿ ಊಳಿಗಮಾನ್ಯ ದರ್ಪವಿಲ್ಲ, ಆದರೆ ಕ್ಯಾಪಿಟಲಿಸ್ಟ್ ನಯವಂಚಕತನವಿದೆ!

ನಿಜವಾದ ಪ್ರಜಾತಂತ್ರಕ್ಕೆ ಊಳಿಗಮಾನ್ಯ ದರ್ಪ, ಕ್ಯಾಪಿಟಲಿಸ್ಟ್ ನಯವಂಚಕತನ ಎರಡೂ ಸಮಾನ ಶತ್ರುಗಳೇ. ಆದರೆ ನಮ್ಮಲ್ಲಿರುವ ಹಲವಾರು ಬುದ್ಧಿಜೀವಿಗಳ ಸೈದ್ಧಾಂತಿಕ ದೃಷ್ಟಿಕೋನ ಊಳಿಗಮಾನ್ಯ ದರ್ಪವನ್ನು ಎದುರಿಸುವಷ್ಟು ಶಕ್ತವಾಗಿದೆಯೇ ವಿನಃ ಕ್ಯಾಪಿಟಲಿಸಂನ ಇನ್ನೂ ಹೆಚ್ಚು ಅಪಾಯಕಾರಿ ಷಡ್ಯಂತ್ರವನ್ನು ಅರ್ಥಮಾಡಿಕೊಳ್ಳುವಷ್ಟು ಶಕ್ತವಾಗಿಲ್ಲ. ಉದಾರವಾದಿ ಪ್ರಜಾತಂತ್ರದ ನೆಲೆಗಟ್ಟು ಮಹಾನ್ ವ್ಯಕ್ತಿವಾದಿ ಹಿನ್ನೆಲೆಯಿಂದ ಕೂಡಿರುವುದರಿಂದ ಮತ್ತು ಅದರ ತಾಯಿಬೇರು ಕ್ಯಾಪಿಟಲಿಸಮ್ಮಿನಲ್ಲೇ ಇರುವುದರಿಂದ ಅಧಿಕಾರವನ್ನು ವ್ಯಕ್ತಿವಾದಿ ನೆಲೆಯಿಂದಾಚೆಗೆ ಆಳುವ ವರ್ಗದ ಕೂಟವೆಂದು ಅರ್ಥಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ.

ಅದೇರೀತಿ, ಏನೇ ಇದ್ದರೂ ಯಡಿಯೂರಪ್ಪನವರದ್ದು ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರ್ಕಾರ, ಅದನ್ನು ಬೀಳಿಸುವುದು ತಪ್ಪು ಎನ್ನುವುದರಲ್ಲೂ ಪ್ರಜಾತಂತ್ರವನ್ನು ಕೇವಲ ರೂಪದಲ್ಲಿ ಮಾತ್ರ ಗ್ರಹಿಸಿ ಅದರ ಅಪ್ರಜಾತಾಂತ್ರಿಕ ಸಾರವನ್ನು ನಗಣ್ಯ ಮಾಡುವ ಸೈದ್ಧಾಂತಿಕ ದೃಷ್ಟಿಕೋನದ ಕೊರತೆಯೇ ಎದ್ದು ಕಾಣುತ್ತದೆ. ಈ ಬಿಜೆಪಿ ಸರ್ಕಾರ ಪ್ರಜಾತಾಂತ್ರಿಕವಾಗಿ ಆಯ್ಕೆಯಾಗಿದೆಯೇ? ಅಥವಾ ಇಂದಿನ ಯಾವುದೇ ಚುನಾವಣೆಗಳು ನಿಜಕ್ಕೂ ಜನರ ನಿಜವಾದ ಆಯ್ಕೆಯನ್ನು ಪ್ರತಿನಿಧಿಸುತ್ತವೆಯೇ ಎಂಬ ಪ್ರಶ್ನೆಯನ್ನೇ ಹಾಕಿಕೊಳ್ಳದೆ ಹಣ, ಹೆಂಡ, ಜಾತಿ, ಕೋಮುವಾದ ಏನೇ ಮಾಡಿ ಅಧಿಕಾರಕ್ಕೆ ಬಂದಿದ್ದರೂ ಒಮ್ಮೆ ಅಧಿಕಾರಕ್ಕೆ ಬಂದರೆ ಆಯಿತು, ಅದು ಪ್ರಜಾತಾಂತ್ರಿಕವಾಗಿ ಆಯ್ಕೆಗೊಂಡ ಸರ್ಕಾರವೇ ಆಗಿಬಿಡುತ್ತದೆ ಎಂಬುದು ಆತ್ಮಘಾತುಕ ಮತ್ತು ಪ್ರಜಾತಂತ್ರ ವಿರೋಧಿ. ಹಿಟ್ಲರ್‌ನದ್ದು ಕೂಡ ಪಾರ್ಲಿಮೆಂಟರಿ ಮಾದರಿಯಲ್ಲಿ ಬಹುಮತದಿಂದ ಆಯ್ಕೆಗೊಂಡ ಸರ್ಕಾರವೇ ಆಗಿತ್ತಲ್ಲವೇ?

ನಮ್ಮ ದೇಶದ ಇಂದಿನ ಪ್ರಜಾಪ್ರಭುತ್ವ ಸಾಮಾನ್ಯ ಜನರಮಟ್ಟಿಗೆ ಬಹಳ ದುಬಾರಿ ಆಗಿದೆ. ಪ್ರಜಾತಾಂತ್ರಿಕ ಪ್ರಕ್ರಿಯೆಗಳು ಎಷ್ಟು ಭ್ರಷ್ಟಗೊಂಡಿವೆಯೆಂದರೆ ಪ್ರಜಾತಾಂತ್ರಿಕ ಪ್ರಕ್ರಿಯೆಗಳೂ ಕೊಳ್ಳಬಲ್ಲ ಸರಕಾಗಿದೆ. ಆದ್ದರಿಂದಲೇ ಇಂದು ಪ್ರಭುತ್ವಗಳು ಉದ್ಯಮಪತಿಗಳ ಏಜೆಂಟರುಗಳಾಗಿ ನಡೆದುಕೊಳ್ಳುತ್ತಿವೆ. ಈ ವಿದ್ಯಮಾನವೇ ಪ್ರಭುತ್ವದ ಬಗೆಗೆ ಹಲವಾರು ಉದಾರವಾದಿ ಪ್ರಜಾತಂತ್ರವಾದಿಗಳ ತಿಳಿವಳಿಕೆಯನ್ನು ರ್‍ಯಾಡಿಕಲ್ ಆಗಿ ಬದಲಾಯಿಸುತ್ತಿದೆ. ಅನಂತಮೂರ್ತಿಗಳು ಆಗಾಗ ಈ ಉದಾರವಾದಿ ನೆಲೆಯಿಂದ ಹೊರಬಂದರೂ ಅವರ ತಾತ್ವಿಕ ನೆಲೆಗಟ್ಟು ಮಾತ್ರ ಬದಲಾಗುತ್ತಿಲ್ಲ. ಹೀಗಾಗಿ ಪ್ರಜಾತಂತ್ರವನ್ನು ಸಾರಭೂತ ಅಧಿಕಾರ ರಚನೆಯಾಗಿಯಲ್ಲದೆ ಕೇವಲ ಆಡಳಿತ ಸಂಸ್ಕೃತಿಯನ್ನಾಗಿ ಮಾತ್ರ ನೋಡುವಂತಾಗಿದೆ. ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನು ಸಹ ಕೇವಲ ರೂಪದಲ್ಲಿ ಮಾತ್ರ ಗ್ರಹಿಸಿ ಸಾರವನ್ನು ನೋಡದಂತೆ ಮಾಡಿದೆ. ಹೀಗಾಗಿಯೇ ಅವರಿಗೆ ರೆಡ್ಡಿ ಮತ್ತು ಯಡ್ಡಿ ನಡುವೆ ಸಾರಭೂತ ವ್ಯತ್ಯಾಸವಿದೆ ಎಂದೆನಿಸುವಂತಾಗಿದೆ. ಹೀಗಾಗಿ ಇದು ಅನಂತಮೂರ್ತಿಗಳ ದೃಷ್ಟಿಕೋನದಲ್ಲೇ ಇರುವ ದೋಷವಲ್ಲವೇ?

ರೆಡ್ಡಿ ಭ್ರಷ್ಟ. ಯಡ್ಡಿ ದುಷ್ಟ. ಇವರಿಬ್ಬರ ಜಗಳದಲ್ಲಿ ಸಾಮಾನ್ಯ ಜನರ ಅಥವಾ ಪ್ರಜಾತಂತ್ರದ ಯಾವುದೇ ಹಿತಾಸಕ್ತಿ ಇಲ್ಲ. ನಿಜವಾದ ಪ್ರಜಾತಂತ್ರವಾದಿಗಳು ರೆಡ್ಡಿ ಅಥವಾ ಯಡ್ಡಿ ಬಣದಲ್ಲಿ ವ್ಯತ್ಯಾಸ ಕಾಣುವುದನ್ನು ಬಿಡಬೇಕು. ಜನರ ವಿಶ್ವಾಸವನ್ನು ಕಳೆದುಕೊಂಡಿರುವ ಬಿಜೆಪಿ ಸರ್ಕಾರ ರಾಜೀನಾಮೆ ಕೊಡಬೇಕೆಂದು ಒತ್ತಾಯಿಸುತ್ತಾ ಮತ್ತೊಮ್ಮೆ ಜನರ ವಿಶ್ವಾಸವನ್ನು ಕೋರಲು ಆಗ್ರಹಿಸಬೇಕು. ಆಗ ಜನತೆಯ ಎದುರು ಇವರೆಲ್ಲರ ಪಾತಕಗಳನ್ನು ಬಿಚ್ಚಿಟ್ಟು ರಾಜಕೀಯ ಆಂದೋಲನ ಮಾಡುವುದನ್ನು ಬಿಟ್ಟು ಪ್ರಜಾತಂತ್ರವಾದಿಗಳಿಗೆ ಬೇರೆ ದಾರಿಯಿಲ್ಲ. ●

ಒಂದು ಪತ್ರ

ವಿಕಲಚೇತನ ಬೇಡ ವಿಶಿಷ್ಟಚೇತನ ಇರಲಿ

'16ರ ಹರೆಯದ' (4 ನವೆಂಬರ್ 2009ರ 'ಲಂಕೇಶ್' ಸಿನಿಮಾ ಸುದ್ದಿ) ಲೇಖನದಲ್ಲೊಂದೆಡೆ ವಿಕಲಚೇತನ ಎಂಬ ಪದಪ್ರಯೋಗವಿದೆ. ಬುದ್ಧಿಮಾಂದ್ಯ-ಅಂಗವಿಕಲ ಎನ್ನುವುದು ಸರಿ ಎನಿಸದ ಕಾರಣ ಹೊಸ ಪದಗಳ ಬಳಕೆ ಸರಿಯಿದ್ದರೂ ಈ ವಿಕಲ ಚೇತನ ಎನ್ನುವ ಪದ ಇನ್ನೂ ಅಸಹ್ಯ ಎನಿಸುವ ಕಾರಣಕ್ಕಾಗಿ ಯಾರೋ ಬಳಕೆಗೆ ತಂದಿದ್ದ ಈ ಪದವನ್ನು ಬಳಸದೇ ಇರುವುದೇ ಉತ್ತಮ.

ವಿಕಲ-ವೈಕಲ್ಯ ಎಂಬ ಪದ ನ್ಯೂನತೆಯನ್ನು ಹೊಂದಿರುವ ಎನ್ನುವ ಅರ್ಥವನ್ನು ಕೊಡುವ ಕಾರಣದಿಂದ ಒಟ್ಟಾರೆ ಇಲ್ಲಿ 'ವಿಕಲ' ಎನ್ನುವ ಪದವನ್ನೇ ಒಂದು ಬದಿಗಿಟ್ಟು ನೋಡುವುದೊಳ್ಳೆಯದು. ಇಲ್ಲವಾದಲ್ಲಿ ವಿಕಲಚೇತನವೆಂದರೆ ಚೇತನದ ನ್ಯೂನತೆಯುಳ್ಳವರು (ಚೇತನರಾಹಿತ್ಯ) ಅರ್ಥಾತ್ ಅಶಕ್ತರು, ಜೀವ ಇಲ್ಲದವರು ಕೋಮಾಸ್ಥಿತಿಯಲ್ಲಿ ರುವಂತವರು ಎಂಬಂತಹ ಅರ್ಥವನ್ನಷ್ಟೆ ಇದು ಕೊಡುತ್ತದೆ.

ಪ್ರಕೃತಿಯ ವಿಶಿಷ್ಟತೆಯೆಂದರೆ ಈ ಅಂಗಹೀನತೆ ಉಳ್ಳವರು ಕೆಲಕಾಲ ಸಹಜ ಸಾಮರ್ಥ್ಯಗಳಿಂದ ವಂಚಿತರೆಂಬುದು ಹೌದಾದರೂ ಬಹುತೇಕ ಮಂದಿ (ಪ್ರಾಣಿಗಳನ್ನೂ ಸೇರಿ) ತಮಗಿಲ್ಲದ ಸಾಮರ್ಥ್ಯವನ್ನು ಸರಿದೂಗಿಸುವುದಕ್ಕಾಗಿ ಕೆಲ ವಿಶಿಷ್ಟ ಸಾಮರ್ಥ್ಯವನ್ನು ರೂಢಿಸಿಕೊಳ್ಳುವುದುಂಟು. ನೀನು ಅಶಕ್ತ ನೀನು ಅಶಕ್ತ ಎಂದು ಬಾಲ್ಯದಲ್ಲೇ ಹೇಳಿಹೇಳಿ ಅವರನ್ನು ಅಂತಹ ಮಾನಸಿಕ ಸ್ಥಿತಿಗೆ ದೂಡುವ ಸಾಧ್ಯತೆಗಳೇ ಹೆಚ್ಚೇ ವಿನಃ ಅತೀ ಎನಿಸುವ ಅಂಗಹೀನತೆ ಉಳ್ಳ ಎಷ್ಟೋ ಮಂದಿ ನಿಬ್ಬೆರಗಾಗುವಂತಹ ಸಾಧನೆ ಮಾಡಿರುವ ಸಹಸ್ರಾರು ಉದಾಹರಣೆಗಳು ಜಗತ್ತಿನೆಲ್ಲೆಡೆ ಸಿಗುತ್ತವೆ.

ಇತ್ತೀಚೆಗಿನ 'ಎದ್ದೇಳು ಮಂಜುನಾಥ'ದಲ್ಲಿ ಸಿನಿಮಾ ನಿರ್ದೇಶಕನಾಗ ಹೊರಟ ಅಂಧ ನಾಣಿಯ ಬಗ್ಗೆ ಜಗ್ಗೇಶ್ ಕುಹಕವಾಡಿದಾಗ ನಾಣಿ ನೀಡುವ ಪ್ರತ್ಯುತ್ತರದಲ್ಲಿ ನಿಜಕ್ಕೂ ಮನಸ್ಸಿಗೆ ತಾಕುವಂತ ಸತ್ಯವಿದೆ. ಕೇವಲ ಶಬ್ದದಿಂದಲೇ ಸುತ್ತಲಿನವರನ್ನು, ಸುತ್ತಲಿನ ವಿದ್ಯಮಾನವನ್ನು ಕರಾರುವಾಕ್ಕಾಗಿ ಅಂದಾಜಿಸುವ ಅಂಧರನ್ನ ನಾನೇ ನೋಡಿದ್ದೇನೆ. ಕಣ್ಣಿಲ್ಲದ್ದಿದ್ದರೂ ಕುರ್ಚಿಗೆ ಪರ್‌ಫೆಕ್ಟ್ ಆಗಿ ಹೆಣಿಗೆ ಹಾಕುವವರು ಇದ್ದಾರೆ. ನಾನು ಕಂಡಂತೆ ಹೆಚ್ಚಿನವರು ಇಂತಹ ವಿಶಿಷ್ಟರೇ. ಸರಿಯಾಗಿ ತನ್ನದೇ ಅಂಗಾಂಗಗಳನ್ನೇ ಅಲುಗಾಡಿಸಲಾಗದಂತಹ ಸ್ಟೀಫನ್ ಹಾಕಿಂಗ್ ಎಲ್ಲಾ ಸರಿ ಇದ್ದವರಿಗೇ ಒಗಟಾಗಿರುವ ಬ್ರಹ್ಮಾಂಡದ ಬುಡಕ್ಕೆ ಕೈ ಹಾಕಿಲ್ಲವೇ?

ಬೆಳ್ತಂಗಡಿಯ ಸಬಿತಾ ಮೋನಿಸ್ ಎಂಬಾಕೆಯ ಅಕ್ಷರಗಳು ಎಷ್ಟು ಮುದ್ದಾಗಿವೆಯೆಂದರೆ ಅದನ್ನು ನೋಡ್ತಾ ಇರ್ಬೇಕು ಎನಿಸುವಂತಿದೆ. ಈಗ ಆಳ್ವಾಸ್ ಕಾಲೇಜಿನಲ್ಲಿ ಕಲಿಯುತ್ತಿರುವ ಆಕೆ ಬರೆಯುವುದು ಮಾತ್ರ ಕಾಲಿನಲ್ಲಿ, ಯಾಕೆಂದರೆ ಭುಜದ ಭಾಗದಿಂದಲೇ ಆಕೆಗೆ ಎರಡೂ ಕೈಗಳಿಲ್ಲ.

ವರ್ಷಗಳ ಹಿಂದೆ ಪೊಳಲಿಯ ದೇವಸ್ಥಾನಕ್ಕೆ ಉಪನಯನಕ್ಕಾಗಿ ಹೋಗಿದ್ದೆ. ಅಲ್ಲಿ ಮಂತ್ರ ಹೇಳುವವರನ್ನ ಬಿಟ್ಟರೆ ಅತೀ ಹೆಚ್ಚು ಮಾತಾಡುತ್ತಿದ್ದ ವ್ಯಕ್ತಿಯೆಂದರೆ ಒಬ್ಬರು ಮಹಿಳೆ. ಆರಂಭದಿಂದಲೂ ಅವರನ್ನ ಸುಮ್ಮನೆ ಗಮನಿಸುತ್ತಿದ್ದೆ. ಊಟದ ಸಾಲಿನಲ್ಲಿ ನನ್ನೆದುರಿನ ಸಾಲಿನಲ್ಲಿ ಕುಳಿತಿದ್ದಾಗಲೂ ಸುಮ್ಮನೆ ಕುಳಿತುಕೊಳ್ಳಲೇ ಇಲ್ಲ. ಒಂದು ಮಗುವಿನ ಜೊತೆ ಆಚೆಈಚೆ ಓಡಾಡಿಕೊಂದು ಬರೀ ಕೈ-ಬಾಯಿ ಸನ್ನೆಯಿಂದಲೇ ಎಲ್ಲರೊಂದಿಗೆ ಅವರು ತಮ್ಮದೇ ಆದ ಮಾತಿನ ಮೂಲಕ ವ್ಯವಹರಿಸುತ್ತಿದ್ದರು. ತನಗೆ ಮಾತು ಬಾರದು ಎಂಬ ನೋವು, ಕೀಳರಿಮೆ ಸ್ವಲ್ಪವೂ ಅವರ ಮುಖದಲ್ಲಿ ಇದ್ದಂತಿಲ್ಲ. ಇವರೆಲ್ಲ ವಿಕಲಚೇತನರೇ ಅಥವಾ ವಿಶಿಷ್ಟ ಚೇತನರೇ ನೀವೇ ಹೇಳಿ?

ಏನೇ ಇರಲಿ, ಈ ವಿಕಲಚೇತನರನ್ನ ವಿಶಿಷ್ಟಚೇತನರನ್ನಾಗಿ ಸುವುದು, ವಿಶಿಷ್ಟಚೇತನರನ್ನ ವಿಕಲಚೇತನರನ್ನಾಗಿಸುವುದು ಎಲ್ಲವೂ ಪ್ರಮುಖವಾಗಿ ಸಂಬಂಧಿಸಿದವರ ಮನೆಯವರ, ಬಾಲ್ಯದ ಒಡನಾಡಿಗಳ, ಗುರು-ಹಿರಿಯರ ಕೈಯಲ್ಲಿರುವುದಂತೂ ಹೌದು. ಮೇಲಿನ ಉದಾಹರಣೆಗಳ ಹಿಂದೆ ಇಂತಹವರ ಪ್ರೋತ್ಸಾಹದ 'ಬಲ' ಇದೆ. ಇದಿಲ್ಲದೇ ಕೇವಲ 'ಛಲ'ವೂ ಕೂಡಾ ಕೆಲವೊಮ್ಮೆ ಮಹತ್ಕಾರ್ಯವನ್ನ ನಡೆಸುವುದುಂಟು. ಸುವರ್ಣದ 'ಕತೆಯಲ್ಲ ಜೀವನ'ದ ಆರಂಭದ ಕಂತುಗಳಲ್ಲಿ ಬಂದಿದ್ದ ಅಂಧನೆನ್ನುವ ಕಾರಣಕ್ಕೆ ಮನೆಯಿಂದ ತ್ಯಜಿಸಲ್ಪಟ್ಟ ವ್ಯಕ್ತಿಯೊಬ್ಬರು ಇದಕ್ಕೆ ಉದಾಹರಣೆ. ಈತ ಶಾಲೆಗೆ ಬಿದ್ದು ಕೇವಲ 15-20 ದಿನಗಳಲ್ಲೇ ಇಂಗ್ಲಿಷ್ ಕಲಿತಿದ್ದರಂತೆ.

ಒಟ್ಟಾರೆ ಖಂಡಿತವಾಗಿಯೂ ಇವರೆಲ್ಲ ವಿಶಿಷ್ಟಚೇತನರಷ್ಟೇ.

-ರವಿ ಮುತ್ತೂರ, ದ.ಕ

ಮಂಗಲಮುಖಿಯರು



ಪೌಡರು ಸ್ನೋ ಮಿಂಚು ಒತ್ತಿ ಒತ್ತಿ ಬಡಿದರೂ
ಮತ್ತೆ ಮತ್ತೆ ಕಾಣುವ ಗಲ್ಲದ ಮೇಲಿನ ಗಡ್ಡ
ಗಾಢ ತುಟಿ ಬಣ್ಣದಲಿ
ಕನ್ನಡಿಯ ಹೊಳಪು
ಆಗಾಗ ಮುರಿವ ಮೂಗಿಗೆ
ತಾಳ ಹಾಕುವ ಕುಣಿವ ಹುಬ್ಬು
ರಂಭೆ ಊರ್ವಶಿಯರ ಕನಸು
ಪತ್ತಲದ ಹೂವ ನೀರಿಗೆಯನು
ಫಲಕ್ಕಂತ ಒದೆವ ನಡಿಗೆಯಲಿ
ನವಿಲ ಬೆಡಗು,
ಕೂದಲಿಗೆ ಕೇಡಿಲ್ಲ; ತಲೆ ಬೈತಲೆ
ಎಲ್ಲ ಹೆಂಗಸರದೆ!

ಬೆಳೆದ ದೇಹದಲಿ ಒಡೆದ ಗಂಟಲ ಸ್ವರ
ನಾನೆಂಬ ನಾನು ನೀನೆಂಬ ನೀನು
ಯಾವ ಊರಿಗೆ ದಾರಿ
ನಗುವೊ ಅಳುವೋ
ಪಲ್ಲಂಗದ ಮೇಲೆ ಲಿಂಗದ ಚಿತ್ರ.


ತೊಟ್ಟ ಪ್ಯಾಂಟು
ಉಟ್ಟ ಧೋತರದ ಹಂಗೆಂಬ ಹಂಗ ಹರಿದು
ಬಟಾ ಬಯಲಲ್ಲಿ
ಬಯಲಾಗಿ ನಿಲ್ಲುವ ತನಕ
ಲೋಕ ಮುಚ್ಚುವ
ಅಂಗೈ ಅರಿವಿಗೆ
ಲಿಂಗ ಸಂಗದ ಧ್ಯಾನ.

ಹೊಕ್ಕಳ ಹೂವು ಬೆನ್ನಿನ ಕೂದಲು
ರಿಪೇರಿ ಮಾಡಿದ ಎದೆ
ಸೋತು ನೆಗ್ಗಿದ ಜೀವಕ್ಕೆ
ಸೂರು ಸಂಜೆ ಹಾದಿಯಲಿ
ಗಂಡರಿಲ್ಲ
ನಾವು ಹೆಂಡರೂ ಅಲ್ಲ

ಸರಕಾರ ಬರೆದ ಅರ್ಜಿಯಲಿ
ನಮ್ಮ ಹೆಸರಿಲ್ಲ
ಲಿಂಗ ಯಾವ ಕಾಲಮ್ಮು?
ಬಸ್ಸಿನಲಿ ಯಾವ ಸಾಲು?
ರೇಷನ್ನು ಶಾಲೆ ಶೌಚಾಲಯ
ದಿಕ್ಕು ದಿಕ್ಕಿಗೂ ಗೊಂದಲ
ಕನ್ನಡಿಯ ಮುಂದೆ ಮಾತ್ರ
ಕಂಡದ್ದು ಸತ್ಯ.

ಸರ್ಜರಿಯ ಶಾಖಕ್ಕೆ
ದೂರದೂರಿನ ಶಾಸ್ತ್ರ
ಪದೇಪದೇ ಎಳೆದಾಡಿದ ದೇಹಕ್ಕೆ
ಭೂಮಿಯಾಗುವ ಹುಚ್ಚು ಹಂಬಲ.

ರಾತ್ರಿ ಹಗಲುಗಳು
ನಿಷಿದ್ಧಗೊಂಡಿವೆ
ಈ ಭೂಮಿ ಜೀವಗಳಿಗೆ
ಒಳಗಿರುವುದು ಅದೊ ಇದೊ
ಅದು ಇದು ಎಂಬ ಉಭಯ
ಬೇಧವಸಳಿದು
ಒಳಗೆ ಸುಳಿವಾತ್ಮನ ಬೆನ್ನ ಹತ್ತಿದ ಬಾಲೆಯರು
ಸೀರೆ ನೆರಿಗೆಲ್ಲಿ ಸುಖ ಕಾಣುವ ಸಂತೃಪ್ತೆಯರು




● ಬಸವರಾಜ ಹೂಗಾರ

ಭರವಸೆ ಮೂಡಿಸುವ ಅನುವಾದಗಳು....

ತನ್ನ ಬದುಕು ಮತ್ತು ಬರೆಹ ಎರಡನ್ನೂ ಸತತವಾಗಿ ಎಂಬಂತೆ ನಿಕಷಕ್ಕೆ ಒಡ್ಡಿದ ಲೇಖಕ ಟಾಲ್‌ಸ್ಟಾಯ್. ಏನನ್ನೋ, ಯಾರನ್ನೋ ಓದುತ್ತಿರುವಾಗ ಅಯಾಚಿತವೆಂಬಂತೆ ಟಾಲ್‌ಸ್ಟಾಯ್‌ನ ಬದುಕು ಮತ್ತು ಬರೆಹ ನೆನಪಾಗಿ ಕಾಡುವುದು ಈ ಎರಡರ ಬಗೆಗೂ ಅವನಿಗಿದ್ದ ಗಾಢವಾದ ಶ್ರದ್ಧೆ ಮತ್ತು ಪ್ರೀತಿಯಿಂದ. ಆದ್ದರಿಂದಲೇ ಟಾಲ್‌ಸ್ಟಾಯ್‌ನ ಕತೆಗಳನ್ನು ಅನುವಾದಕ್ಕೆಂದು ಮಾಧವ ಚಿಪ್ಪಳಿಯವರು ಆರಿಸಿಕೊಂಡಿರುವುದು ವಿಶೇಷವಲ್ಲ. ಹಾಗೆ ನೋಡಿದರೆ ಟಾಲ್‌ಸ್ಟಾಯ್‌ನ ಅಷ್ಟೂ ಬರೆಹಗಳು ಕನ್ನಡಕ್ಕೆ ಬರಬೇಕಾಗಿರುವುದು ಅತ್ಯಗತ್ಯವೇ. ಆದರೆ ಮಾಧವ ಚಿಪ್ಪಳಿಯವರು ಆರಿಸಿಕೊಂಡಿರುವ ಆರು ಕತೆಗಳ ಒಟ್ಟು ಸಂವಿಧಾನದಲ್ಲಿಯೇ ಕೆಲವು ಮಹತ್ವದ ಸಂಗತಿಗಳಿವೆ. ಈ ಆರೂ ಕತೆಗಳು ಟಾಲ್‌ಸ್ಟಾಯ್‌ನ ಉತ್ತರಾರ್ಧದ ಕಾಲಘಟ್ಟದವು. ಕಾವ್ಯ ಮೀಮಾಂಸೆಯು ಅಹುದಹುದೆನ್ನುವಂತೆ ಆದರೆಲ್ಲಾ ಪರಿಕರಗಳನ್ನೂ ಸಾರ್ಥಕವಾಗಿ ಒಳಗೊಂಡು ಅರಳಿರುವಂತೆ ಕಾಣುವ ಮಹತ್ವದ ಕೃತಿಗಳನ್ನು ಟಾಲ್‌ಸ್ಟಾಯ್ ಬರೆದದ್ದು ಆತನ ಬರವಣಿಗೆಯ ಮೊದಲ ಘಟ್ಟದಲ್ಲಿ. ಆದರೆ ಎರಡನೇ ಘಟ್ಟದಲ್ಲಿ ಕಾವ್ಯ ಮೀಮಾಂಸೆಯು ಒಂದು ಹಂಗು ಎನ್ನುವಂತೆ ಅದನ್ನು ಮೀರಿಕೊಂಡ ಬರವಣಿಗೆಯಿದೆ. ಈ ಎರಡನೇ ಘಟ್ಟದ ಬರವಣಿಗೆಯನ್ನು ಸಾಮಾನ್ಯವಾಗಿ ಎರಡು ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಲಾಗುತ್ತದೆ. ಕಲಾ ಮೀಮಾಂಸೆಯ ಸ್ಥಾಪಿತ ನೆಲೆಗಳನ್ನು ನಿರಾಕರಿಸುವುದರ ಮೂಲಕ ಎಲ್ಲಾ ಬಗೆಯ ಪ್ರಾಕೃತಿಕ ಶಕ್ತಿಗೆ ಒಡ್ಡಿಕೊಳ್ಳುವ ಪ್ರಯತ್ನವಾಗಿ ಮತ್ತು ತಾನು ಕಟ್ಟಲು ಹೊರಟ ಜೀವನ ಮೀಮಾಂಸೆಗೆ ಪೂರಕವಾಗಿ ಆತನ ಈ ಬರವಣಿಗೆಯನ್ನು ನೋಡುವುದು.

ಮಾಧವ ಚಿಪ್ಪಳಿ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿರುವವರು. ಸಾಹಿತ್ಯದ ಮಾಂತ್ರಿಕ ಶಕ್ತಿಯನ್ನು ಬೆರಗುಗಣ್ಣಿನಿಂದ ನೋಡುವ ಹಂತದಲ್ಲಿರುವ ಇವರ ಈ ಕತೆಗಳ ಆಯ್ಕೆಯನ್ನು ಸಂಪೂರ್ಣವಾಗಿ ವೈಯಕ್ತಿಕ ನೆಲೆಯದು ಎಂದು ಗುರುತಿಸಲಾಗುವುದಿಲ್ಲವೇನೋ. ಸೂಕ್ಷ್ಮವಾಗಿ ನೋಡಿದರೆ ಈ ಕತೆಗಳು ನಮ್ಮ ಕಾಲದ ಆಯ್ಕೆಯ ಮಾದರಿಯಾಗಿಯೂ ಕಾಣಿಸುತ್ತವೆ. ಬದುಕಿನ ಸರಳವೂ, ಸಹಜ ನಿಗೂಢವೂ ಆದ ಸತ್ಯಗಳು ಮನುಷ್ಯನನ್ನು ಆವರಿಸುವ, ಕಾಡುವ, ಅರ್ಥವಾಗಿಯೂ ಅರ್ಥವಾಗದಂತೆ ಕಾಣುವ, ಮನುಷ್ಯನ ಅಹಂಕಾರ ಮತ್ತು ಭ್ರಮೆಗಳೆರಡೂ ಈ ಸಹಜ ಸತ್ಯಗಳನ್ನು ಮನುಷ್ಯ ಮುಖಾಮುಖಿಯಾಗುವಲ್ಲಿ ಒಡ್ಡುವ ಸವಾಲುಗಳು– ಇವುಗಳನ್ನು ಈ ಸಂಕಲನದ ಕತೆಗಳು ನಿರೂಪಿಸಲು ಪ್ರಯತ್ನಿಸುತ್ತವೆ. ಕಲೆಯ



ಆರು ಟಾಲ್‌ಸ್ಟಾಯ್ ಕತೆಗಳು
ಅನು : ಮಾಧವ ಚಿಪ್ಪಳಿ
ಪುಟಗಳು : 120
ಬೆಲೆ : 80/-
ಪ್ರಕಾಶನ : ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

ಮೂಲಭೂತ ಆಶಯವೇ ಈ ಮುಖಾಮುಖಿ ಎನ್ನುವುದು ನಿಜ. ಆದರೆ ಸಹಜ ನಿಗೂಢ ಸತ್ಯಗಳನ್ನು ರೂಪಕಗಳಾಗಿ ಪರಿವರ್ತಿಸುವುದೇ ಕಲೆಯ ಮೂಲಧರ್ಮ ಎನ್ನುವುದನ್ನು ಮಾತ್ರ ಈ ಕತೆಗಳು ಪ್ರಜ್ಞಾಪೂರ್ವಕವಾಗಿ ನಿರಾಕರಿಸುತ್ತವೆ. ಇಷ್ಟನ್ನು ಒಪ್ಪಿಕೊಂಡೂ ಇನ್ನೊಂದು ಮೂಲಾಂಶವನ್ನು ನಾವು ಮರೆಯಲಾಗುವುದಿಲ್ಲ, ಅದೆಂದರೆ ಟಾಲ್‌ಸ್ಟಾಯ್‌ನಂತಹ ಅಸಾಧಾರಣ ಪ್ರತಿಭೆಯ ಲೇಖಕನ ಯಾವುದೇ ಬರವಣಿಗೆಗೆ

ಪುಸ್ತಕ ವಿಮರ್ಶೆ

ಇರುವ ಸೆಳೆತದ ಗುಣ. ಸರಳ ನಿರೂಪಣೆಗಳ ಹಾಗೆ ಮೇಲ್ನೋಟಕ್ಕೆ ಕಾಣಿಸುವ ಈ ಕತೆಗಳಲ್ಲಿಯೂ ಅಂತಹ ವಿಶೇಷ ಸೆಳೆತವನ್ನು ನಾವು ಗುರುತಿಸಬಹುದು.


ಲೌಕಿಕ ಸುಖದ ತಾತ್ವಿಕತೆಗಳನ್ನು, ತಾಂತ್ರಿಕತೆಗಳನ್ನು ಅದರ ಸರ್ವ ಸಾಧ್ಯತೆಗಳಲ್ಲಿ ಹುಡುಕುತ್ತಿರುವಂತೆ ಕಾಣಿಸುತ್ತಿರುವ, ಸಮಕಾಲೀನ ಸಂದರ್ಭದ ಮನುಷ್ಯನು ಎದುರಿಸಲು ಹವಣಿಸುತ್ತಿರುವ ಮೂಲ ಸಂಗತಿಗಳನ್ನು ಈ ಕತೆಗಳು ಶೋಧಿಸುತ್ತವೆ. ಆದ್ದರಿಂದಲೇ ಈ ಕತೆಗಳ ಆಯ್ಕೆ ಕೇವಲ ವೈಯುಕ್ತಿಕವಾದದ್ದೂ ಅಲ್ಲ, ಆಕಸ್ಮಿಕವೂ ಅಲ್ಲ ಎನಿಸುವುದು.

'ದೇವರು ಸತ್ಯವನ್ನು ಕಾಣುತ್ತಾನೆ ಆದರೆ ಕಾಯುತ್ತಾನೆ' ಎನ್ನುವ ಮೊದಲ ಕತೆಯನ್ನು ನೋಡುವುದಾದರೆ ಅಪರಾಧಿ, ನಿರಪರಾಧಿ, ಶಿಕ್ಷೆ, ಪಶ್ಚಾತ್ತಾಪ ಮೊದಲಾದ ನಾಗರಿಕ ಸಮುದಾಯದ ಆಧಾರ ಪರಿಕಲ್ಪನೆಗಳನ್ನೆಲ್ಲ ಯಾವ ತರ್ಕಕ್ಕೂ ವಿವರಣೆಗೂ ಸಿಕ್ಕದಂತೆ ಬದುಕು ನಿರಂಕುಶಮತಿಯ ಹಾಗೆ ಧಿಕ್ಕರಿಸುವಂತೆ ಕಾಣುತ್ತದೆ. ಆದರೆ ನಿಜದಲ್ಲಿ ಬದುಕು ಮನುಷ್ಯನಿಗೆ ದಕ್ಕುವುದೇ, ಅವನನ್ನು ಮಾಗಿಸುವುದೇ ಮನುಷ್ಯ ಪ್ರಯತ್ನಗಳನ್ನು ತಲೆಕೆಳಗು ಮಾಡುವುದರಲ್ಲಿ. ಕಂಡರೂ ಕಾಣದ ಹಾಗೆ ನಡೆಯುವ ಮನುಷ್ಯನ ಅಹಂಕಾರವನ್ನು ಅದಕ್ಕೆ ಕಾರಣವೇ ಇಲ್ಲವೆನ್ನುವ ಹಾಗೆ ದೈವ ನಾಶ ಮಾಡುತ್ತಲೇ ಅವನಲ್ಲಿನ ಅಪ್ಪಟ ಮನುಷ್ಯತ್ವವನ್ನು ಸಾಕ್ಷಾತ್ಕರಿಸಿ ತೋರಿಸುತ್ತದೆ.

'ಮನುಷ್ಯನು ಬದುಕುವುದು ಯಾವುದರಿಂದ ಎಂದರೆ....' ಮತ್ತು ಮನುಷ್ಯನಿಗೆಷ್ಟು ಭೂಮಿ ಬೇಕು. ಕತೆಗಳು ಕೂಡಾ ಮನುಷ್ಯನ ಶಕ್ತಿ ಮತ್ತು ಮಿತಿಯನ್ನು ಅಪೂರ್ವವಾಗಿ ಕಟ್ಟಿಕೊಡುತ್ತವೆ. ನಮ್ಮ ಶ್ರೇಷ್ಠ ಲೇಖಕರಲ್ಲಿ ಒಬ್ಬರಾದ ಮಾಸ್ತಿಯವರಿಗೆ ಟಾಲ್‌ಸ್ಟಾಯ್ ಬಹು ಪ್ರಿಯವಾದ ಲೇಖಕ. ಬಹುಶಃ ಇದಕ್ಕೆ ಒಂದು ಮುಖ್ಯ ಕಾರಣ ಮನುಷ್ಯನಲ್ಲಿರುವ 'ಕೇಡಿ'ನ ಬಗೆಗೆ ಇಬ್ಬರಿಗೂ ಇರುವ ಕುತೂಹಲ ಎನಿಸುತ್ತದೆ. ಕೇಡು ಮನುಷ್ಯನ ಪ್ರಭಾವವೋ, ದೌರ್ಬಲ್ಯವೋ ಎನ್ನುವುದರಷ್ಟೇ ಅದನ್ನು ಮೀರುವ ಶಕ್ತಿಯೂ ಅವನೊಳಗೆ ಇದೆಯಲ್ಲವೇ ಎನ್ನುವುದನ್ನು ಹುಡುಕಿಕೊಳ್ಳುವುದರಲ್ಲಿ ಇಬ್ಬರಿಗೂ ಅಪಾರ ಆಸಕ್ತಿ ಇದೆ.

ಕತೆಗಳ ಅನುವಾದದ ಬಗ್ಗೆ ಕೆಲವು ಮಾತುಗಳನ್ನು ಹೇಳಲೇಬೇಕು. ಸಾಹಿತ್ಯದ ವಿದ್ಯಾರ್ಥಿಗೆ ಭಾಷೆಯ ಪರಿಶ್ರಮದ ಅರಿವು ಇರಲೇಬೇಕು ಎನ್ನುವುದೊಂದು ಕರಾರು. ಮಾಧವ ಚಿಪ್ಪಳಿಯವರಿಗೆ ಬರವಣಿಗೆಯ ಬಗೆಗಿನ ಮೋಹದ ಜೊತೆಗೇ ಅದಕ್ಕೆ ಬೇಕಾದ ತಯಾರಿಯ ಸ್ಪಷ್ಟ ಅರಿವು ಇದೆ ಎನ್ನುವುದು ಈ ಅನುವಾದಿತ ಕತೆಗಳನ್ನು ಓದಿದ ಯಾರ ಅನುಭವಕ್ಕಾದರೂ ಬರುತ್ತದೆ. ಪದಗಳ ಆಯ್ಕೆ ಮತ್ತು ವಾಕ್ಯ ರಚನೆಗಳಲ್ಲಿ ಅವರು ವಹಿಸಿರುವ ಎಚ್ಚರ ಬರವಣಿಗೆಯನ್ನು ಅವರು ಗಂಭೀರವಾಗಿ ತೆಗೆದುಕೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಇನ್ನೂ ಹಲವಾರು ಅತ್ಯುತ್ತಮ ಅನುವಾದ ಕೃತಿಗಳನ್ನು ಅವರಿಂದ ನಿರೀಕ್ಷಿಸುವುದು ನಮ್ಮ ಹಕ್ಕು ಎನ್ನುವಷ್ಟು ಒಳ್ಳೆಯ ಅನುವಾದಗಳು ಈ ಕತೆಗಳು.

● ಡಾ.ಎಂ.ಎಸ್.ಆಶಾದೇವಿ



ಸರ್ಕಾರ ಮಲಗಿದೆ ಭವಿಷ್ಯ ಪಾಯಿಖಾನೆಯಲ್ಲಿದೆ

ಮಗ ತಂದೆಗೆ ಕೇಳಿದ : "ಅಪ್ಪಾ ರಾಜಕೀಯವೆಂದರೇನು?"

ತಂದೆ : "ನಾನು ಮನೆಗೆ ದುಡ್ಡು ತರುವುದರಿಂದ ನಾನು ಬಂಡವಾಳಶಾಹಿ. ಆ ಹಣವನ್ನು ಹೇಗೆ ಬಳಸುವುದೆಂದು ನಿನ್ನ ತಾಯಿ ನೋಡಿಕೊಳ್ಳುವುದರಿಂದ ಆಕೆ ಸರ್ಕಾರವಿದ್ದಂತೆ. ನಿನ್ನ ತಾತ ಎಲ್ಲವನ್ನೂ ನೋಡ್ತಾ ಇರೋದರಿಂದ ಆತ ಕಾರ್ಮಿಕ ಸಂಘಟನೆ ಇದ್ದಂತೆ. ನಮ್ಮ ಮನೆ ಕೆಲಸದಾಕೆ ದುಡಿಯುವ ವರ್ಗ. ನಾವೆಲ್ಲ ನಿನಗೆ ಒಳ್ಳೆಯದಾಗೋದನ್ನೇ ಬಯಸ್ತೀವಿಯಾದ್ದರಿಂದು ನೀನು 'ಜನತೆ' ಇದ್ದಂತೆ. ನಿನ್ನ ಕಿರಿಯ ಸಹೋದರ ನಮ್ಮ ಭವಿಷ್ಯ ಇದ್ದಂತೆ..."

ರಾತ್ರಿ ಹೊತ್ತು ಮಗ ತನ್ನ ಕಿರಿಯ ಸಹೋದರ ಹಾಸಿಗೆಯಲ್ಲಿ ಕಕ್ಕಸು ಮಾಡಿ ಅತ್ತಾಗ ಎಚ್ಚರಗೊಂಡ. ಅಪ್ಪ ಅವ್ವನನ್ನು ಕರೆಯಲು ಅವರ ರೂಮಿಗೆ ಹೋದ. ಅಲ್ಲಿ ಒಬ್ಬಳೇ ಮಲಗಿದ್ದ ತಾಯಿಯನ್ನು ಎಬ್ಬಿಸುವಲ್ಲಿ ವಿಫಲವಾದ. ನಂತರ ಕೆಲಸದಾಕೆಯನ್ನು ಕಾಣಲು ಹೋದ. ಅಲ್ಲಿ ಅವಳೊಂದಿಗೆ ಅಪ್ಪ ಚಕ್ಕಂದವಾಡುತ್ತಿದ್ದ. ಇದೆಲ್ಲವನ್ನು ಕಿಟಕಿಯಲ್ಲಿ ಅಜ್ಜ ಕದ್ದು ನೋಡ್ತಾಯಿದ್ದ. ಏನೂ ಮಾಡಲಾಗದ ಹುಡುಗ ಸುಮ್ಮನೇ ಮಲಗಿದ.

ಮರುದಿನ ಮುಂಜಾನೆ ಅಪ್ಪ ಮಗನಿಗೆ "ಈಗ ಹೇಳು, ರಾಜಕೀಯ ಎಂದರೇನು?" ಎಂದು ಪ್ರಶ್ನಿಸಿದ. ಅದಕ್ಕೆ ಮಗ ಉತ್ತರಿಸಿದ : "ಬಂಡವಾಳಶಾಹಿ ದುಡಿಯುವ ವರ್ಗವನ್ನು ಶೋಷಿಸುತ್ತಾನೆ. ಅದು ಗೊತ್ತೇ ಇಲ್ಲದಂತೆ ಸರ್ಕಾರ ಮಲಗಿರುತ್ತದೆ. ಕಾರ್ಮಿಕ ಸಂಘಟನೆ ಏನೊಂದನ್ನು ಮಾಡದೇ ಸುಮ್ಮನೆ ನೋಡ್ತಾ ಇರುತ್ತೆ, ಜನರು ಮಾತ್ರ ನಿರ್ಲಕ್ಷಿಸಲ್ಪಡುತ್ತಾರೆ. ಭವಿಷ್ಯ ಪಾಯಿಖಾನೆಯಲ್ಲಿ ಬಿದ್ದಿರುತ್ತೆ... ಇದೇ ರಾಜಕೀಯ...."

ಎಡೂರಪ್ಪೇನಾರ ಆಗ್ಲಿ ಸರಾಪ್ ನಿಲ್ಸಿದ್ನಲ್ಲ ಸಾಕು ಬುಡ್ರ

ವಿಚಿತ್ರ ಲವಲವಿಕೆಯಿಂದ ಬಂದ ಉಗ್ರಿ, ಸೀರನನ್ನು ಮುಗುಟ್ಟ.

"ಇದ್ಯಾಕೊ ಸೀರಮಾವ ಎಡೂರಪ್ಪನ ಮಕದಂಗಾಗ್ಯ ನಿನ್ನ ಮಕ" ಎಂದ.

"ಅನ್ನೊಂದವರ ಮಳಿಯಾಗಿದ್ರೆ ಯಂಥಾ ದಾಗ್ಯಾಗದು . ನ್ನನ್ನೆದಿನ ಹೋಗಿ ನೋದ್ದೀನಿ. ಕಣದ ವಲ ಮೆಹೋಗ್ಯದೆ ಕಂಡ್ಯ" ಎಂದ.

ಯಲುಸೀಮೆ ಕಪ್ಪೆಪುರಾಣ

ಬಿ. ಚಂದ್ರೇಗೌಡ

ದನಿಗುಲ್ಲಾಯ್ತದೆ ಬುಡು."

"ಬರಿ ಹುಲ್ಲು ತಗಂಡೇನು ಮಾಡಿಲ, ಉಣ್ಣಕ್ಕೆ ಗಂಡ್ರೆ ಹಿಟ್ಟು ಗಂಟಲಲ್ಲಿ ಇಳಿಯದಿಲ್ಲ ಅಂಗಾಗ್ಯದೆ. ರಿಗೇಳನಾ?"

"ಇಷ್ಟಕೇ ಹಿಂಗಂತಿಯಲ್ಲಾ, ಆ ಉತ್ತರ ಕರ್ನಾಟಕದಲ್ಲಿ ಕೊಚಗಂಡೋಗ್ಯದೆ. ಅವುರ್ಯಾರಿಗೇಳಬೇಕು?"

"ಸರಕಾರ ಸಾಯ ಮಾಡ್ತ ಅದಂತಲ್ಲ ತಗೊ."

"ಸರಕಾರದ ಕತೆ ಮುಗುದಾಗ್ಲೆ ವಾರಾಯ್ತು, ಇನ್ನ ಮಾಡದೆಲ್ಲಿ ಬತ್ತೊ" ಎಂದು ಉಗ್ರಿ ತಮಾಷೆ ತುವಾಗ ಕಾಳಮಾವ,

"ಎಲ್ಲಿಗೆ ಬತ್ತ ಇವುರ ಜಗಳ?" ಎಂದ.

"ಅಯ್ಯೋ ಮಾವ, ಹತ್ತಲಿಲ್ಲ ಹರಿಲಿಲ್ಲ ಅನ್ನಂಗಾಗ್ಯದೆ. ರೆಡ್ಡಿಗಳು ಯಾತಕೂ ಬಗ್ಗತಾಯಿಲ್ಲ. ಎಡೂರಪ್ಪ ರ ಮಾಡಿ ಉಳಕಳನಾ ಅಂತ ಹೋರಾಡ್ತ ಕುಂತವುನೆ."

"ಸೋಬ ಕರಿಂದಾಚೆಯಿಂದ ಯಲ್ಲಾ ನ್ಯಡಿತಾಯಿರದು ತರಲ್ಲಾ" ಎಂದಳು ಜುಮ್ಮಿ.

"ಅದಂತು ನಿಜಕಣೆ. ಈ ಎಡೂರಪ್ಪ ಅವುಳ ಮ್ಯಾಕೆ ಕು ಅಂತ ದಕ್ಷಿಣ ಕನ್ನಡದಿಂದ ಬೆಂಗಳೂರಿಗೆ ಗೆಲ್ಲಿಸಿ ಮಂತ್ರಿ ಮಾಡಿದ. ಹಾಳು ಬಿದ್ದೋಗ್ಲಿ ಜನ ಸುಮ್ಮನಿದ್ರು. ಆದ್ರೆ ಅವುಳ ಮಂತ್ರಿ ಮಾಡಿ ರು ಜಿಲ್ಲೆ ಉಸ್ತುವಾರಿ ಮಂತ್ರಿ ಮಾಡಿದಾಗ. ರಿಗೆ ಉರಿಯತ್ತಿಗತ್ತು, ಆ ಉರಿ ತಣ್ಣಗಾಗಲೇಯಿಲ್ಲ. ರು ದಸರಾದಲ್ಲಿ ಯಾವ ಗಲ್ಲಿ ಗಟಾರ ನೋಡು ಬ್ಬರದೇ ಪೋಟಾ. ವಳ್ಳೆ ದಶರಥ ಕೈಕೆ ಪೋಟಾ ದಿದಂಗಾಗದು."

"ಅಂಗರೆ ಕರ್ನಾಟಕದ ಕೈಕೆ ಅನ್ನಿವುಳು?"

"ಅವುಳೇನು ಅಂತ ಕ್ಯಟ್ಕೊಳಲ್ಲ, ವಳ್ಳೆ ಕ್ಯಲಸಗಾತಿ ನೋಡಿದ್ರೆ, ಎಡೂರಪ್ಪನ ಮಂತ್ರಿಗಳಲ್ಲಿ ಇವುಳೆ ಕ್ಯಲಸ ಮಾಡುತಿದ್ಲು, ಆದ್ರೆ ಬ್ಯಾರೆಯೋರ ಕಾತೆವಳಿಕೂ ಕೈಹಾಕಿದಳಂತೆ. ಅದ್ಕೆ ಸಿಟ್ಟು ಬಂದು ಎಡೂರಪ್ಪನ ವಿರುದ್ಧ ತಿರುಗಿಬದ್ದಿದ್ದರಂತೆ."

"ಅವುಳ್ಯಾಕ್ ತಲೆಮ್ಯಾಲೆ ಕುಂದ್ರಿಸಿಗಂಡವುನೆ ಎಡೂರ? ಗದುಮಕ್ಯಾಗದಿಲವೆ?" ಎಂದ ಕಾಳಮಾವ.

"ಅದು ನೀನೇಳೊವಷ್ಟು ಸುಲಬಲ್ಲ ಕಣಮಾವ. ಅವುಳು ಅವುನ ಮನಸಿಗೆ ಹಿಡಿಸಿದ್ರೆ ಯಾರು ಚಾಡಿ ಹೇಳಿದ್ರೂ ತಲಿಗತ್ತದಿಲ್ಲ. ಅದಕ್ಕಿಂತ್ಲುವೆ ಎಡೂರಪ್ಪ ಒಂದೇ ಒಂದು ತಪ್ಪು ಮಾಡಿದ್ರೆ ಸರಿ ಮಾಡಿಕಬವುದಿತ್ತು, ಆದ್ರೆ ತಪ್ಪು ಮಾಡ್ತನೇ ಹೋದ. ಈಗ ಯಲ್ಲ ಸುತ್ತಿಗಂಡು ಗ್ವಣ್ಣಿಗೆ ಸಿಕ್ಕಿದ ನ್ವಣದಂಗಾಗ್ಯವುನೆ. ಈ ಕಾಲಾದ ಮ್ಯಾಲೆ ಆಕಾಲು ಆಕಾಲಾದ ಮ್ಯಾಲೆ ಮುಂಗಾಲು ಸಿಗಾಯ್ತು ಅನ್ನಂಗಾಗ್ಯದೆ. ಅವುನ್ನ ಯಾರು ಬಚಾವು ಮಾಡ್ತರೊ ಏನೊ ಆ ದೇವರಿಗೇ ಗೊತ್ತು."

"ಪಾಪ, ಅವುನಿಗೆ ಮದ್ಲಿಂದ್ಲೂ ಕಷ್ಟವೆಯ" ಎಂದಳು ಜುಮ್ಮಿ.

"ಊ ಕಣೆ, ಕುಮಾರಸ್ವಾಮಿ ಜ್ವತೆ ಸೇರಿ ಸರಕಾರ ಮಾಡಿದಾಗ ದ್ಯಾವೇಗೌಡ ಆಟ ಆಡಿಸಿ ಕೈಬುಟ್ಟ. ಕಡಿಗೆ ಅವುರು ಮಾಡಿದ್ನೆ ಹೇಳಿಕಂಡು ತಿರುಗಿ ಅಧಿಕಾರಕ್ಕೆ ಬಂದ. ಆದ್ರು ನೆಮ್ಮದಿ ಇಲ್ದಂಗಾಯ್ತು."

"ನೆಮ್ಮದಿ ಎಲ್ಲಿಂದ ಬರಬೇಕೊ ಉಗ್ರಿ?" ಎಂದು ವಾಟಿಸ್ಸೆ ಬಂದ. ಅವನ ಮಾತಿಗೆ ಯಾರೂ ಪ್ರತಿಕ್ರಯಿಸದೇ ಇದ್ದಾಗ,

"ಯಾರೂ ನೆಮ್ಮದಿಯಾಗಿರಬಾರದು. ನೆಮ್ಮದಿ ಇರದೆ ಆದ್ರೆ ಅಗೋ ನೋಡು ಆ ಸ್ಕೂಲು ಜಗಲಿ ಮ್ಯಾಲೆ ಮನಿಗ್ಯದಲ್ಲ ನಾಯಿ, ಆ ತರ ಇರಬೇಕಾಯ್ತದೆ."

"ಅಂಗರೆ ನೆಮ್ಮದಿಯಾಗಿರೋರ್ಯಲ್ಲ ನಾಯಿಗಳು ಅನ್ನು" ಎಂದ ಉಗ್ರಿ.

"ನಾನು ಆ ತರ ಹೇಳಲಿಲ್ಲ, ಮನುಷ್ಯನ ನೆಮ್ಮದಿನ ನಾಯಿ ನಿದ್ದೆಗೆ ಹೋಲಸಬ್ಯಾಡ, ಅದೆ ಬ್ಯಾರೆ ಇದೇ ಬ್ಯಾರೆ. ಆದ್ರೆ ಎಡೂರಪ್ಪನ ಆಲೋಚನೆ, ಮಾಡೊ ಕ್ಯಲಸ ನೋಡಿದ್ರೆ, ಅವೆಂದೂ ನೆಮ್ಮದಿ ಕೊಡೊ ಅಂತವಲ್ಲ ಅಂತ ನನಿಗೆ ಮೊದ್ಲೇ ಗೊತ್ತಿತ್ತು."

"ಅವುನೇನಾರ ಮಾಡ್ಲಿ, ಸರಾಪ್ ನಿಲ್ಸಿ ಹೆಂಗುಸ್ರು ನೆಮ್ಮದಿಯಾಗಿ ನಿದ್ದೆ ಮಾಡಂಗೆ ಮಾಡಿದ್ನಲ್ಲ, ಅದೇ ಸಾಕು ಬುಡ್ರ" ಎಂದಳು ಜುಮ್ಮಿ.

"ಅಂತೂ ಎಡೂರಪ್ಪ ಮಾಡಿರೊ ವಳ್ಳೆ ಕ್ಯಲಸ ಹೊಗಳೊ ಜನವ ನೋಡಿದೆ ನಾನು. ನಮ್ಮಕ್ಕ ಎಡೂರಪ್ಪನ ಅಭಿಮಾನಿಯಾಗ್ಯವುಳೆ."

"ಅಂಗೆ ತಿಳಕಳ್ಳ. ಆ ಹಾಳು ಸರಾಪಿನಿಂದ ಏಳೆಂಟು ಮನೆ ಹಾಳಾಗಿದ್ದೊ. ಈಗ ನೆಮ್ಮದಿಯಾಗ್ಯವೆ."

"ಇನ್ನಾ ವಳ್ಳೆ ಕ್ಯಲಸ ಮಾಡಿದ್ನಸಕ್ಕ."

"ಮಾಡಕ್ಕೆ ಬುಟ್ರು ತಾನೆಯ. ಆ ರೆಡ್ಡಿಗಳಿಗೇನಾಗಿತ್ತ ಜಗಳ ತಗದವುರಂತೆ?"


"ನೋಡಕ್ಕ, ರೆಡ್ಡಿಗಳ ವಿಷಯ ನಿನಿಗೆ ಗೊತ್ತಿಲ್ಲ, ಅವುರು ಮೂಲತಃ ಗಣಿಕಳ್ರು. ಅಂಥೋರನ ಈ ಪೇಪರ್‌ನೋರು ಗಣಿ ಧಣಿಗಳು ಅಂತ ಕರದ್ರು. ಅವುರ್ಕಿಂತ ರಾಜಕಾರಣಿಗಳು ಅಂದ್ರೆ ಯಡಗ್ಯೆಲಿ ದುಡ್ಡು ತಗೊ, ಬಲಗ್ಯೆಲಿ ಓಟು ಮಾಡು ಅನ್ನೊ ಜನ. ಸಾಮಾನ್ಯವಾಗಿ ಕ್ವಳ್ಳೆ ಹ್ವಡದ ವಳ್ಳೆ ಜನ ಅದ ಸ್ಟಾಕ್ ಮಾಡದಿಲ್ಲ, ಹಂಚತರೆ. ಅಂಗೆ ಅವುರು ಕುಮಾರಸ್ವಾಮಿಗೂ ದುಡ್ಡು ಕೊಟ್ಟಿದ್ರು."

"ನಿಜವೇನ್ಲ ನೀನೇಳದು?"

"ನಿಜವಾಗ್ಲು ಕಣಕ್ಕ. ಪ್ರತಿ ತಿಂಗಳು ನೂರೈವತ್ತು ಕೋಟಿ ಕೊಡದಕಿಂತ ಜಗಳ ತಗದ್ರೆ ಕೊಡಂಗಿಲ್ಲ ಅಂತ ಹೇಳಿ ತಿರುಗಿಬಿದ್ರು. ಅಮ್ಯಾಲೆ ಎಡೂರಪ್ಪನ್ನ ಮುಖ್ಯಮಂತ್ರಿ ಮಾಡಿದ್ರು."

"ಎಡೂರಪ್ಪನ್ನ ಮುಖ್ಯಮಂತ್ರಿ ಮಾಡಿದೋರು ಅವುರಾ?"

"ಊ ಮತ್ತೆ. ಆಪರೇಷನ್ ಕಮಲಕ್ಕೆ ಕಾಸು



ಕೊಟ್ಟೋರು ಯಾರು ಅಂತೀ? ಇದೇ ಜಗ್ಗೇಸನಿಗೆ ಮುವ್ವತ್ತು ಕೋಟಿ ಕೊಟ್ರಂತೆ. ಇನ್ನ ಉಳದೋರಿಗೆ ಎಷ್ಟು ಕೊಟ್ಟಿರಬೇಕು. ಅಂಥೋರ ಜ್ವತೆ ಎಡೂರಪ್ಪ ಸರಿಯಾಗಿ ಗುರುತಿಸಿಕೊಳ್ಳಿಲ್ಲ. ಅವುರೇಳಿದಂಗೆ ಕೇಳ್ಳಿಲ್ಲ. ಅದ್ಕೆ ತಿರುಗಿಬಿದ್ರು."

"ಅವುರೇನೊ ತಿರುಗಿಬಿದ್ರು, ಯಮ್ಮೆಲ್ಲೆಗಳ್ಯಾಕ್ಲ ತಿರುಗಿಬಿದ್ರು?" ಎಂದ ಸೀರ.

"ದೇವರಾಜ ಅರಸು ಕಾಲದಿಂದ ಎಮ್ಮೆಲ್ಲೆಗಳು ಮಂತ್ರಿ ಬಟಾವಡೆ ಕೇಳೊ ಜನಾಗಿದ್ದರಂತೆ ಚಿಗಪ್ಪಾ, ನೀನು ಅಧಿಕಾರದಲ್ಲಿ ಇರಬೇಕಾದ್ರೆ ನಮಿಗೂ ಮಸಿಕೊಡು ಅನ್ನೊರು ಯಾರು ಕೊಡ್ತರೊ ಅವುರ ಕಡಿಕೋಯ್ತರೆ.

ಅಂಗೆ ರೆಡ್ಡಿಗಳು ಕೇಳಿದ್ನೆ ಕೊಡ್ತರೆ. ಅದ್ಕೆ ಅತ್ತಗೋದ್ರು. ಅದಕ್ಕೆ ಕಾರಣ ಎಡೂರಪ್ಪ."

"ಎಡೂರಪ್ಪಾವತ್ತು ಜನ ವಿಶ್ವಾಸಕ್ಕೆ ತಗಂದಿದ್ದನೊ ವಾಟಿಸ್ಸೆ? ಯಲ್ಲಾ ಅವನ ಮೂಗಿನ ನ್ಯಾರಕ್ಕೆ ನ್ಯಡಿಬೇಕು ಅಂತನೆ. ಅದ್ಕೆ ಅಲವೆ ಹಿಂಗಾಗಿರದು?"

"ಎಡೂರಪ್ಪನ್ನ ಇಳಿಸಿ ಯಾರನ್ನೇರುಸ್ತರ್ಲ?" ಎಂದ ಕಾಳಮಾವ.

"ಲಾಸಾಗಿರೊ ಆಯಿಲ್ ಪ್ಯಾಕ್ಟರಿ ಓನರ್‌ನ ದ್ವಡಪ್ಪ."

"ಸರಿಯಾಗೇಳಲೆ."

"ಅದೇ, ಜಗದೀಶ್ ಶೆಟ್ಟರ್ ಅಂತ ಅವುನಲ್ಲಾ, ಅವುನ್ನ ಮುಖ್ಯಮಂತ್ರಿ ಮಾಡಬೇಕು ಅಂತ ವಂಟವುರೆ ರೆಡ್ಡಿಗಳು."

"ಅವುನ್ಯಂಗೇ?"

"ಅವುನ್ಯಂಗೇ ಅಂದ್ರೆ, ಪಾಪ ಅವುನಷ್ಟಕೆ ಅವುನಿರತನೆ. ರೆಡ್ಡಿಗಳ ಸವಾಸಕ್ಕೋಗದಿಲ್ಲ. ಆ ಕಡೆ ಮೈಸೂರು ಮಾರಾಜರು, ಈ ಕಡೆ ಹೈದರಾಲಿ ಇದ್ನಲ್ಲ ಅಂಗಾಯ್ತದೆ. ರೆಡ್ಡಿಗಳು ಗದಿ ಬದ್ಲಾಯಿಸಿಗಂಡು ಗಣಿ ಲೂಟ ಮುಂದುವರುಸ್ತರೆ. ವಸಿದಿನಾದ ಮ್ಯಾಲೆ ಶ್ರೀರಾಮುಲು ಅಂತ ವಬ್ಬ ಕುರುಮಾಮವುನೆ. ಅವುನ್ಯಂಗವುನಪ್ಪಾ ಅಂದ್ರೆ, ಅವುನ್ನ ನೋಡಿದೇಟಿಗೆ ಏನಂತಿ ಗೊತ್ತಾ?" ಎಂದು ವಾಟಿಸ್ಸೆ ಕಾಳಮಾವನ ಮುಖ ನೋಡಿದ. ಅವನು ಬಾಯಿಬಿಡಲಿಲ್ಲ, ಆಗ ಜುಮ್ಮಿ,

"ಏನಂತರ್ಲಾ?" ಎಂದಳು.

"ಇದ್ಯಾಕಪ್ಪ ಆಸುಪತ್ರಿಗೋಗಿಲ್ವೆ? ಹೋಗಿ ತೋರಿಸಿಕೊ ಅಂತಿ. ಅಂಗವುನೆ. ಅಂಥೊನ್ನ ಮುಂದೆ ಮುಖ್ಯಮಂತ್ರಿ ಅಂತ ಈ ರೆಡ್ಡಿಗಳು ಮುಂದಕೆ ನೂಕಬವುದು."

"ಅದ್ಯಾಕವುನ್ನುಕ್ತರೊ?" ಎಂದ ಉಗ್ರಿ.

"ಅವುನು ಆ ಕಡೆ ಜನಾಂಗದ ಲೀಡ್ರು ಕಣೊ ಉಗ್ರೀ. ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಕೊಪ್ಪಳದ ಕಡೆ ನಾಯಕರು ಅಂತ ಒಂದು ಜನಾಂಗ ಅದೆ. ಆ ಜನಾಂಗ ಇಲ್ಲಿಗಂಟ ಕಾಂಗ್ರೆಸ್ಸಿಗೆ ಓಟು ಮಾಡಿಕಂಡು ಕುರುಬರು ತರ ಇದ್ರು. ಕುರುಬರಿಗೆ ಸಿದ್ದರಾಮಯ್ಯ ಯಂಗೆ ಸಿಕ್ಕಿದ್ನೊ ಅದೇ ತರ ನಾಯಕರಿಗೆ ರಾಮುಲು ಸಿಕ್ಯವುನೆ. ಅವುರಿಂದ್ಲೆ ಈ ರೆಡ್ಡಿಗಳು ಗೆದ್ದು ಬತ್ತಾಯಿರದು. ಅಂಗೆ ನೋಡಿದ್ರೆ ಈಗಿನ ಜಗಳ ನಾಯಕರು ವರ್ಸಸ್ ಲಿಂಗಾಯಿತ್ರ ನಡುವೆ ನ್ಯದೀತಾ ಅದೆ. ಇನ್ನೊಂದರ್ತದಲ್ಲಿ ಬಿಜೆಪಿಲಿರೊ ಮೇಲ್ಜಾತಿ ಮತ್ತೆ ಕ್ಯಳಜಾತಿ ಜಗಳ ಅಂತ್ಲೂ ಹೇಳಬವುದು."

"ಅಂಗರೆ ರೇಣುಕಾಚಾರಿ ಯಾವ ಜಾತಿ?"

"ಅವುನು ಸ್ತ್ರೀ ಪೀಡಕ ಜಾತಿ. ಶೋಭಾ ಕರಂದ್ಲಾಜೆ ವಿರುದ್ಧ ಅವುನೆ ಯುದ್ಧ."

"ಅಂಗಂತಿಯಾ?"

"ಊ ಮತ್ತೆ?!"

ಂಜುಗಡ್ಡೆ ಮತ್ತು ಕೊಡಲಿ

ಇದು ಮತ್ತೆ ಮತ್ತೆ ಅಲ್ಲಲ್ಲಿ ಕಾಣಿಸಿಕೊಂಡು ನನ್ನಂಥವರನ್ನು ಎಚ್ಚರಿಸುತ್ತದೆ. ಇದನ್ನು ಹೇಳಿದವನು ಜರ್ಮನ್ ಕಾದಂಬರಿಕಾರ. ಈತನ ಮಾತನ್ನು ಮತ್ತೊಮ್ಮೆ ಹೇಳುವ ಬದಲು ಈತ ಎಂಥವನೆಂಬುದನ್ನು ವಿವರಿಸಬೇಕು. ಕಾಫ್ಕ ಹುಟ್ಟು ಕಾದಂಬರಿಕಾರ, ಯಾಕೆಂದರೆ ನಾವೆಲ್ಲ ತಿಳಿದು ಒಪ್ಪಿಕೊಂಡ ಸತ್ಯದ ಆಳಕ್ಕೆ ಹೋಗಿ ನೋಡುವವನು. ಅಲ್ಲಿಯ ವಾಸ್ತವ ಹೇಳುವವನು. ಒಬ್ಬ ಪ್ರೀತಿಯ ಅಣ್ಣ, ಈತ ಎಲ್ಲರಂತೆ ಬದುಕುತ್ತಿದ್ದವನು. ಒಂದು ದಿನ ಇವನ ನೆಂಟರಿಷ್ಟರು, ರಕ್ತಸಂಬಂಧಿಗಳು ನೋಡುತ್ತಾರೆ- ಈತ ದೊಡ್ಡ ಹುಳುವಾಗಿ ಮಾರ್ಪಾಟಾಗಿದ್ದಾನೆ! ಮೊದಲು ಅವರು ನಂಬುವುದಿಲ್ಲ, ಕ್ರಮೇಣ ಆತ ಅಸಹ್ಯ ಹುಳುವಾಗಿರುವುದು ಗೊತ್ತಾಗುತ್ತದೆ. ಮೊದಲು ಆತನ ಬಗ್ಗೆ ತಮಗಿದ್ದ ಪ್ರೀತಿಯ ಬಗ್ಗೆ ಮಾತನಾಡುತ್ತಾರೆ, ಆಮೇಲೆ ಆತ ತರುತ್ತಿದ್ದ ವರಮಾನದ ಬಗ್ಗೆ ಚಿಂತಿಸಿ ವ್ಯಥೆ ಪಡುತ್ತಾರೆ, ಆಮೇಲೆ ಆತನ ಅಸಹ್ಯ ರೂಪಿನಿಂದ ತಮಗಾಗುತ್ತಿರುವ ಅವಮಾನದ ಬಗ್ಗೆ ಯೋಚಿಸುತ್ತಾರೆ, ಆಮೇಲೆ.....



ಯಾರು ಯಾರ ಬಗ್ಗೆ ನಿಜವಾಗಿಯೂ ದುಃಖಪಡುತ್ತಾರೆ? ಇಲ್ಲ, ತಮ್ಮ ಲಾಭನಷ್ಟ ಕುರಿತು, ನೆಮ್ಮದಿ ಕುರಿತು ಮಾತ್ರ ಯೋಚಿಸುತ್ತಾರೆ.

"ಲೇಖಕ ಹೇಗೆ ಬರೆಯಬೇಕು?" ಎಂದು ಕೇಳಿದ ಕಾಫ್ಕ, "ಹೇಗೆ ಬರೆಯಬೇಕೆಂದರೆ, ಓದುಗರ ಆಳದಲ್ಲಿರುವ ನಿರ್ಲಕ್ಷ್ಯ ಅಲಿಪ್ತತೆಯ ಮಂಜುಗಡ್ಡೆಗೆ ಕೊಡಲಿಯಿಂದ ಹೊಡೆದಂತೆ ಬರೆಯಬೇಕು."

ಕಾಫ್ಕ ನೀಡುವ ವಾಸ್ತವ ಹಾಗಿರುತ್ತದೆ. ಇದನ್ನು ನಮ್ಮ ಯುವ ಲೇಖಕರು ನೆನಪಿಟ್ಟುಕೊಂಡರೆ ಒಳ್ಳೆಯದೆಂದು ಹೇಳಿದ್ದೇನೆ.

ಗುರುದಕ್ಷಿಣೆ

ಈ ವಾಸ್ತವ ಹೇಗಿರುತ್ತೆಂಬುದು ಕ್ಷಣವಾದರೂ ಕೆಲವರಿಗೆ ಹೊಳೆಯುವುದಿಲ್ಲ. ನೀವು ಕನ್ನಡ ಚಳವಳಿಗಾರ ನಾರಾಯಣಕುಮಾರ್ ಬಗ್ಗೆ ಕೇಳಿದ್ದೀರಿ. ಈತನನ್ನು ನಾನು ನಾವೆಲ್ಲ ಗೋಕಾಕ್ ಚಳವಳಿಯಲ್ಲಿ ಭಾಗವಹಿಸಿದ್ದಾಗಲೇ ನೋಡಿದ್ದೆ. ದೊಡ್ಡ ಗಂಟಲಲ್ಲಿ ಅರಚುತ್ತಿದ್ದ ಈ ನಾರಾಯಣಕುಮಾರ್‌ಗೆ ಯಾವ ಭಾಷೆ, ಭಾವನೆಯ ಬಗ್ಗೆಯೂ ಪ್ರೀತಿ ಇರಲಾರದೆಂದು ಆಗಲೇ ಅನ್ನಿಸಿತ್ತು. ಇವರು ತಮ್ಮ ಗುರು ಮತ್ತು ಗೆಳೆಯ ವಾಟಾಳ್ ನಾಗರಾಜ್ ಜೊತೆ ಜಗಳ ಆಡಿದ್ದು, ಜನತಾಪಕ್ಷದ ಸದಸ್ಯರಾಗಿದ್ದು, ಆಮೇಲೆ ಈತನ ಜೋರು ಕಂಡು ಮೆಚ್ಚಿದ ರಾಮಕೃಷ್ಣ ಹೆಗಡೆ ಬಿನ್ನಿಪೇಟೆಯಿಂದ ಟಿಕೆಟ್ ಕೊಡಿಸಿದ್ದು; ನಾರಾಯಣಕುಮಾರ್ ಗೆದ್ದಿದ್ದು- ಎಲ್ಲ ಎಲ್ಲರಿಗೆ ಗೊತ್ತು.




ಹೆಗಡೆಯಂಥ ರಾಜಕಾರಣಿಗೆ ಜನರನ್ನಾಗಲಿ, ಪರಿಸ್ಥಿತಿಯನ್ನಾಗಲಿ ತಿಳಿದುಕೊಳ್ಳುವ ಜಾಣತನ ಇಲ್ಲದಿರುವುದು ನೋಡಿ ಆಶ್ಚರ್ಯವಾಗುತ್ತದೆ. ಮೊನ್ನೆ ಕಾವೇರಿ ವಿವಾದ ಕುರಿತು ನಾರಾಯಣಕುಮಾರ್ ಒಂದು ಸಭೆ ಏರ್ಪಡಿಸಿ ಹೆಗಡೆ, ದೇವೇಗೌಡ ಮುಂತಾದವರನ್ನು ಭಾಷಣ ಮಾಡಲು ಕೇಳಿಕೊಂಡರು. ತಮ್ಮ ಶಿಷ್ಯ ನಾರಾಯಣಕುಮಾರ್ ಏರ್ಪಡಿಸಿದ್ದ ಸಭೆಗೆ ಹೆಗಡೆ ಹೆಮ್ಮೆಯಿಂದ ಹೋಗಿರಬೇಕು. ಅಲ್ಲಿದ್ದ ನಾರಾಯಣಕುಮಾರ್ ಬೇರೆ, ಮೊನ್ನೆ ತಾನೆ ವಾಟಾಳ್ ಜೊತೆಗೆ ಸ್ನೇಹ ಬೆಳೆಸಿಕೊಂಡು ರಾಜ್ಯೋತ್ಸವದ ಸಮಯದಲ್ಲಿ ಕಿತ್ತಾಡಿ ಈಗ ಸ್ವತಃ ನಾಯಕರಾಗಲು ಹವಣಿಸುತ್ತಿರುವ ಮನುಷ್ಯ. ತಮ್ಮ ಚೇಲರಿಂದಲೇ ಸಭೆ ತುಂಬಿಸಿದ್ದ ನಾರಾಯಣಕುಮಾರ್‌ಗೆ ಆತಿಥೇಯನಿಗಿರಬೇಕಾದ ಸಭ್ಯತೆಯಾಗಲಿ, ಹೆಗಡೆ ಬಗ್ಗೆ ಇರಬೇಕಾದ ಸೌಜನ್ಯವಾಗಲಿ ಇರಲಿಲ್ಲ. ಹೆಗಡೆ ಭಾಷಣ ಮಾಡತೊಡಗಿದೊಡನೆ ನಾರಾಯಣಕುಮಾರ್ ಶಿಷ್ಯರ ಗಲಭೆ ಶುರುವಾಯಿತು; ಕೆಟ್ಟದಾಗಿ ಬೈದು ಛೇಡಿಸತೊಡಗಿದರು-ನಾರಾಯಣಕುಮಾರ್ ಚೇಲರನ್ನು ಬೈದು ನಿರುತ್ಸಾಹಗೊಳಿಸಲಿಲ್ಲ, ಹೆಗಡೆಗೆ ಇದನ್ನೆಲ್ಲ ನೋಡಿ 'ಶಾಕ್' ಆಗಿರಬೇಕು!

ಆದರೆ ನಾರಾಯಣಕುಮಾರ್ ಎಂದಿನಂತೆ ಗಂಟಲು ಬಳಸಿ ಪುಟಿಂದ ಚಪ್ಪಾಳೆ ಗಿಟ್ಟಿಸಿಕೊಂಡರು. ಹೇಗಿದೆ ಶಿಷ್ಯನ ಗುರುದಕ್ಷಿಣೆ?

ಜನವರಿ 19,1992

ಭಾಜಪ ರೋಗಕ್ಕೆ ಪೂಜಾ ಮದ್ದು

ಅಂಕ



ಎಚ್.ಎಲ್. ಕೇಶವಮೂರ್ತಿ

ಭಾರತೀಯ ಜನತಾಪಕ್ಷದ ರೋಗ ಉಲ್ಬಣಿಸಿದೆ. ಅದು ಮೊದಲಿನಂತೆ ಆರೋಗ್ಯದಿಂದ ಕಂಗೊಳಿಸಬೇಕಾದರೆ ಸೂಕ್ತ ಚಿಕಿತ್ಸೆಯ ಅವಶ್ಯಕತೆ ಇದೆ ಎಂಬುದು ವರಿಷ್ಠರ ಅಭಿಪ್ರಾಯವಾಗಿದೆ. ಅರುಣ್ ಶೌರಿ ಅವರು ಈ ರೋಗಕ್ಕೆ ಶಸ್ತ್ರಚಿಕಿತ್ಸೆಯೇ ಮದ್ದು ಎಂದು ಸ್ಪಷ್ಟಪಡಿಸಿದ್ದಾರೆ. ಆದರೆ ಆರೆಸ್ಸೆಸ್‌ನ ಸರಸಂಚಾಲಕರಾದ ಮೋಹನ್‌ರಾವ್ ಭಾಗವತ್‌ರು ಇದನ್ನು ಒಪ್ಪಲು ಸಿದ್ಧರಿಲ್ಲ. ಅವರ ದೃಷ್ಟಿಯಲ್ಲಿ ಔಷಧೋಪಚಾರ, ಶಸ್ತ್ರಚಿಕಿತ್ಸೆ, ಕೀಮೋಥೆರಪಿ ಇವುಗಳಲ್ಲಿ ಯಾವುದು ಸೂಕ್ತ ಎಂದು ರೋಗಿಯೇ ಸ್ಪುತಪಡಿಸಲಿ ಎಂದಿದ್ದಾರೆ. ರೋಗ ಯಾವ ಭಾಗಕ್ಕೆ ತಗುಲಿದೆ, ಯಾವ ಸ್ಥಿತಿಯಲ್ಲಿದೆ ಎಂಬುದು ರೋಗಿಗೇ ಚೆನ್ನಾಗಿ ತಿಳಿದಿರುವುದರಿಂದ ಅವರೇ ಸೂಕ್ತ ಚಿಕಿತ್ಸೆಯನ್ನು ಆಯ್ಕೆ ಮಾಡಿಕೊಳ್ಳಲಿ ಎಂಬುದು ಅವರ ಸಲಹೆ ಆಗಿದೆ. ಇದಕ್ಕೆ ಮುರಳಿ ಮನೋಹರ ಜೋಷಿ ಅವರ ಸಮ್ಮತಿ ಇಲ್ಲ. ಅವರನ್ನು ಈ ರೋಗ ಕುರಿತು ಪ್ರಶ್ನಿಸಿದಾಗ 'ನಾನು ರೋಗಿ, ಅವರು ವೈದ್ಯರು. ಅವರೇ ರೋಗ ಎಂತಹದ್ದೆಂದು ತಪಾಸಣೆ ಮಾಡಿ ಚಿಕಿತ್ಸೆ ನೀಡಲಿ' ಎಂದು ಹೇಳಿದ್ದಾರೆ. ರಾಜನಾಥ ಸಿಂಗ್ ಅವರಿಗೆ ರೋಗ ಬಂದಿರುವುದೇ ಗಮನಕ್ಕೆ ಬಂದಿಲ್ಲ. ಹೀಗೆ ಬಂದಿದೆ ಎಂದು ಹೇಳುವವರು ಮಾನಸಿಕ ಅಸ್ವಸ್ಥರಿರಬೇಕು ಎಂದು ತಮ್ಮ ಅಸಮ್ಮತಿ ಸೂಚಿಸಿದ್ದಾರೆ.

ಮೋಹನರಾವ್ ಭಾಗವಂತರು ಭಾಜಪಕ್ಕೆ ಬಂದಿರುವುದು ಎಂತಹ ರೋಗ? ಗುಣಪಡಿಸಬಹುದು? ಅಥವಾ ಮಾರಣಾಂತಿಕವೊ? ಎಂಬುದನ್ನು ಸ್ಪಷ್ಟಪಡಿಸಿದ್ದರೆ ಉತ್ತಮ ಇತ್ತು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಆದರೆ ಅದಕ್ಕೆ ಅವರು ಸಿದ್ಧರಿಲ್ಲ. "ಕಾಯಿಲೆ ಬಂದಿರುವುದನ್ನು ಸೂಚಿಸುವುದಷ್ಟೇ ನಮ್ಮ ಕೆಲಸ. ಚಿಕಿತ್ಸೆ ಅವರಿಗೆ ಬಿಟ್ಟದ್ದು. ಭಾರತೀಯ ಜನತಾಪಕ್ಷಕ್ಕೂ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ. ಒಂದು ವೇಳೆ ಅವರು ಅಪೇಕ್ಷಿಸಿದಲ್ಲಿ ನಾವು ಸಲಹೆ ನೀಡುತ್ತೇವೆ. ನಮ್ಮ ಸ್ವಯಂಸೇವಕರನ್ನು ಪಕ್ಷದ ಸಂಘಟನೆಗೆ ಕೋರಿದರೆ ನೀಡುತ್ತೇವೆ. ಈಗ ಅವರು ಆ ಪ್ರಸ್ತಾಪ ಮಾಡಿಲ್ಲ, ಆದುದರಿಂದ ನಾವು ಮಧ್ಯೆ ಬಾಯಿ ಹಾಕುವುದಿಲ್ಲ" ಎಂದು ವಿವರಣೆ ನೀಡಿದ್ದಾರಾದರೂ "ಹಿಂದೂಸ್ತಾನ, ಹಿಂದೂ ರಾಷ್ಟ್ರ ಸ್ಥಾಪನೆಗಾಗಿ ಶ್ರಮಿಸುತ್ತಿರುವ ಸಂಘಟನೆಯಾದ್ದರಿಂದ ಕೆಲವು ಸಲಹೆಗಳನ್ನು ಆಗಾಗ್ಗೆ ನೀಡುವುದು ಅನಿವಾರ್ಯ ಆಗುತ್ತದೆ: ಈ ನಿಟ್ಟಿನಲ್ಲಿ ರೋಗಗ್ರಸ್ತ ಆಗಿದೆ ಎಂಬ ಸೂಚನೆಯನ್ನು ಮಾತ್ರ ನೀಡುತ್ತಿದ್ದೇವೆ" ಎಂದು ವ್ಯಾಖ್ಯಾನಿಸಿದ್ದಾರೆ.

ಈ ಎಲ್ಲ ಬೆಳವಣಿಗೆಗಳಿಂದ ಭಾಜಪ ರೋಗಗ್ರಸ್ತವಾಗಿದೆ ಎಂಬುದು ಖಚಿತವಾದಂತಾಗಿದೆ. ಇತ್ತೀಚೆಗೆ ಚುನಾವಣೆ ನಡೆದ ಎಲ್ಲಾ ರಾಜ್ಯಗಳಲ್ಲೂ ಅದು ಹೀನಾಯ ಸೋಲು ಅನುಭವಿಸಿದ್ದರಿಂದ ಈ ಅಭಿಪ್ರಾಯ ಮೂಡಲು ಪ್ರಚೋದನಾಕಾರಿಯಾಗಿದೆಯಾದರೂ ಪ್ರಥಮ ಬಾರಿಗೆ ದಕ್ಷಿಣ ರಾಜ್ಯದಲ್ಲಿ ಅಧಿಕಾರ ಗದ್ದುಗೆ ಏರಿದ ರಾಜ್ಯ ಪಕ್ಷಕ್ಕೂ ಈ ರೋಗ ಬಡಿದಿದೆಯೆ ಎಂಬುದನ್ನು ಭಾಗವತರು ಸ್ಪಷ್ಟಪಡಿಸಿಲ್ಲ. ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರಗೌಡರಿಗೆ ಯಾವ ರೋಗವೂ ಕಾಣಿಸುತ್ತಿಲ್ಲ, ರೋಗ ನಿರೋಧಕ ಮದ್ದನ್ನು ಉಣಿಸಿಯೇ ಈ ಮಗುವನ್ನು ಬೆಳೆಸಿದ್ದೇವೆ ಎಂಬುದು ಅವರ ಅಭಿಮತ. ಪಕ್ಷದಲ್ಲಿ ಎದ್ದಿರುವ ಭಿನ್ನಮತ ಒಟ್ಟು ಕುಟುಂಬದ ಮಕ್ಕಳ ರಂಪಾಟವಾಗಿ ಮಾತ್ರ ಕಾಣುತ್ತಿದೆ. ಮಕ್ಕಳು ಅತ್ತಾಗ ಏನು ಮಾಡುತ್ತಾರೆ ಹಿರಿಯರಾದವರು, ಮುತ್ತು ಕೊಟ್ಟು ವೈನ ಮಾಡುತ್ತಾರೆ. ಹಾಗೆಯೇ ಇಲ್ಲಿಯೂ ಮುತ್ತು ಕೊಟ್ಟು ಸರಿಪಡಿಸಬಹುದು ಎಂಬುದು ತಮ್ಮ ಮನದಾಳದಲ್ಲಿರುವುದನ್ನು ಬಯಲು ಮಾಡಿದ್ದಾರೆ. ಆದರೆ ಮುತ್ತು ಕೊಡುವವರು ಯಾರು? ಸ್ವೀಕರಿಸುವವರು ಯಾರ್ರು? ಎಂತಹ ರೀತಿಯ ಮುತ್ತು? ಎಂಬುದನ್ನು ಬಹಿರಂಗಗೊಳಿಸಿಲ್ಲ. ಗೌಡರದ್ದು ಈ ಕಾಣದ ರೋಗಕ್ಕೆ 'ಮುತ್ತಿನ ಚಿಕಿತ್ಸೆ' ಎಂದಾಯಿತು. ಅವರ ತಲೆಯಲ್ಲಿ ಈಗ ಇರುವುದು ಒಂದೇ ಮಂತ್ರ ಅಂತೆ. ಭಿನ್ನಮತ ನಿವಾರಕ ಮಂತ್ರವೇ ಅದು ಎಂದರೆ ಅದು 'ಅಭಿವೃದ್ಧಿ ಮಂತ್ರ' ಅಂತೆ! ಅದನ್ನು ಅವರು ಮಂತ್ರ ಘೋಷಿಸುವಂತೆಯೇ ಮೂರು ಬಾರಿ 'ಅಭಿವೃದ್ಧಿ ಅಭಿವೃದ್ಧಿ ಅಭಿವೃದ್ಧಿ' ಎಂದು ಮಂತ್ರದಂತೆಯೇ ಘೋಷಿಸಿದರು!

ಅಭಿವೃದ್ಧಿಯ ಮಂತ್ರವೇ ಭಿನ್ನಮತಕ್ಕೆ ನಾಂದಿ ಹಾಡಿದಂತಿದೆ. ನಾಯಕತ್ವ ಬದಲಾವಣೆಯೇ ಅಭಿವೃದ್ಧಿ ಎಂದು ನಂಬಿರುವ ಪಂಗಡಕ್ಕೆ ಪುರಾಣದ ಖಳನಾಯಕರ ಅಂಶಗಳೆಲ್ಲ ಯಡ್ಡಿ ರೂಪದಲ್ಲಿ ಮತ್ತೆ ಜನ್ಮ ತಾಳಿರುವಂತೆ ಗೋಚರಿಸುತ್ತಿದ್ದು ಹೈದರಾಬಾದು, ಗೋವಾ ಮುಂತಾದ ಸ್ಥಳದಲ್ಲಿ ಐಷಾರಾಮಿ ಹೋಟೆಲುಗಳಲ್ಲಿ 'ಐಷಾರಾಮಿ ಅಭಿವೃದ್ಧಿ' ಮಂತ್ರ ಜಪಿಸುವುದರಲ್ಲಿ ತಲ್ಲೀನರಾಗಿದ್ದಾರೆ. ಇದನ್ನು ಮೆಚ್ಚದ ಕೆಲವರಿಗೆ ಇದು ಮೋಜಿನ ಪ್ರವಾಸವಾಗಿ ತೋರುತ್ತಿದೆಯಾದರೂ 'ಮೋಜಿನ ಅಭಿವೃದ್ಧಿ' ಎಂದೇ ಪರಿಗಣಿಸಬಹುದಾಗಿದೆ.

ಯಡ್ಯೂರಪ್ಪನವರು 'ಮೌನವ್ರತ'ವೇ ಅಭಿವೃದ್ಧಿ ಎಂದು ನಂಬಿರುವಂತಿದೆ. ಸದಾ ಅವರದ್ದು 'ಮೌನವ್ರತ' ಮಂತ್ರ. ಕುಮಾರಸ್ವಾಮಿ, ರೇವಣ್ಣ ಮಾತು ಒತ್ತಟ್ಟಿಗಿರಲಿ. ದೇವೇಗೌಡರಂತಹ ದೇವೇಗೌಡರೇ ಆರೋಪದ ಸುರಿಮಳೆಗೈದಾಗ ಮೌನಕ್ಕೆ ಶರಣು ಹೋದರು ಯಡ್ಡಿ. "ನಾನು ಆ ಕುಟುಂಬದ ಯಾವುದೇ ಆರೋಪಗಳಿಗೆ ಉತ್ತರ ನೀಡಲು ಬಯಸುವುದಿಲ್ಲ, ಮೌನ ತಾಳುತ್ತೇನೆ" ಅಂದಿದ್ದರು. ಕೋಪದ ಭರದಲ್ಲಿ ವ್ರತಭಂಗ ಆದದ್ದೂ ನಿಜವೆ. ಹಾಳಾದ ಮುಂಗೋಪ. ಹಾಗೆ ಮಾಡಿಸುತ್ತಲೇ ಇರುತ್ತೆ, ಸಿಗರೇಟು ಸೇದುವವರು ಬಿಡ್ತೀನಿ ಅಂದ ಹಾಗೇನೆ ಇದೂವೆ ಅನ್ನಿ. ಅಂತೂ ವ್ರತ ಮಾಡುತ್ತಲೇ ಇದ್ದದ್ದಂತೂ ನಿಜ. ಈಗ 'ಆಪರೇಷನ್ ಕಮಲ'ದ ಖ್ಯಾತಿಯ ರೆಡ್ಡಿ ಬ್ರದರ್ಸ್ ಕಂಸ, ಕೀಚಕ ಎಂದು ಮಹಾಭಾರತದ ಖಳ ನಾಯಕರಿಗೆಲ್ಲ ತಮ್ಮನ್ನು ಹೋಲಿಸಿ ಅವಮಾನಗೊಳಿಸುತ್ತಿದ್ದರೂ "ನಾನು ಯಾವುದೇ ಅಭಿಪ್ರಾಯ ಸೂಚಿಸಬಾರದೆಂದು ಹೈಕಮಾಂಡಿನಿಂದ ಸೂಚನೆ ಬಂದಿರುವುದರಿಂದ ಮೌನ ವಹಿಸಿದ್ದೇನೆ" ಎನ್ನುತ್ತಿದ್ದಾರೆ. ಇಂತಹ ಬಿಕ್ಕಟ್ಟಿನ ಮೌನವ್ರತ ಮೋಡಿಗೆ ಒಳಗಾಗಿದ್ದರೂ ಮಲ ಮೂತ್ರ ವಿಸರ್ಜನೆಗೂ, ಆಹಾರ, ಮೈಥುನ ಸಂಬಂಧಿಸಿದ ಸಂಗತಿಗಳಿಗೂ ಹೈಕಮಾಂಡ್ ಆದೇಶವನ್ನೇ ಎದುರು ನೋಡಬೇಕಾದ ಪ್ರಮೇಯ ಇನ್ನೂ ಬಂದಂತಿಲ್ಲ. ಯಾಕೆಂದರೆ ಭಿನ್ನಮತೀಯ ಶಾಸಕರು ಹೊರರಾಜ್ಯಗಳಿಗೆ ವಲಸೆ ಹೋಗುತ್ತಿರುವಾಗ ಶ್ರೀಯುತರು, ಜ್ಯೋತಿಷಿಯ ಸಲಹೆ ಮೇರೆಗೆ, ಕುಕ್ಕೆಸುಬ್ರಹ್ಮಣ್ಯಕ್ಕೆ ತೆರಳಿ ಒಣಗಿದ ದ್ರಾಕ್ಷಿ ತುಲಾಭಾರ ನಡೆಸಿ ಸರ್ಪದೋಷದಿಂದ ಮುಕ್ತರಾದರಲ್ಲದೆ ಆ ಪವಿತ್ರ ಕ್ಷೇತ್ರದ ಪ್ರಚಾರಕ್ಕೆ ಪುಕ್ಕಟೆ ಸಹಾಯ ಮಾಡಿದರು!



ಯಡ್ಯೂರಪ್ಪನವರ ಈ ಯಾತ್ರೆಯಿಂದ ಲಾಭ ಗಳಿಸಿದ್ದು ಯಾರು? ಒಂದು ಕುಕ್ಕೆ ಸುಬ್ರಹ್ಮಣ್ಯ ಖರೆ. ಇನ್ನೊಂದು... ಟಿವಿ ವಾಹಿನಿಗಳ ಜ್ಯೋತಿಷಿಗಳು! ಈಗ ಅವರಿಗೆ ಎಲ್ಲಿಲ್ಲದ ಬೇಡಿಕೆ.... ಪಾಂಡಿತ್ಯ ಪ್ರದರ್ಶನಕ್ಕೆ ಅದ್ಭುತ ಅವಕಾಶ!

'ಈ ಪೂಜೆಯಿಂದ ಯಡ್ಯೂರಪ್ಪನವರಿಗೆ ಲಾಭ ಆಗಿದೆಯೆ?'

'ಲಾಭವೂ ಇಲ್ಲ, ನಷ್ಟವೂ ಇಲ್ಲ'

ಇಂತಹ ಸಂದಿಗ್ಧ ಪರಿಸ್ಥಿತಿ ಉದ್ಭವಿಸಲೇನು ಕಾರಣವೆಂದರೆ ಯಡ್ಯೂರಪ್ಪನವರಿಗೆ 'ಸರ್ಪದೋಷ' ನಿವಾರಣೆ ಆಗಿಲ್ಲ! ಇದು ನಿವಾರಣೆ ಆಗಬೇಕಾದರೆ ಕನಿಷ್ಠ ಇಪ್ಪು ಮಂಡಳ ಪೂಜೆ ಸಲ್ಲಿಸಬೇಕು. ಅದನ್ನು ಅವರು ಮಾಡಿಲ್ಲ!

ಅವರು ರಾಜ್ಯದ ಮುಖ್ಯಮಂತ್ರಿ. ಕಾಲದ್ದಕ್ಕೆ ಭುಗಿಲೆದ್ದಿರುವ ಭಿನ್ನಮತ. ಮಂಡಲಿ ಗಟ್ಟಳೆ ಮೂಗು ಹಿಡಿದು ಕುಕ್ಕೆ ಸುಬ್ರಹ್ಮಣ್ಯದಲ್ಲಿರಲು ಅಸಾಧ್ಯದ ಮಾತು. ಹಾಗಾಗಿ ಹೀಗೆ ಹೋಗಿ ಹಾಗೆ ಬಂದರು. ಸರ್ಪದೋಷ ನಿವಾರಣೆ ಹೇಗೆ ಸಾಧ್ಯ?

ಅಂದರೆ... ದೊಡ್ಡವರ ಸರ್ಪರೋಗ ನಿವಾರಣೆ ಸಾಧ್ಯವೇ ಇಲ್ಲ ಅಂದ ಹಾಗಾಯಿತು!

ಇಲ್ಲ, ಇಲ್ಲ... ಹಾಗಲ್ಲ. ಗುರೂಜಿಯವರ ಮಾತನ್ನು ಗಮನವಿಟ್ಟು ಕೇಳಿ.

ಕರುಣಾಕರ ರೆಡ್ಡಿಯವರ ಮನೆಗೆ ಹಾವು ನುಗ್ಗಿತು! ಅಂದರೆ ಏನೋ ದೋಷ ಇದೆ! ಪರಿಹಾರಕ್ಕೆ ಸಮಯದ ಅಭಾವ. ಹಾಗಂತ ಸುಮ್ಮನಿರುವಂತಿಲ್ಲ. ಅದಕ್ಕೊಂದು ಪರಿಹಾರ ಮಾರ್ಗ..... ಜನಜಂಗುಳಿ ಹೆಚ್ಚಿರುವ ದೇವಾಲಯಗಳಿಗೆ ನಿಮಿಷಾರ್ಧದಲ್ಲಿ ಆ ಭಗವಂತ ಹಣವಂತರಿಗೆ ಅಧಿಕಾರಸ್ಥರಿಗೆ ಸೇವಾ ಕೈಂಕರ್ಯದ ಭಾಗ್ಯ ಒದಗಿಸಲ್ಲವೆ ಹಾಗೇನೇ ಇದು.... ಸ್ಪೆಷಲ್ ಪೂಜೆ! ದಿಢೀರ್ ಸರ್ಪದೋಷ ನಿವಾರಣೆ ಆಗುತ್ತದಂತೆ!

ಅಂದರೆ ಕರ್ನಾಟಕದ ಭಾಜಪಕ್ಕೆ ಬಾಧಿಸುತ್ತಿರುವುದು ಸರ್ಪದೋಷ. ಅದಕ್ಕೆ ಸೂಕ್ತ ಚಿಕಿತ್ಸೆ-ಕುಕ್ಕೆ ಸುಬ್ರಹ್ಮಣ್ಯ ಪೂಜೆ! ಮಂತ್ರಿ ಮಹೋದಯರೆಲ್ಲರೂ ಕುಕ್ಕೆ ಸುಬ್ರಹ್ಮಣ್ಯಕ್ಕೆ ಯಾತ್ರಾರ್ಥಿಗಳಾಗಿ ಹೋಗಿ ಪೂಜೆ ಸಲ್ಲಿಸುವುದರ ಬದಲಾಗಿ ಆ ಸ್ವಾಮಿಯನ್ನು ವಿಧಾನಸೌಧಕ್ಕೇ ಸ್ಥಳಾಂತರಿಸಿ ಪ್ರತಿಷ್ಠಾಪಿಸುವುದರಿಂದ ರಾಜ್ಯಕ್ಕೇ ತಗುಲಿರಬಹುದಾದ ಸರ್ಪದೋಷ ನಿವಾರಣೆ ಸಾಧ್ಯವಾಗಬಹುದು ಎಂಬುದು ಕೆಲವರ ಅಭಿಪ್ರಾಯವಾಗಿದೆ. ಇದು ಅಷ್ಟು ಸುಲಭದ ಮಾತಲ್ಲ, ಸುಬ್ರಹ್ಮಣ್ಯ ಸ್ವಾಮಿ ವಿಧಾನಸೌಧಕ್ಕೆ ಆಗಮಿಸಿದರು ರೋಗ ನಿವಾರಣೆಯಾಗುವ ಲಕ್ಷಣ ಇಲ್ಲ. ಏಕೆಂದರೆ ಮಹಾನ್ ಜ್ಯೋತಿಷಿಗಳ ಮತ್ತು ಪ್ರಕಾಂಡ ವಾಸ್ತು ಪಂಡಿತರ ಅಭಿಪ್ರಾಯದಲ್ಲಿ ವಿಕಾಸಸೌಧರ ವಾಸ್ತುವೇ ದೋಷಯುಕ್ತವಾದದ್ದು!

ಹಾಗಾದರೆ ರಾಜ್ಯವನ್ನು ರೋಗಮುಕ್ತ ಮಾಡಲು ಮಾರ್ಗವೇ ಇಲ್ಲವೆ ಎಂದು ಚಿಂತಿಸಬೇಕಿಲ್ಲ, ಇದಕ್ಕೆ ಒಂದು ಸುಲಭ ಪರಿಹಾರ ಇದೆ. ಅದೆಂದರೆ.... ಅಧಿಕಾರ ಕೇಂದ್ರಿತ ಕಟ್ಟಡಗಳನ್ನೆಲ್ಲ ನಾಶಪಡಿಸಿ!

ರೆಡ್ಡಿಗಳ ಬಗ್ಗೆ ತೆಲುಗರಲ್ಲಿ ಅಸಹ್ಯ

ಹೊಗಳಿಕೆ ತೆಗಳಿಕೆ

ಬಳ್ಳಾರಿ ಗಣಿಗಳ್ಳರು ಮಾಡುತ್ತಿರುವ ನಾಡಿನ ಸಂಪತ್ತಿನ ಹಗಲುದರೋಡೆ ಮತ್ತು ಕೀಳು ರಾಜಕೀಯಗಳು ತೆಲುಗು ಮನೆತನದವನಾದ ನನ್ನಲ್ಲಿ ಅಸಹ್ಯ ಮೂಡಿಸಿವೆ. ಕರ್ನಾಟಕದಲ್ಲಿ ಸಾವಿರಾರು ವರ್ಷಗಳಿಂದ ವಾಸಿಸುತ್ತ ಬಂದಿರುವ ತೆಲುಗರು ಕನ್ನಡಿಗರೊಂದಿಗೆ ಸಾಮರಸ್ಯದಿಂದ ಬದುಕುತ್ತಿದ್ದಾರೆ. ತೆಲುಗು ಮೂಲದ ಅನೇಕರು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದು ಕನ್ನಡಿಗರು ಅಂತಹ ಲೇಖಕರನ್ನು ತಮ್ಮವರನ್ನಾಗಿಯೇ ಸ್ವೀಕರಿಸಿದ್ದಾರೆ. ಆದರೀಗ ಈ ಗಣಿಕಳ್ಳರು ಮಾಡುತ್ತಿರುವ ಕೊಳಕು ರಾಜಕೀಯ ನಮ್ಮಲ್ಲಿ ಹೇಸಿಗೆ ಮೂಡಿಸಿದೆ.

60-70 ಮಂದಿ ಶಾಸಕರಿಗೆ ಯಡಿಯೂರಪ್ಪ ಬೇಡವೆಂದಾದರೆ ಅದನ್ನು ಸೂಕ್ತ ವೇದಿಕೆಗಳಲ್ಲಿ ಎತ್ತಲಿ. ಅದು ಬಿಟ್ಟು ಹೈದರಾಬಾದ್, ಗೋವಾದ ರೆಸಾರ್ಟುಗಳಲ್ಲಿ ಕುಳಿತು ರಾಜಕೀಯ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ. ಸದ್ಯಕ್ಕಿದು ಕುದುರೆ ವ್ಯಾಪಾರವಲ್ಲ, ಬದಲಿಗಿದು ಕತ್ತೆ ವ್ಯಾಪಾರ. ನೆರೆ ಪರಿಹಾರ ಕಾರ್ಯ ಮಾಡದೇ ಹೈದರಾಬಾದಿಗೆ ಹೋಗಿರುವ ಶಾಸಕ, ಮಂತ್ರಿಗಳನ್ನು ಜನತಾ ನ್ಯಾಯಾಲಯದಲ್ಲಿ ನಿಲ್ಲಿಸಿ ಉತ್ತರ ಪಡೆಯಬೇಕಾಗಿದೆ.

-ಶ್ರೀನಿವಾಸ, ಗಂಗಾವತಿ

ನವೆಂಬರ್ 11, 2009ರ ಪತ್ರಿಕೆಯಲ್ಲಿ ತಾವುಗಳು "ಎಂಇಎಸ್ ವಿದ್ಯಾ ಸಂಸ್ಥೆಯಲ್ಲೊಬ್ಬ ಧೂರ್ತ ವೆಂಕಟರೆಡ್ಡಿ" ಎಂಬ ಶೀರ್ಷಿಕೆಯಲ್ಲಿ ಟಿ.ಆರ್. ವೆಂಕಟರೆಡ್ಡಿ ಇವರ ಕಿರುಕುಳ, ದೌರ್ಜನ್ಯ ಹಾಗೂ ಅಪ್ಪಾವತಾರಗಳನ್ನು ಬಯಲಿಗೆ ತಂದು ನಮಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಾಯ ಮತ್ತು ಸಹಕಾರ ನೀಡಿರುತ್ತೀರಿ.

ತಮ್ಮ ಈ ಜನೋಪಕಾರಿ ಕಾರ್ಯಕ್ಕೆ, ಸಮಾಜದ ಉದ್ಧಾರಕ್ಕೆ, ಒಂದು ಶಿಕ್ಷಣ ಸಂಸ್ಥೆಯ ಪರಿವರ್ತನೆಗೆ ಹಾಗೂ ನಮ್ಮಗಳಿಗೆ ನೆಮ್ಮದಿಯ ಶಿಕ್ಷಣದ ಪರಿಸರ ಸೃಷ್ಟಿಸುವಲ್ಲಿ ತಮ್ಮ ಸಹಕಾರವು ಸದಾ ನಮ್ಮ ಮೇಲಿರಲೆಂದು ಬಯಸುತ್ತಾ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇವೆ.

-ಎಂಇಎಸ್ ಶಿಕ್ಷಣ ಸಂಸ್ಥೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ಬೆಂಗಳೂರು

ಅತಂತ್ರ ಅಲೆಮಾರಿಗಳು : ಸ್ಪಷ್ಟೀಕರಣ

ಕಳೆದ ವಾರ 'ಪತ್ರಿಕೆ' ಪ್ರಕಟಿಸಿದ 'ಬೆಂಗಳೂರು : ಅಲೆಮಾರಿ ಕುಟುಂಬಗಳು ಬೀದಿಗೆ' ಎಂಬ ವರದಿಯಲ್ಲಿ ಎರಡು ತಪ್ಪುಗಳು ನುಸುಳಿವೆ.

ವೀಡಿಯಾ ಫ್ಯಾಕ್ಟರಿ ಬಳಿಯ ಜಾಗದಿಂದ ಬಿಜೆಪಿ ನಾಯಕ ಪವನ್‌ಕುಮಾರ್ ಅಲೆಮಾರಿಗಳನ್ನು ಹಿಂಸಿಸಿ ಓಡಿಸಿದನಂತರ, ಕೆಲ ಅಲೆಮಾರಿ ಕುಟುಂಬಗಳು ಎಲ್ಲಿ ಹೋದವೆಂದು ಗೊತ್ತಾಗಿಲ್ಲ ಎಂದು ಬರೆಯಲಾಗಿತ್ತು. ಎಲ್ಲ 134 ಕುಟುಂಬಗಳೂ ಬೆಂಗಳೂರಲ್ಲೇ ಇದ್ದು ತಾವರೆಕೆರೆ, ಸುಂಕದಕಟ್ಟೆ, ಮಾದಾವರಗಳಲ್ಲಿ ವಾಸವಾಗಿವೆ. ಸ್ಲಂ ಬೋರ್ಡಿನವರು ಈ ಕುಟುಂಬಗಳಿಗೆ ನೀರು, ವಿದ್ಯುತ್ ನೆರವು ಒದಗಿಸುತ್ತಿದ್ದಾರೆ.

ಗಣೇಶ್, ಎಂ.ಸಿ. ನಾರಾಯಣ್ ಮತ್ತು ತಮ್ಮಯ್ಯ ಎಂಬುವವರನ್ನು ಗೂಂಡಾಗಳು, ಪವನ್‌ಕುಮಾರ್ ಚೇಲಾಗಳೆಂದು ತಪ್ಪಾಗಿ ಬರೆಯಲಾಗಿತ್ತು. ಆದರೆ ಸ್ಲಂ ಕ್ರಿಯಾ ವೇದಿಕೆ ಮೂಲಕ ಈ ಮೂವರು ಅಲೆಮಾರಿ ಕುಟುಂಬಗಳಿಗೆ ವಸತಿ ವ್ಯವಸ್ಥೆ ಮಾಡಲು ಹೋರಾಡುತ್ತ ಬಂದಿದ್ದು Jnurm ಯೋಜನೆಯಡಿ ಈಗಾಗಲೇ ಮನೆ ನಿರ್ಮಾಣ ಕಾರ್ಯವೂ ಸಾಗಿದೆ. ಅಲೆಮಾರಿಗಳಿಗೆ ತೊಂದರೆ ನೀಡಿದ ಪವನ್‌ಕುಮಾರ್ ವಿರುದ್ಧ ಇವರೆಲ್ಲ ಡಿ.ಸಿ.ಕೋರ್ಟ್‌ನಲ್ಲಿ ದೂರು ದಾಖಲಿಸಿ ಕಾನೂನಾತ್ಮಕ ಹೋರಾಟವನ್ನೂ ನಡೆಸುತ್ತಿದ್ದಾರೆ.

-ಸಂ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)



ಗಾಂಧಿ-ಗೋಡ್ಸೆ-ಗೋಡೆ

ಗಾಂಧಿನಗರದ ಜನ ಬೆಂಗಳೂರು ಮಹಾನಗರ ಪಾಲಿಕೆಯ ಮೀಷನರ್ ಭರತ್‌ಲಾಲ್ ಮೀನಾ ಅವರನ್ನು 'ಗೋಡ್ಸೆ' ತರಹ ಾಣುತ್ತಿದ್ದಾರೆ. ಇದಕ್ಕೆ ಕಾರಣ ಈ 'ಗೋಡ್ಸೆ' ಸಿನಿಮಾದವರು ೋಡೆ ಮೇಲೆ ಬರೆಯುವುದನ್ನು, ಭಿತ್ತಿಪತ್ರಗಳನ್ನು ಅಂಟಿಸುವುದನ್ನು ಷೇಧಿಸಿರುವುದು.

ಇದೊಂದೇ ಕಾರಣ ಸಾಕು ಈಗ ಮಾಯಾಲೋಕದ ಜನರೆಲ್ಲ ಕ್ಕೊರಲಿನಿಂದ "ನಮ್ಮ ಸಿನಿಮಾಗಳು ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಲು ೋಡೆ ಬರಹ ನಿಷೇಧಿಸಿದ ಮೀನಾ ಕ್ರಮವೇ ಮುಖ್ಯ ಕಾರಣ'' ಂದು ಹೊಸ ರಾಗ ತೆಗೆಯಲು ಆರಂಭಿಸಿದ್ದಾರೆ.

ಆದರೆ ಇವರ ಬೊಬ್ಬೆಗೆ ಕ್ಯಾರೇ ಅನ್ನದ ಮೀನಾ ಬೆಂಗಳೂರಿನ ೋಡೆಗಳ ಮೇಲೆ ಭಿತ್ತಿ ಪತ್ರ ಅಂಟಿಸುವ ನಿರ್ಮಾಪಕರ ವಿರುದ್ಧ ಸ್ತು ಕ್ರಮ ಕೈಗೊಳ್ಳುತ್ತಿದ್ದಾರೆ; ಅವರ ವಿರುದ್ಧ ಕೇಸುಗಳನ್ನೂ ಖಲಿಸುತ್ತಿದ್ದಾರೆ. ಮಾತ್ರವಲ್ಲ, ಮಹಾನಗರ ಪಾಲಿಕೆಯಿಂದ ಹಣ ಿದು ಎಲ್ಲಾ ಸರ್ಕಾರಿ ಕಟ್ಟಡಗಳ ಗೋಡೆಗಳ ಮೇಲೆ ಚಿತ್ರ ಚಿತ್ರ ವರ್ಣಕಲೆಗಳನ್ನು ಬಿಡಿಸುತ್ತಿದ್ದಾರೆ. ಅವುಗಳ ಬಣ್ಣ ಎಷ್ಟು ವಾಗಿವೆ ಎಂದರೆ ನಾವು ಬೆಂಗಳೂರಿನಲ್ಲಿದ್ದೇವೋ ಅಥವಾ ಪ್ಯಾರಿಸಿನಲ್ಲಿದ್ದೇವೋ ಎಂಬ ಅನುಮಾನ ಮೂಡಿಸುತ್ತವೆ. ಜೊತೆಗೆ ೋಡುಗರ ಕಣ್ಣುಗಳನ್ನು ಕುಕ್ಕಿಹಾಕುವಷ್ಟು ಕೆಟ್ಟದ್ದಾಗಿವೆ.

ಅದು ಬದಿಗಿರಲಿ, ಒಂದಂತೂ ಸತ್ಯ. ಈ ವಾಲ್‌ಪೋಸ್ಟರ್ ಿಂದಾಗಿಯೇ ಆದೆಷ್ಟೋ ಬಾರಿ ದೊಡ್ಡ ದೊಡ್ಡ ನಟರ ಿಮಾನಿಗಳ ನಡುವೆ ಗಲಾಟೆ ನಡೆದಿತ್ತು.



ಭರತ್ ಲಾಲ್

ಗೆಯೇ ಕಿಡಿಗೇಡಿಗಳು ತಮಗೆ ಆಗದ ಯಕ ನಾಯಕಿಯರ ವಾಲ್‌ಪೋಸ್ಟರ್‌ನ ಿದುಹಾಕುವುದು, ನಾಯಕಿಯರ ಂಖಕ್ಕೆ ಸಗಣಿ ಸಾರಿಸುವುದು ದಲಾದ ದುಷ ತ್ಯಗಳೂ ಗಾಂಧಿನಗರದ ಾವರಣವನ್ನು ಹದೆಗೆಡಿಸಿತ್ತು.

ಈ ವಾಲ್‌ಪೋಸ್ಟರ್ ಯುದ್ಧದಲ್ಲಿ ್ಬರ ಪೋಸ್ಟರ್ ಮೇಲೆ ಮತ್ತೊಬ್ಬರು ್ಮ ಪೋಸ್ಟರ್ ಅಂಟಿಸುತ್ತಿದ್ದರಿಂದ ಅದೆಷ್ಟೋ ಬಾರಿ ಅಪಾರ್ಥಕ್ಕೆಡೆ ಡುತ್ತಿದ್ದವು. ಉದಾಹರಣೆಗೆ 'ದೇವರು ಕೊಟ್ಟ ತಂಗಿ' ಚಿತ್ರದ ೋಸ್ಟರ್ ಪಕ್ಕವೇ 'ಕಿಡ್ನಾಪ್' ಚಿತ್ರದ ಪೋಸ್ಟರ್ ಅಂಟಿಸಲಾಗಿದ್ದು ನ್ನು 'ದೇವರು ಕೊಟ್ಟ ತಂಗಿ- ಕಿಡ್ನಾಪ್' ಎಂದು ಕೆಲವರು ಿಕೊಂಡಿದ್ದರೂ ಆಚ್ಚರಿ ಇಲ್ಲ. ಹಾಗೆಯೇ 'ಕನ್ನಡದ ಾಬೇಡಿ-ತಬ್ಬಲಿ', 'ನಂ ಯಜಮಾನ್ರು-ಸೈಕೋ', 'ಎದ್ದೇಳು ಜುನಾಥ- ಹೊಡಿಮಗ', 'ದುಬಾಯ್‌ಬಾಬು-ಡಮಾರ್', ್ಪೇಟೆ ಸಾಬಾ ಗಳು-ಮಟಾಷ್' ಅಂತೆಲ್ಲಾ ಚಿತ್ರಗಳ ಹೆಸರು ದೇ ಸಾಲಿನಲ್ಲಿ ಕಾಣಿಸಿಕೊಂಡರೆ (ಅವು ಒಂದು ರೀತಿಯಲ್ಲಿ ್ದ ವಿಮರ್ಶೆ ತರಹ ಇದ್ದರೂ!) ಎಷ್ಟೊಂದು ಆಭಾಸಗಳ ಟುಮಾಡುತ್ತವೆ ಎಂದು ನೀವೇ ಊಹಿಸಿ.

ಈಗ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಕ್ರಾಂತಿಯುಂಟಾಗಿದೆ. ದಲಿ ಒಂದೇ ಒಂದು ರೂಪಾಯಿ ವೆಚ್ಚದಲ್ಲಿ ಲಕ್ಷಾಂತರ ಜನರಿಗೆ ಮ್ಮೆಸ್ ಮುಖಾಂತರ ನೇರವಾಗಿ ತಮ್ಮ ಚಿತ್ರದ ಬಗ್ಗೆ ಒಬ್ಬ ೇಶಕ ತಿಳಿಸಬಹುದು. ಹಾಗೆಯೇ ಯಾವುದೇ ಖರ್ಚಿಲ್ಲದೇ ್ನ ಚಿತ್ರದ ಮಾಹಿತಿಯನ್ನು ಈ-ಮೇಲ್ ಮುಖಾಂತರವೂ ಾವಂತ ಜನರಿಗೆ ತಲುಪಿಸಬಹುದು. ಟಿವಿ ಚಾನೆಲ್‌ಗಳಂತೂ ಮಾದವರ ಮುಖವಾಣಿಯಾಗಲು ಹಾತೊರೆಯುತ್ತಿದ್ದು ಅಂತಹ ಕಾಶವನ್ನು ಇವರು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳ ುದು. ಈವೆಂಟ್ ಮ್ಯಾನೇಜ್‌ಮೆಂಟ್ ಮಾಡುವ ಜಾಹೀರಾತು ್ಥೆಗಳಿಗಂತೂ ನಮ್ಮಲ್ಲಿ ಕೊರತೆಯೇನೂ ಇಲ್ಲವೇ ಇಲ್ಲ.

ಇಷ್ಟೆಲ್ಲಾ ಅನುಕೂಲಗಳಿದ್ದರೂ ಕೂಡಾ ನಮ್ಮ ಸಿನಿಮಾದವರು ್ನ ಚಿತ್ರಗಳು ಸೋಲುತ್ತಿರುವುದು ವಾಲ್‌ಪೋಸ್ಟರ್‌ಗಳನ್ನು ೇಧಿಸಿದ್ದರಿಂದ ಎಂದು ಹೇಳುತ್ತಿರುವುದು ಹಾಸ್ಯಾಸ್ಪದವಾಗಿದೆ.

● ಶೆಣೈ

'ಪರಿಚಯ'ದಲ್ಲೇ ಪೀಕುವ ಆನಂದ



ಆನಂದ್

"ಗಾಂಧಿನಗರದವರ ಪ್ರಕಾರ ನಾನು ಫ್ರಾಡು. ಸಿನಿಮಾ ಜನ ನನ್ನನ್ನು ಫೋರ್‌ಟ್ವೆಂಟಿ ಅಂತಾ ಕರೀತಾರೆ....'' ಹೀಗೆ ಥೇಟ್ ಉಪೇಂದ್ರನ ಸಿನಿಮಾದ ಡೈಲಾಗಿನಂತೆ ತನ್ನನ್ನು ತಾನೇ ವರ್ಣಿಸಿಕೊಳ್ಳುವ ವಿಲಕ್ಷಣ ಪ್ರಜೆಯ ಹೆಸರು ಆನಂದ್ ಕುಮಾರ್ ಅಲಿಯಾಸ್ ಗಂಗವಾಡಿ ಆನಂದ.


ಗುರು ಆಡಿಯೋ ಎಂಬ ಕೆಸೆಟ್ ಕಂಪನಿಯನ್ನು ಆರಂಭಿಸಿ ಬರೀ ಒಂದೂವರೆ ವರ್ಷದಲ್ಲಿ ಹತ್ತಾರು ಜನರ ಜೇಬನ್ನೇ ಚೌರಾ ಮಾಡಿರುವ ವಂಚಕ ಆನಂದ ಈ ವಾರ ಬಿಡುಗಡೆಯಾಗುತ್ತಿರುವ 'ಪರಿಚಯ' ಚಿತ್ರದ ನಿರ್ಮಾಪಕ ಜಿ.ಸಿ. ಕೃಷ್ಣಮೂರ್ತಿಯವರ ಮೇಲೆ ಹೂಡಿದ್ದ ಕೇಸು ಡಿಸ್‌ಮಿಸ್ ಆಗಿದೆ. ಸಾಮಾನ್ಯವಾಗಿ ವಂಚನೆಗೊಳಗಾದವರು ಪೊಲೀಸು, ಕೇಸು ಎಂದು ತಲೆಕೆಡಿಸಿಕೊಳ್ಳುವುದು ಮಾಮೂಲು. ಆದರೆ ವಂಚಕನೇ ನ್ಯಾಯಾಲಯದಲ್ಲಿ ದಾವೆ ಹೂಡಿ ಎದುರಾಳಿಗಳನ್ನು ಬ್ಲ್ಯಾಕ್ ಮೇಲ್ ಮಾಡುವುದು ಬಹುಶಃ ಗಾಂಧಿನಗರಕ್ಕೂ ಹೊಸತೇ!



ಸಂಜಯ್


ಮೊದಲು 'ಪರಿಚಯ'!

ಇದು ಒಂದೂವರೆ ವರ್ಷದ ಹಿಂದಿನ ಮಾತು. ಗೋಲ್ಡನ್ ಸ್ಟಾರ್ ಗಣೇಶ್ ನಟನೆಯ 'ಹುಡುಗಾಟ' ಚಿತ್ರವನ್ನು ನಿರ್ದೇಶಿಸಿದ್ದ ಸಂಜಯ್ ಮುಂದಿನ ಚಿತ್ರಕ್ಕಾಗಿ ಅಣಿಯಾಗುತ್ತಿದ್ದರು. ಆ ಸಂದರ್ಭದಲ್ಲಿ ಸಂಜಯ್‌ರನ್ನು 'ಪರಿಚಯ' ಮಾಡಿಕೊಂಡ ಆನಂದ "ನಾವಿಬ್ಬರೂ ಸೇರಿ ಸಿನಿಮಾ ಮಾಡೋಣ. ಈಗಲೇ ಚಿತ್ರಕಥೆ ಮಾಡಲು ಕುಳಿತುಬಿಡಿ'' ಎಂದಿದ್ದ. ಆನಂದ ತೋರಿದ ಇಂಟರೆಸ್ಟು ನೋಡಿ ಸಂಜಯ್ ಮತ್ತವರ ಟೀಂನವರು ಮೂರೇ ತಿಂಗಳಲ್ಲಿ ಸಿನಿಮಾ ಮಾಡಿ ಮುಗಿಸಿ ಬಿಡುತ್ತಾನೇನೋ ಎಂದುಕೊಂಡಿದ್ದರು. ಚಿತ್ರಕಥೆ, ಸಂಭಾಷಣೆ, ಮ್ಯೂಸಿಕ್ ಕಂಪೋಸಿಂಗು... ಹೀಗೆ ಚಿತ್ರದ ತಯಾರಿ ಮಾಡಲು ಹೋಟೇಲುಗಳಲ್ಲಿ ರೂಂ ಹಾಕಿದರೆ ದುಬಾರಿಯಾಗುತ್ತೆ ಎಂಬ ಕಾರಣಕ್ಕೆ ಸ್ವತಃ ಆನಂದನೇ ಮಲ್ಲೇಶ್ವರಂನಲ್ಲೊಂದು ಮನೆಯನ್ನು ಬಾಡಿಗೆಗೆ ಹಿಡಿದಿದ್ದ. ಅದೇ ಮನೆಯಲ್ಲಿ ಸಂಜಯ್‌ರ ತಂಡ ಹುರುಪಿನಿಂದ ಕೆಲಸ ಮಾಡತೊಡಗಿತು. ಇವರ ಊಟೋಪಚಾರ ಇತ್ಯಾದಿ ಸಹಾಯಕ್ಕಾಗಿ ಆನಂದ ತನ್ನ ಕಡೆಯ ಹುಡುಗನೊಬ್ಬನನ್ನು ತಂದು ಅಲ್ಲಿ ಬಿಟ್ಟಿದ್ದ.



ಕೃಷ್ಣಮೂರ್ತಿ

ಎರಡನೇ ತಿಂಗಳಿನ ಬಾಡಿಗೆ ಕೊಟ್ಟಿಲ್ಲ ಎಂದು ಮನೆ ಮಾಲೀಕ ಬಂದು ರೊಳ್ಳೆ ತೆಗೆಯುವ ತನಕ ಆನಂದ ಪಾಖಂಡಿ ಆಸಾಮಿ ಎಂಬ ವಿಚಾರ ಸಂಜಯ್‌ಗಾಗಲಿ, ಅವರೊಟ್ಟಿಗೆ ಕೆಲಸ ಮಾಡುವವರಿಗಾಗಲಿ ಗೊತ್ತಾಗಲೇ ಇಲ್ಲ. ಒಮ್ಮೆ ಸಂಗೀತ ನಿರ್ದೇಶಕ ಜೆಸ್ಸಿ ಗಿಫ್ಟ್ ಚೆನ್ನೈನಿಂದ ಬಂದಿಳಿದಾಗ, ವಿಮಾನ ನಿಲ್ದಾಣದಿಂದ ಅವರನ್ನು ಮಲ್ಲೇಶ್ವರಂಗೆ ಕರೆತರಲೂ ಆನಂದನ ಕೈಲಿ ಬಿಡಿಗಾಸಿರಲಿಲ್ಲ. ಇದನ್ನು ಕಂಡ ನಿರ್ದೇಶಕ ಸಂಜಯ್ ತಾವೇ ಹೋಗಿ ಜೆಸ್ಸಿಯನ್ನು ಪಿಕ್‌ಅಪ್ ಮಾಡಿಕೊಂಡು ಬಂದಿದ್ದರು. ಕಡೆಕಡೆಗೆ ಕೆಲಸ ನಿರ್ವಹಿಸುತ್ತಿದ್ದ ಚಿತ್ರತಂಡಕ್ಕೆ ಕಾಫಿ, ತಿಂಡಿಯೂ ಇಲ್ಲದಂತಾಗಿ ಹೋಯಿತು.



ಮಳವಳ್ಳಿ ಸಾಯಿಕೃಷ್ಣ

'ಪರಿಚಯ'ಕ್ಕಾಗಿ ಸಂಭಾಷಣೆ ಬರೆಯುತ್ತಿದ್ದ ಮಳವಳ್ಳಿ ಸಾಯಿ ಕೃಷ್ಣ ಅವರಿಗಂತೂ ಅಡ್ವಾನ್ಸ್ ಅಮೌಂಟನ್ನು ಇವತ್ತು ಕೊಡ್ತೀನಿ, ನಾಳೆ ಕೊಡ್ತೀನಿ ಎಂದು ಸತಾಯಿಸಿಬಿಟ್ಟಿದ್ದ. ಸಾಯಿಕೃಷ್ಣನ ಬಳಿ ಸಂಭಾಷಣೆಯ ಕೆಲಸ ಕಲಿಯಲು ಬಂದಿದ್ದ ಹುಡುಗನೊಬ್ಬ ಬಸ್ ಚಾರ್ಜಿಗೂ ಕಾಸಿಲ್ಲದೆ ಹೇಳದೇಕೇಳದೇ ಪರಾರಿಯಾಗಿದ್ದ. ಇಷ್ಟೆಲ್ಲಾ ಆದರೂ ಸಾಯಿಕೃಷ್ಣ ಮತ್ತು ತಂಡದ ಇತರೆ ಮಂದಿ ನಿರ್ದೇಶಕ ಸಂಜಯ್ ಸಜ್ಜನ ಎಂಬ ಒಂದೇ ಕಾರಣಕ್ಕಾಗಿ ಕೆಲಸ ಮುಂದುವರೆಸಿದ್ದರು.

ಯಾವಾಗ ಸ್ಕ್ರಿಪ್ಟು ಮಾಡುವ ಜಾಗಕ್ಕೇ ಆನಂದನನ್ನು ಹುಡುಕಿಕೊಂಡು ಸಾಲಕೊಟ್ಟವರು ಬಂದು ಧಮಕಿ ಹಾಕಲು ಆರಂಭಿಸಿದರೋ "ಇನ್ನು ಆನಂದನನ್ನು ನಂಬುವುದರಲ್ಲಿ ಅರ್ಥವಿಲ್ಲ'' ಎಂಬುದು ಎಲ್ಲರಿಗೂ ಖಾತ್ರಿಯಾಗಿ ಹೋಗಿತ್ತು. ಒಮ್ಮೆ ಜೆಸ್ಸಿ ಗಿಫ್ಟ್ ನೀಡಿದ ಟ್ಯೂನ್‌ಗೆ ಗೀತರಚನೆಕಾರ ಕವಿರಾಜ್ 'ನಡೆದಾಡುವಾ ಕಾಮನಬಿಲ್ಲು' ಹಾಡು ಬರೆಯುತ್ತಿದ್ದ ಸಂದರ್ಭದಲ್ಲಿ ಮನೆಯೊಳಕ್ಕೆ ಬಂದ ಫೈನಾನ್ಷಿಯರ್ ಒಬ್ಬ ಜೋರಾಗಿ ಅರಚಾಡಿ ರಾದ್ಧಾಂತ ಎಬ್ಬಿಸಿದ್ದ.

ಪ್ರೊಫೆಷನಲ್ ವಂಚಕ!


ಹಾಗೆ ನೋಡಿದರೆ ಗಂಗವಾಡಿ ಆನಂದನಿಗೆ ವಂಚನೆಯೆಂಬುದು ಹೊಸತೇನೂ ಅಲ್ಲ. ಗುರು ಆಡಿಯೋ ಕಂಪೆನಿ ಆರಂಭಿಸಿದಾಗ ಕಾಶೀನಾಥ್ ಮಗ ಅಲೋಕ್ ನಟಿಸಿದ್ದ 'ಬಾಜಿ' ಚಿತ್ರದ ಆಡಿಯೋ ಹಕ್ಕನ್ನು ಪಡೆದದ್ದು ಮಾತ್ರವಲ್ಲದೇ, ಆ ಚಿತ್ರದ ನಿರ್ಮಾಪಕರಿಂದ ಏಳು ಲಕ್ಷ ಪಡೆದು ತಿರುಪತಿಯ ದಾರಿ ತೋರಿದ್ದ. ನಂತರ ಆನಂದನ ಹಲ್ಕಟ್ ಬುದ್ಧಿಯನ್ನರಿತ ನಿರ್ಮಾಪಕ ವೆಂಕಟೇಶ್ ಮತ್ತವನ ಸಂಗಡಿಗರು ಆನಂದನ ಮೈ ಮೂಳೆ ಮುರಿದು ಕೊಟ್ಟ ಹಣವನ್ನು ವಸೂಲಿ ಮಾಡಿದ್ದರು. 'ಜೊತೆಯಾಗಿ ಹಿತವಾಗಿ' ಚಿತ್ರದ ಆಡಿಯೋ ರೈಟ್ಸ್ ಪಡೆದ ಆನಂದ ಹದಿಮೂರು ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಅಗ್ರಿಮೆಂಟ್ ಮಾಡಿಸಿದ್ದ. ಆಡಿಯೋ ರಿಲೀಸ್ ಆದ ಮೇಲೆ ಈತನ ವರಸೆಗಳು 'ಜೊತೆಯಾಗಿ ಹಿತವಾಗಿ' ತಂಡಕ್ಕೆ ಗೊತ್ತಾಗಲಾರಂಭಿಸಿದವು. ಆಡಿಯೋ ರಿಲೀಸ್ ಆದರೂ ಯಾವುದೇ ಊರಿನಲ್ಲಿ ಕ್ಯಾಸೆಟ್ ವಿತರಣೆಗೊಂಡಿರಲಿಲ್ಲ. ಕಡೆಗೆ 'ಜತೆಯಾಗಿ ಹಿತವಾಗಿ' ಚಿತ್ರದ ನಿರ್ಮಾಣದ ಸಾರಥ್ಯ ವಹಿಸಿದ್ದ ಕುಲಕರ್ಣಿ ಮತ್ತವರ ಸ್ನೇಹಿತರು ಮಲ್ಲೇಶ್ವರಂನಲ್ಲಿದ್ದ ಆನಂದನ ಆಫೀಸಿಗೇ ನುಗ್ಗಿ ಅತನನ್ನು ಒಳಗೆ ಕೂಡಿ ಹಾಕಿ ಸಮಾ ಲಾತ ಕೊಟ್ಟು, ಇದ್ದಬದ್ದ ಕ್ಯಾಸೆಟ್ ಮತ್ತು ಸೀಡಿಗಳನ್ನು ತೆಗೆದುಕೊಂಡು ಬಂದು ಲಹರಿ ಸಂಸ್ಥೆಗೆ ವರ್ಗಾ ಮಾಡಿದ್ದರು. ಇದೆಲ್ಲಾ ಒಂದು ರೀತಿಯದ್ದಾದರೆ, ಆಡಿಯೋ ರಿಲೀಸ್ ಸಮಾರಂಭಗಳನ್ನು ನಡೆಸಿ, ಚೆಲ್ ಹೋಟೆಲ್‌ಗೆ ಒಂದು ರೂಪಾಯಿ ಬಿಲ್ಲೂ ಪಾವತಿಸದೆ ವಂಚಿಸಿದ್ದಾನೆ. ಶಾಂತಲಾ ಸಿಲ್ಕ್ಸ್ ಎದುರಿಗಿರುವ ಸಿಟಿ ಸೆಂಟ್ರಲ್ ಹೋಟೆಲ್‌ಗೆ ಕೂಡಾ ಈತ ಹಣ ಪಾವತಿಸಿಲ್ಲ. ಒಂದಿಷ್ಟು ಕನ್ನಡಾಭಿಮಾನದಿಂದ 'ಆಮೋ' ಚಿತ್ರವನ್ನು ನಿರ್ಮಿಸಿದ್ದ ಮಹೇಂದ್ರ ಮನೋತ್ ಎಂಬ ಮಾರ್ವಾಡಿಯನ್ನಂತೂ ಈ ಆನಂದ ಮನಸೋ ಇಚ್ಛೆ ಸುಲಿದುಬಿಟ್ಟಿದ್ದ. ಇನ್ನು 'ಸಾಚಾ' ಚಿತ್ರದ ಮಾದೇಶ್‌ಗೆ ಆರು ಲಕ್ಷ, 'ಯುವ' ಚಿತ್ರದ ನಿರ್ಮಾಪಕರಿಗೆ ಮೂರು ಲಕ್ಷ.... ಹೀಗೆ ಗಂಗವಾಡಿ ಆನಂದನ ವಂಚನೆಯ ಪಟ್ಟಿ ಬರೆದಷ್ಟೂ ಉದ್ದವಾಗುತ್ತಾ ಹೋಗುತ್ತದೆ.

ಇಂದು ಚಿತ್ರವೊಂದರ ಕೆಸೆಟ್ ರೈಟ್ಸ್‌ಗೆ ಒಂದೋ ಎರಡೋ ಲಕ್ಷ ಸಿಕ್ಕರೆ ಹೆಚ್ಚು ಎನ್ನುವಂತಾಗಿದೆ. ಇಂಥದ್ದರಲ್ಲಿ ಸುಖಾಸುಮ್ಮನೆ ನಿರ್ಮಾಪಕರ ತಲೆ ಸವರಿ "ನಿಮ್ಮ ಚಿತ್ರದ ಆಡಿಯೋಗೆ ಇಪ್ಪತ್ತು ಲಕ್ಷ ಕೊಡ್ತೀನಿ, ಮೂವತ್ತು ಲಕ್ಷ ಕೊಡ್ತೀನಿ'' ಎಂದೆಲ್ಲಾ ಭೋಂಗು ಬಿಡುವ ಆನಂದ ನಿರ್ಮಾಪಕರನ್ನು ಪೀಡಿಸಿ ಅವರಿಗೆ ಚೆಕ್ ಕೊಟ್ಟು ಆಡಿಯೋ ಬಿಡುಗಡೆ ಮಾಡುತ್ತಾನೆ. ಆಮೇಲೆ ನೂರಿನ್ನೂರು ಸಿಡಿಗಳನ್ನು ತಯಾರಿಸಿ ಮೆಜೆಸ್ಟಿಕ್, ಬಿಗ್‌ಬಜಾರ್, ಮಾರ್ಕೆಟ್ ಏರಿಯಾಗಳಲ್ಲಿ ಬಿಕರಿ ಮಾಡುತ್ತಾನೆ. ಕ್ಯಾಸೆಟ್‌ನ ಒರಿಜಿನಲ್ ಮಾಸ್ಟರ್ ಈತನ ಬಳಿಯೇ ಇರುತ್ತದಾದ್ದರಿಂದ ಹಾಡುಗಳ ಮ್ಯೂಸಿಕ್ ಟ್ರ್ಯಾಕ್‌ಗಳನ್ನು ಆರ್ಕೆಸ್ಟ್ರಾ ತಂಡಗಳಿಗೆ ಮಾರುತ್ತಾನೆ. ಇನ್ನು ಆಡಿಯೋ ಬಿಡುಗಡೆಯಾಗುತ್ತಿದ್ದಂತೇ ಎಫ್‌ಎಂ ಚಾನೆಲ್‌ಗಳಿಗೆ ಹಾಡುಗಳು ವ್ಯಾಪಾರವಾಗಿರುತ್ತದೆ. ಹೀಗೆ ಬಂದ ಕಡೆಯಲ್ಲೆಲ್ಲಾ ಗೆಬರಿಕೊಳ್ಳುವ ಆನಂದ ನೀಡಿದ್ದ ಚೆಕ್ ಅನ್ನು ಬ್ಯಾಂಕಿಗೆ ಹಾಕಿದರೆ ಅದು ಸಖತ್ತಾಗಿ ಬೌನ್ಸ್ ಮೇಲೆ ಬೌನ್ಸ್ ಆಗತೊಡಗುತ್ತದೆ. ಅಲ್ಲಿಗೆ ಕೋಟಿಗಟ್ಟಲೆ ಬಂಡವಾಳ ಹೂಡಿದ ನಿರ್ಮಾಪಕ ತಲೆಮೇಲೆ ಚಪ್ಪಡಿ ಎಳೆದುಕೊಂಡಂತಾಗಿರುತ್ತದೆ.

ನಿರ್ದೇಶಕ ಸಂಜಯ್‌ನಂಥ ಬಾಯಿಲ್ಲದ ಮನುಷ್ಯ, ಚಿತ್ರರಂಗದ ಒಳಹೊರಗು ಗೊತ್ತಿಲ್ಲದ ಕೃಷ್ಣಮೂರ್ತಿಯಂಥ ಹೊಸ ನಿರ್ಮಾಪಕರು ಇರುವತನಕ ಗುರು ಆಡಿಯೋನ ಗಂಗವಾಡಿ ಆನಂದನಂಥವರ ಹೊಟ್ಟೆ ಬರಿಯುತ್ತಲೇ ಇರುತ್ತದೆ.

ಇಂಥ ಆನಂದ "'ಪರಿಚಯ' ಸಿನಿಮಾದ ಹಕ್ಕು ನನ್ನದು' ಎಂದು ಕೇಸು ಹೂಡಿದ್ದ. ಈತನ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿ ನ್ಯಾಯಾಲಯದ ಸಮಯ ವ್ಯರ್ಥ ಮಾಡಿದ್ದಕ್ಕಾಗಿ ಆನಂದನಿಗೇ ಛೀಮಾರಿ ಹಾಕಿ ಕಳಿಸಿದೆ.

● ಅರುಣ್.ಜೆ




ಕನ್ನಡಕ್ಕಾಗಿ ಕಣ್ಣೀರಿಟ್ಟ ಸುರ್ವೆ

ಏಳ್ ಸಿನಿಮಾ ಕಾ ಸುಲ್ತಾನ್ ರಮೇಶ್ ಸುರ್ವೆಯ 'ಮಂದಾಕಿನಿ' ಚಿತ್ರ ಬಿಡುಗಡೆಗೊಂಡು ಎಕ್ಕಾಗದಿಯಾಗಿ ಒಂದು ವರ್ಷವೇ ಕಳೆಯುತ್ತಿದ್ದರೂ ಸುರ್ವೆ ಮಾತ್ರ ಅದರ ಹ್ಯಾಂಗೋವರ್‌ನಿಂದ ಹೊರಬಂದಂತೆ ಕಾಣುತ್ತಿಲ್ಲ. ಸುರ್ವೆ ನಿರ್ದೇಶಿಸಿದ್ದ 'ಮಂದಾಕಿನಿ' ಚಿತ್ರದಲ್ಲಿ ಕನ್ನಡ-ಕರ್ನಾಟಕದ ದಿವ್ಯ ಸಂದೇಶವನ್ನು ಸಾರುವ 10 ನಿಮಿಷದ ದೀರ್ಘ ಹಾಡನ್ನು ಅಳವಡಿಸಿದ್ದರು. ್ನು ಕರ್ನಾಟಕದ 18 ಜಿಲ್ಲೆಗಳಲ್ಲಿ ಚಿತ್ರೀಕರಣವನ್ನೂ ಮಾಡಿದ್ದರು. ಜನ 'ಮಂದಾಕಿನಿ'ಯನ್ನಂತೂ ಿಲ್ಲ, ಆದರೆ ಕನ್ನಡ ಹಬ್ಬ ರಾಜ್ಯೋತ್ಸವದ ದಿನದಂದು ಒಂದೇ ಒಂದು ಚಾನೆಲ್‌ಗಳೂ ಾ ಹಾಡು ಪ್ರಸಾರವಾಗಲಿಲ್ಲವಂತೆ. ಾದರಿಂದ ಬೇಸತ್ತ ಸುರ್ವೆ ಎಳೆ ಮಕ್ಕಳಂತೆ ಕಾರ್ತೀಕದ ಮೆಟ್ಟಿಲುಗಳಲ್ಲೆಲ್ಲಾ ಒಂದೇ ಸಮನೆ ್ತು ಉಳ್ಳಾಡಿಬಿಟ್ಟರಂತೆ.



ವೀರಬಾಹು

ವೃತ್ತಿಜೀವನ ಮತ್ತು ವೈಯಕ್ತಿಕ ಜೀವನದ ಜಂಜಾಟದಲ್ಲಿ ಸಿಲುಕಿ ನಲುಗಿ ಅಜ್ಞಾತವಾಸದಲ್ಲಿದ್ದ ನಿರ್ದೇಶಕ ಎಸ್.ಮಹೇಂದರ್ ಮತ್ತೆ ಮಾಯಾಲೋಕ ಗಾಂಧಿನಗರದಲ್ಲಿ ಪ್ರತ್ಯಕ್ಷರಾಗಿದ್ದಾರೆ. ಅವರ ನಿರ್ದೇಶನದ 'ವೀರಬಾಹು' ಎಂಬ ಹೊಸ ಚಿತ್ರ ಮುಂದಿನ ತಿಂಗಳು ಸೆಟ್ಟೇರಲಿದೆ. ಸಿಕ್ಸ್‌ಪ್ಯಾಕ್ಸ್ ವ್ಯಾಯಾಮ ಮಾಡಿ ತನ್ನ ದೇಹದಾರ್ಢ್ಯವನ್ನು ಗಟ್ಟಿಗೊಳಿಸಿಕೊಂಡಿರುವ 'ಪೈಲ್ವಾನ್' ವಿಜಯ್ ಈ ಚಿತ್ರದ ನಾಯಕ.



ಮಹೇಂದರ್ ವೃತ್ತಿ ಜೀವನ ಮುಗಿದೇ ಹೋಯ್ತು ಎಂದು ಗಾಂಧಿನಗರದ ಜನ ಮಾತಾಡಿಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಸ್ನೇಹಹಸ್ತ ಚಾಚಿ ಮತ್ತೆ ಮೇಲೇಳಲು ಕಾರಣರಾದವರು ಮಹೇಂದರ್‌ರ ಹಳೆಯ ದೋಸ್ತ್ ಸಂದೇಶ್ ನಾಗರಾಜ್. ಸದ್ಯಕ್ಕೆ ವಿಜಯ್ ಗಾಂಧಿನಗರದಲ್ಲಿ ಗೆಲ್ಲುವ ಕುದುರೆ ಎನಿಸಿಕೊಂಡಿರುವುದರಿಂದ ಮಹೇಂದರ್ ತನ್ನ ಪುನರಾಗಮನಕ್ಕೆ ಒಳ್ಳೆ ಕುದುರೆಯ ಬಾಲವನ್ನೇ ಹಿಡಿದಿದ್ದಾರೆ ಎನ್ನಬಹುದು. ಅದೇನೆ ಇರಲಿ, ವೈಯಕ್ತಿಕವಾಗಿ ಸಾಕಷ್ಟು ನೋವನ್ನು ನುಂಗಿರುವ ಮಹೇಂದರ್ ಈ 'ವೀರಬಾಹು'ವಿನ ದೆಸೆಯಿಂದಾಗಿ ಹೊಸ ಜೀವಶಕ್ತಿಯನ್ನು ಪಡೆಯುವಂತಾಗಲಿ.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 18-11-2009 RNI No. KARKAN/2003/1

ಬುಲೆಟ್ ಪ್ರಕಾಶನ ಬಿರಿಯಾನಿ ಸೇವೆ!

ಕಾಮಿಡಿ ನಟ ಬುಲೆಟ್ ಪ್ರಕಾಶ ದಿನಬಿಟ್ಟು ದಿನ ಪರಪ್ಪನ ಅಗ್ರಹಾರದ ಜೈಲು ಆವರಣದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ!

ವಿಚಾರವೇನೆಂದರೆ, ಈ ಹಿಂದೆ 'ಮಾದೇಶ' ಚಿತ್ರದ ನಿರ್ಮಾಣ ಸಂದರ್ಭದಲ್ಲಿ ಬುಲೆಟ್ ಪ್ರಕಾಶನ ಅಮೋಘ ಅಭಿನಯಕ್ಕೆ ಮಾರುಹೋದ ನಿರ್ಮಾಪಕ ಗೋವರ್ಧನ ಮೂರ್ತಿ ಬುಲೆಟ್‌ನನ್ನು ಕರೆದು ಒಂದು ಸೈಟು ದಾನ ಮಾಡಿದ್ದನಂತೆ.

ನಂತರ ಅದೇ ಗೋವರ್ಧನ ವಿನೋದ್ ಎಂಬ ಅಮಾಯಕ ಹುಡುಗನನ್ನು ವಿನಾಕಾರಣ ಗುಂಡಿಕ್ಕಿ ಕೊಂದಿದ್ದು, ನಂತರ ಸೆಂಟ್ರಲ್ ಜೈಲಿನಲ್ಲಿ ಪರ್ಮನೆಂಟ್ ಸ್ಥಾನ ಗಿಟ್ಟಿಸಿದ್ದು ಎಲ್ಲರಿಗೂ ತಿಳಿದಿರುವ ವಿಚಾರ.




ಆದರೆ ಸೈಟು ಕೊಟ್ಟ ಧಣಿಯ ಋಣ ಭಾರ ಇಳಿಸಿಕೊಳ್ಳಲು ದಢೂತಿ ಪ್ರಕಾಶ ವಾರಕ್ಕೆ ಮೂರು ಬಾರಿ ಕಾಕಾ ಹೋಟೆಲಿನಲ್ಲಿ ಬಿರಿಯಾನಿ ಕಟ್ಟಿಸಿಕೊಂಡು ಹೋಗಿ ಗೋವರ್ಧನ ಮೂರ್ತಿಗೆ ಅರ್ಪಿಸಿಬರುತ್ತಿದ್ದಾನಂತೆ.



ಗೋವರ್ಧನ ಕೊಲೆಗಾರ ಎಂಬುದು ಗೊತ್ತಿದ್ದರೂ ಸೈಟಿನ ಋಣಕ್ಕಾಗಿ ಬಿರಿಯಾನಿ ಸೇವೆ ಮಾಡುತ್ತಿರುವ ಬುಲೆಟ್ಟು ನಿಜಕ್ಕೂ ಗ್ರೇಟು!!

ನಾಯಿ ಗೊಟಕ್ ಪೂಜಾ ಪಟಕ್!



ಪಂಜಾಬಿ ಹುಡುಗಿ ಪೂಜಾ ಗಾಂಧಿಯನ್ನು ನಮ್ಮ ಜನ ಹೊಗಳಿ ಹೊಗಳಿ ಅಟ್ಟಕ್ಕೇರಿಸುತ್ತಿದ್ದಂತೇ ಆಕೆಯ ತಿಮಿರೂ ಮಿತಿಮೀರುತ್ತಿದೆ.

'ತವರಿನ ಋಣ' ಚಿತದಲ್ಲಿ ಪೂಜಾ ಗಾಂಧಿಯನ್ನು ನಾಯಕಿಯನ್ನಾಗಿ ಹಾಕಿಕೊಂಡ ಒಂದೇ ಕಾರಣಕ್ಕೆ ಚಿತ್ರದ ನಿರ್ಮಾಪಕ ವರದರಾಜು ಸೇರಿದಂತೆ ಎಲ್ಲರೂ ಹೈರಾಣಾಗಿಹೋಗಿದ್ದಾರೆ.

'ತವರಿನ ಋಣ'ಕ್ಕೆ ಪೂಜಾ ಗಾಂಧಿಯ ಕಾಟ ಮುಹೂರ್ತದ ದಿನದಂದೇ ಆರಂಭವಾಗಿತ್ತು, ಮೊದಲ ದೃಶ್ಯಕ್ಕೆ ನಿರ್ದೇಶಕ ಸೀರೆ ತೊಡು ಎಂದರೆ, ಈ ಯಮ್ಮ "ಇಲ್ಲ, ಎರಡು ದಿನ ಮೊದಲೇ ಹೇಳಿದ್ದರೆ ಸೀರೆ ಉಡುತ್ತಿದ್ದೆ'' ಎಂದು ಖ್ಯಾತೆ ತೆಗೆದಿದ್ದಳು. ಕಡೆಗೆ ಮುಹೂರ್ತದ ದಿನವೇ ಎಲ್ಲರ ಮುಂದೆ ಮರ್ಯಾದೆ ಕಳೆದುಕೊಳ್ಳುವುದು ಯಾಕೆ? ಎಂದು ನಿರ್ದೇಶಕ ಆಕೆ ಬಂದಿದ್ದ ಟ್ರಾಕ್‌ಪ್ಯಾಂಟ್‌ನಲ್ಲೇ ಶೂಟಿಂಗ್ ಮಾಡಿದ್ದ.



ನಂತರ ತನಗೆ ಬರಬೇಕಿರುವ 15 ಲಕ್ಷ ರೂಪಾಯಿ ಸಂಭಾವನೆಯನ್ನು ಮುಂಗಡವಾಗಿ ಕೊಟ್ಟರೆ ಮಾತ್ರ ಶೂಟಿಂಗ್‌ಗೆ ಬರ್ತೀನಿ ಎಂದು ನಖರಾ ತೆಗೆದಿದ್ದಳು. ಚಿತ್ರೀಕರಣದಲ್ಲಿ ಇದ್ದಕ್ಕಿದ್ದ ಹಾಗೆ ಮುನಿಸಿಕೊಂಡು ರೆಸ್ಟ್ ರೂಮು ಸೇರಿಬಿಟ್ಟರೆ, ಪ್ಯಾಕಪ್ ಆಗುವ ಹೊತ್ತಿಗೇ ಈಕೆ ಹೊರಬರುತ್ತಿದ್ದುದು.

ಮೊನ್ನೆ ನವೆಂಬರ್ ನಾಲ್ಕನೇ ತಾರೀಖು ಈಕೆ ಇನ್ನೊಂದು ವರಸೆ ತೆಗೆದಿದ್ದಾಳೆ. ಅಂದು ಬೆಳಗ್ಗೆ ಆಕೆಯ ಮುದ್ದಿನ ನಾಯಿ 'ಜೆರ್ಸಿ' ಸತ್ತುಹೋಯಿತಂತೆ. ಹೀಗಾಗಿ "ನನಗೆ ಇವತ್ತು ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ಮೂಡ್ ಇಲ್ಲ'' ಎಂದು ನೆಪ ಹೇಳಿ ಅರ್ಧಕ್ಕೇ ಎದ್ದುಹೋಗಿದ್ದಾಳೆ.

ಮೊದಲೇ ಬಡಪಾಯಿ ನಿರ್ಮಾಪಕ ವರದರಾಜು ಪೂಜಾಳಿಂದ ನೊಂದಿರುವಾಗ ಆಕೆಯ ನಾಯಿಯ ಸಾವು ಅವರನ್ನು ಮತ್ತಷ್ಟು ನಷ್ಟ ಮತ್ತು ದುಃಖಕ್ಕೆ ದೂಡಿದೆ. ●

ಮಧೂನ ಡಬ್ಬಿಂಗ್ 'ಮರ್ಮ'!

ಡಬ್ಬಿಂಗ್ ಸಿನಿಮಾವೊಂದನ್ನು ಕನ್ನಡ ಚಿತ್ರ ಎಂದು ಹೇಳಿ ಸರ್ಕಾರ ಮತ್ತು ಪ್ರೇಕ್ಷಕರನ್ನು ಯಾಮಾರಿಸುವ ಮತ್ತೊಂದು ಅನಾಹುತಕಾರಿ ಪ್ರಯತ್ನ ಸದ್ದಿಲ್ಲದೆ ನಡೆಯುತ್ತಿದೆ.

ಅದು "ಆ ಮರ್ಮ' ಎನ್ನುವ ಚಿತ್ರದ ಮೂಲಕ.

ಕನ್ನಡದಿಂದ ಹೋಗಿ ತೆಲುಗಿನಲ್ಲಿ ಒಂದಷ್ಟು ಫ್ಲಾಪ್ ಸಿನಿಮಾಗಳನ್ನು ನಿರ್ದೇಶಿಸಿ, ನಿರ್ಮಿಸಿರುವ ಮಧುಸೂದನ್ ಅಲಿಯಾಸ್ ಮದನ್ ಎಂಬ ಆಸಾಮಿಯೇ ಈಗ ಏಕಕಾಲದಲ್ಲಿ ಸರ್ಕಾರ ಮತ್ತು ಚಿತರಂಗವನ್ನು ಯಾಮಾರಿಸಲು ಹೊರಟಿರುವವನು.



ನಿರ್ದೇಶಕ ಮದನ್ ಹಾಗೂ ನಿರ್ಮಾಪಕ ಮಧುಸೂದನ್ ಎಂಬ ಎರಡು ಹೆಸರಿನಲ್ಲಿ ಒಬ್ಬನೇ ವ್ಯಕ್ತಿ ಬಂದು ಕುಳಿತು ಪತ್ರಿಕಾಗೋಷ್ಠಿ ನಡೆಸಿದಾಗಲೇ ಇದರಲ್ಲಿ 'ಏನೋ ಮರ್ಮ ಇದೆ' ಎಂಬ ಸಂಶಯ ಎಲ್ಲ ಪತ್ರಕರ್ತರಿಗೂ ಗೋಚರಿಸಿತ್ತು, ಈಗದು ನಿಜವಾಗಿದೆ.

ಡೈಲಾಗ್ ಕಿಂಗ್ ಸಾಯಿಕುಮಾರ್, ಜಾಕಿ ಶ್ರಾಫ್, ರಾಮಿ ರೆಡ್ಡಿ, ರಘುನಾಥ ರೆಡ್ಡಿ, ತಿರುಪತಿ ಪ್ರಕಾಶ್.... ಹೀಗೆ ಥ್ರಿಲ್ಲರ್ ಮಂಜು ಒಬ್ಬರನ್ನು ಹೊರತುಪಡಿಸಿ ಬಹುತೇಕ ತೆಲುಗು ನಟರೇ ನಟಿಸಿರುವ 'ಆ ಮರ್ಮ' ಚಿತ್ರವನ್ನು ಒಟ್ಟು ಇಪ್ಪತ್ತೊಂದು ದಿನ ಚಿತ್ರೀಕರಿಸಿದ್ದಾರಂತೆ. ಅದರಲ್ಲಿ ಎಂಟತ್ತು ದಿನಗಳು ಮಾತ್ರ ಬೆಂಗಳೂರಿನಲ್ಲಿ ಚಿತ್ರೀಕರಣಗೊಂಡರೆ ಉಳಿದ ಭಾಗದ ಶೂಟಿಂಗ್ ಪೂರ್ತಿ ಹೈದ್ರಾಬಾದಿನಲ್ಲೇ ನಡೆದಿದೆ. ಅಲ್ಲದೇ ಚಿತ್ರಕ್ಕೆ ದುಡಿದಿರುವ ಅಷ್ಟೂ ಜನ ತೆಲುಗಿನ ತಂತ್ರಜ್ಞರೇ.



ಮೊನ್ನೆ ನಡೆದ 'ಆ ಮರ್ಮ'ದ ಪತ್ರಿಕಾಗೋಷ್ಠಿಯಲ್ಲಿ ಸಹನಟನೊಬ್ಬ "ನಾವು ಈ ಚಿತ್ರವನ್ನು ತೆಲುಗಿನಲ್ಲಿ 'ಮರ್ಮಂ' ಎಂಬುದಾಗಿ ಮಾಡಿದ್ದೇವೆ'' ಎಂದುಬಿಟ್ಟ. ಅಲ್ಲಿಗೆ ಇದು ತೆಲುಗು ಸಿನಿಮಾವೊಂದನ್ನು ಕನ್ನಡಕ್ಕೆ ಡಬ್ ಮಾಡಲು ಹೊರಟಿರುವ ಸಂಚು ಎಂಬುದು ಖಾತ್ರಿಯಾಗಿತ್ತು.



ನಿರ್ದೇಶಕ ಮದನ್‌ನನ್ನು "ಏನಯ್ಯಾ, ನಿನ್ನ ಸಿನಿಮಾದಲ್ಲಿ ನಟಿಸಿರುವ ಕಲಾವಿದನೇ ಹೀಗೆ ಹೇಳುತ್ತಿದ್ದಾನೆ?'' ಎಂದು ಪ್ರಶ್ನಿಸಿದರೆ, "ಹಾಗೆಲ್ಲಾ ಇಲ್ಲ, ತೆಲುಗಿನಲ್ಲಿ ಈ ಸಿನಿಮಾವನ್ನು ನಿರ್ಮಿಸಬೇಕು ಎಂದು ಪ್ಲಾನ್ ಮಾಡಿದ್ದಿ ಅಷ್ಟೇ. ಆದರೆ ಮಾಡಿಲ್ಲ'' ಎಂದು ಸ್ಪಷ್ಟೀಕರಣ ನೀಡಿದ್ದ.



ಆದರೆ ಇಂಟರ್‌ನೆಟ್‌ನಲ್ಲಿ **'telugu film marmam'** ಎಂದು ಟೈಪು ಮಾಡಿದರೆ ಮಧುಸೂದನ್ ಎಂಥಾ ಟೋಪಿ ಗಿರಾಕಿ ಎನ್ನುವುದು ಗೊತ್ತಾಗುತ್ತದೆ. ಈತ "ನಾವು ತೆಲುಗಿನಲ್ಲಿ ಈ ಸಿನಿಮಾವನ್ನು ಮಾಡೇ ಇಲ್ಲ, ಇದು ಅಪ್ಪಟ ಕನ್ನಡ ಚಿತ್ರ'' ಎಂದು ಲೊಟಲೊಟನೆ ಬೊಗಳೆ ಬಿಟ್ಟಿದ್ದ. ಆದರೆ ಹತ್ತಾರು ವೆಬ್‌ಸೈಟುಗಳಲ್ಲಿ ಇದು ತೆಲುಗಿನ ಒರಿಜಿನಲ್ ಚಿತ್ರ ಎಂಬುದಕ್ಕೆ ಪುರಾವೆಗಳಿವೆ. ಅಸಲಿಗೆ ತೆಲುಗಲ್ಲಿ ಈ ಚಿತ್ರವನ್ನು 'ನಾಗಾರ್ಜುನ ಸಿನಿ ಕ್ರಿಯೇಶನ್ಸ್'ನ ಶ್ರೀರಂಗಂ ಸತೀಶ್ ಕುಮಾರ್ ಎಂಬಾತ ನಿರ್ಮಿಸಿದ್ದಾನೆ. ಈ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿ ಚಾನೆಲ್ ರೈಟ್ಸ್ ಮತ್ತು ಸರ್ಕಾರದ ಸಬ್ಸಿಡಿ ಹಣವನ್ನು ದೋಚುವ ಉದ್ದೇಶದಿಂದ ಮಧುಸೂದನ್ ಈ ತಂತ್ರ ರೂಪಿಸಿದ್ದಾನೆ.

ಈ ಬಗ್ಗೆ "ಏನಯ್ಯಾ, ಹೀಗೆ ಇಡೀ ಕನ್ನಡ ಚಿತ್ರರಂಗಕ್ಕೇ ಮಕ್ಮಲ್ ಟೋಪಿ ಹಾಕುತ್ತಿದ್ದೀಯಲ್ಲ, ಇದು ಸರೀನಾ?'' ಎಂದು ಕೇಳಿದರೆ "ನನಗೆ ತೆಲುಗಿನಲ್ಲಿ ಚಿತ್ರ ಮಾಡುತ್ತಿರುವ ವಿಚಾರ ಗೊತ್ತೇ ಇಲ್ಲ, ಪ್ರೋಸ್ಸ್‌ಲಿ ಸ್ಟೋರಿ ರೈಟರ್ ಹೀಗೆ ಮಾಡಿರಬಹುದು. ಇಂಟರ್‌ನೆಟ್‌ನಲ್ಲಿ ಬಂದಿರುವ ಸುದ್ದಿಗಳೆಲ್ಲಾ ಸುಳ್ಳು, ನನಗೆ ಆ ಬಗ್ಗೆ ಗೊತ್ತೇ ಇಲ್ಲ'' ಎಂದು ಮಂಗಿಲು ಶುರು ಮಾಡುತ್ತಾನೆ. ಹೀಗೆ ತೆಲುಗಿನಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿರುವುದು ನನಗೆ ಗೊತ್ತೇ ಇಲ್ಲ ಎಂದು ಈತ ನೆಪಮಾತ್ರಕ್ಕೆ ವಾದಿಸುತ್ತಿದ್ದನಾದರೂ ಮೂಲ ಚಿತ್ರವಾದ 'ಮರ್ಮಂ' ಅನ್ನು ಕೂಡಾ ಇದೇ ಮದನ್ ನಿರ್ದೇಶಿಸಿದ್ದಾನೆ.

ಕಂಬಿಯೇ ಇಲ್ಲದಂತೆ ರೈಲು ಬಿಡುತ್ತಿರುವ ಮಧುಸೂದನ್ ಕನ್ನಡಿಗರೆಲ್ಲರೂ ಶತಮೂರ್ಖರು ಎಂದು ಭಾವಿಸಿರುವಂತಿದೆ. ಇಲ್ಲದೇ ಹೋಗಿದ್ದರೆ ಈ ಪರಿಯ ಚೀಟಿಂಗ್ ಕೆಲಸಕ್ಕೆ ಈತ ಇಳಿಯುತ್ತಿರಲಿಲ್ಲ.

ಇದು ಮೂರನೇ ಬಾರಿ!

ಸುಮಾರು ಹತ್ತು ವರ್ಷಗಳ ಹಿಂದೆಯೇ ನಿರ್ದೇಶಕ ಎಸ್.ವಿ. ರಾಜೇಂದ್ರ ಸಿಂಗ್ ಬಾಬು 'ಭಾರತ್ 2000' ಎಂಬ ಚಿತ್ರವನ್ನು ತೆಲುಗಿನಲ್ಲಿ ಚಿತ್ರೀಕರಿಸಿ ನಂತರ ಅದನ್ನು ಕನ್ನಡಕ್ಕೆ ಡಬ್ ಮಾಡಿ ದೊಡ್ಡ ವಿವಾದಕ್ಕೆ ಕಾರಣರಾಗಿದ್ದರು.

ಇತ್ತೀಚೆಗೆ ಅಂಥ ಸಾಹಸಕ್ಕೆ ಕೈ ಹಾಕಿದ್ದು ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್. ಚಂದ್ರಶೇಖರ್. ಬಿ. ರಾಮಮೂರ್ತಿ ನಿರ್ದೇಶನದ ಬೇಬಿ ಶ್ಯಾಮಿಲಿ ನಟಿಸಿರುವ 'ಶ್ವೇತನಾಗರ' ಎಂಬ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿ ಚಾನೆಲ್ ರೈಟ್ಸ್ ಪಡೆದಿದ್ದರು. ಈ ಚಿತ್ರ ಡಬ್ಬಿಂಗ್ ಚಿತ್ರವೆಂದು ನಾಗಾಭರಣ ನೇತೃತ್ವದ ಸಮಿತಿ ಬಹಳ ಹಿಂದೆ ವರದಿಯನ್ನು ನೀಡಿತ್ತು. ಕರ್ನಾಟಕದಲ್ಲಿ ಡಬ್ಬಿಂಗ್ ಚಿತ್ರಗಳ ಪ್ರಸಾರಕ್ಕೆ ಅವಕಾಶವಿಲ್ಲದಿರುವುದರಿಂದ ಸುವರ್ಣ ಚಾನೆಲ್‌ನಲ್ಲಿ 'ಶ್ವೇತನಾಗರ' ಚಿತ್ರ ಪ್ರಸಾರವಾಗಿ ಚಿತ್ರರಂಗದಲ್ಲಿ ಕೋಲಾಹಲವನ್ನೇ ಎಬ್ಬಿಸಿತ್ತು.

ಮೊದಮೊದಲು ಕೆ.ಸಿ.ಎನ್. ಚಂದ್ರಶೇಖರ್, ಅಜಂತಾ ರಾಜು ಮತ್ತು ಎಚ್.ಎನ್. ಮಾರುತಿ ಎಂಬ ಹಿರಿಯ ತಲೆಗಳು 'ಶ್ವೇತನಾಗರ' ಡಬ್ಬಿಂಗ್ ಚಿತ್ರ ಅಲ್ಲವೇ ಅಲ್ಲ ಎಂದು ವಾದಿಸಿದ್ದರು. ನಂತರ ಬಂಡವಾಳ ಬಟಾಬಯಲಾದಾಗ ಈ ಮೂವರೂ ತಾವು ಮಹಾನ್ ಪ್ರಾಮಾಣಿಕರು ಎಂಬಂತೆ "ತಪ್ಪಾಗಿದೆ ಕ್ಷಮಿಸಿ'' ಎಂದು ಅಂಗಲಾಚಿದ್ದರು.

ಚಿತ್ರರಂಗದ ರಕ್ಷಕರೆಂಬಂತೆ ಪೋಸು ಕೊಡುವ ಕೆ.ಸಿ.ಎನ್. ಚಂದ್ರು ಮತ್ತವರ ಪಟಾಲಮ್ಮೇ ಡಬ್ಬಿಂಗ್ ಮಾಡಿದ ಮೇಲೆ ತಾವೇನು ಕಡಿಮೆ ಎಂದು ಮಧುಸೂದನ್‌ನಂತಹ ಕೆಲಸಕ್ಕೆ ಬಾರದ ಮಂದಿಯೂ ಕನ್ನಡಿಗರ ತಲೆಗೆ ಅರಿಶಿನ ಗಂಧ ಬಳಿಯಲು ಮುಂದಾಗಿದ್ದಾರೆ.

ಇಂಥ ವಿಚಾರವನ್ನು ವಾಣಿಜ್ಯ ಮಂಡಳಿ ಗಂಭೀರವಾಗಿ ಪರಿಗಣಿಸದೇ ಹೋದಲ್ಲಿ ಈಗಾಗಲೇ ತೋಪೆದ್ದುಹೋಗಿರುವ ಕನ್ನಡ ಚಿತ್ರರಂಗದಲ್ಲಿ 'ಡಬ್ಬಿಂಗ್ ಮಾರಿ' ಮತ್ತಷ್ಟು ರುದ್ರತಾಂಡವವಾಡುವುದರಲ್ಲಿ ಸಂಶಯವಿಲ್ಲ.

● ಅರುಣ್‌ಕುಮಾರ್ ಜಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...